
"ಯೆಹೋವನೇ ನೀನು ನೀತಿಸ್ವರೂಪನು"

ಪ್ರೀತಿಯ ಪಥವನ್ನು ಆಚರಿಸಲು ಇದನ್ನು ಓದಿರಿ

# ಪ್ರೀತಿಯ ಯಶಸ್ಸು





ಲೇಖಕರು
ಪಾಸ್ಟರ್.ಪಿ.ತೇಜಸ್ಸ್

# ದೇವರ ನಾಮಕ್ಕೆ ಸ್ತೋತ್ರ

# ಪ್ರೀತಿಯ ಯಶಸ್ಸು

**"ಅರ್ಪಣೆ"**

"ದೇವರು ಲೋಕದ ಮೇಲೆ ಎಷ್ಟೋ
ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು
ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ
ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು"
(ಯೋಹಾನ 3:16)

ಈ ಪುಸ್ತಕವು ನಿಮ್ಮ ಕೈಗಳಲ್ಲಿ ಸೇರುವಂತೆ
ಸಹಾಯಮಾಡಿದ ನನ್ನ ಯೇಸುರಾಜನಿಗೆ ನನ್ನ
ಹೃದಯಪೂರ್ವಕವಾದ ಕೃತಜ್ಞತೆಗಳನ್ನು
ಸಲ್ಲಿಸುತ್ತೇನೆ.

**ಲೇಖಕರು**

**ಪಾಸ್ಟರ್.ಪಿ.ತೇಜಸ್ಸ್**

# ದೇವರ ನಾಮಕ್ಕೆ ಸ್ತೋತ್ರ

# ಪ್ರೀತಿಯ ಯಶಸ್ಸು

ಪುಸ್ತಕ -3
ಎರಡನೆಯ ಮುದ್ರಿಕೆ-2019 5000
ಪುಟಗಳು - 64

ಓದಿರುವಿರಾ :-

1) ನಂಬಿಕೆಯ ರಹಸ್ಯ
2) ಅದ್ಭುತ ಸಾಕ್ಷಿ
3) ಪ್ರೀತಿಯ ಯಶಸ್ಸು
4) ಕಣ್ಣೀರಿನ ಕೂಗು
5) ನಾನು ನನ್ನ ಸರ್ವಸ್ವ
6) ಯಾವುದು ಬೇಕು?
7) ಜ್ಞಾನ ಸ್ತೋತ್ರದ ಯಜ್ಞಗಳು
8) ಪ್ರಾರ್ಥನೆಯ ನಿಧಿಯು ನಿನ್ನದೇ
9) ನಿನ್ನ ಹಾಗೆ ಯಾರು ಇಲ್ಲ

ಹೆಚ್ಚಿ ವಿವರಗಳಿಗಾಗಿ ಸಂಪರ್ಕಿಸಿರಿ :
ಫೋನ್ ನಂಬರ್ : 9900241593
9880245222

# ಪರಿಚಯ

ಪ್ರೀತಿಯ ದೇವರ ಮಕ್ಕಳೇ, "ಪ್ರೀತಿಯ ಯಶಸ್ಸು" ಎನ್ನುವ ಈ ಪುಸ್ತಕದ ಮುಖಾಂತರ ನಿಮ್ಮ ಬಳಿಯಲ್ಲಿ ಮಾತನಾಡಲು ಅವಕಾಶ ಮಾಡಿ ಕೊಟ್ಟಿರುವ ನನ್ನ ಸೃಷ್ಟಿಕರ್ತನಿಗೆ ಲೆಕ್ಕವಿಲ್ಲದಷ್ಟು ಸ್ತೋತ್ರಗಳನ್ನು ಸಲ್ಲಿಸುತ್ತೇನೆ. ತಂದೆಯಾದ ದೇವರ ಪ್ರೀತಿಯು ಅಪಾರವಾದದ್ದು; ಆತನು ತನ್ನ ಒಬ್ಬನೇ ಮಗನನ್ನು ನಮಗಾಗಿ ಬಲಿಯಾಗಿ ಕೊಟ್ಟು ಕ್ರಿಸ್ತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವಕ್ಕೆ ಸೇರಬೇಕೆಂದು ತವಕ ಪಡುತ್ತಾ ನಮಗೋಸ್ಕರ ತನ್ನ ಸ್ವಂತ ಮಗನನ್ನು ಕೊಟ್ಟಂತಹ ನಮ್ಮ ತಂದೆಯು ನಮ್ಮ ಮೇಲೆ ಎಂಥಹ ಪ್ರೀತಿಯನ್ನು ತೋರಿಸಿದ್ದಾರೆಂದು ನಾವು ಮರೆಯಬಾರದು.

ನಮ್ಮ ತಂದೆಯ ತ್ಯಾಗವು "ಪ್ರೀತಿಯ ಯಶಸ್ಸ"ನ್ನು ಪಡೆದಿದೆ. ಇಂತಹ 'ಯಶಸ್ಸು' ನಿನ್ನಲ್ಲಿಯೂ ಸಹಾ ಬರಲಿ; ತಂದೆಯಾದ ದೇವರು ಮಾಡಿದ ತ್ಯಾಗವನ್ನು ನೆನಪು ಮಾಡಿಕೊಂಡು ಈ ದಿನವೇ ನಿನ್ನ ಜೀವನವನ್ನು ಬದಲಾಯಿಸಿಕೊಂಡು ಉತ್ತಮವಾದ ವ್ಯಕ್ತಿಯಾಗಿ ಈ ಲೋಕವನ್ನು ಜಯಿಸಲು ಪ್ರಯತ್ನಿಸು. ಕರ್ತನಿಗಾಗಿ ನೀನು ಏನಾದರೂ ಸೇವೆ ಮಾಡಬೇಕು ಎನ್ನುವ ಹಂಬಲದಿಂದ ಈ ಪುಸ್ತಕವನ್ನು ಓದು. ನೀನು ಕರ್ತನ ನಾಮದಲ್ಲಿ ಮಾಡುವಂಥಹ ಕಾರ್ಯದಲ್ಲಿ 'ಪ್ರೀತಿಯ ಯಶಸ್ಸು' ಕಂಡು ಬರಲಿ ಎಂದು ಹಾರೈಸುತ್ತೇನೆ.

ಕರ್ತನಲ್ಲಿ ನಿಮ್ಮ ಪ್ರೀತಿಯ
ಪಾಸ್ಟರ್ ಸಹೋದರಿ. ಪಿ.ತೇಜಸ್ಸ್

# ಅನಿಸಿಕೆ

ಮಹೋನ್ನತನಾದ ದೇವರು ನಮ್ಮನ್ನು ಬಹಳವಾಗಿ ಪ್ರೀತಿಮಾಡುತ್ತಾರೆ, ಅದಕ್ಕಾಗಿಯೇ ಅನೇಕ ಆತ್ಮೀಕ ಪುಸ್ತಕಗಳು ಪಾಸ್ಟರ್.ಪಿ.ತೇಜಸ್ಸ್ ರವರಿಂದ ಹೊರಬರುತ್ತಿದೆ. ನಾವು ಈ ಪುಸ್ತಕಗಳ ಮುಖಾಂತರ ಆಶೀರ್ವದಿಸಲ್ಪಡಬೇಕೆಂದು ನಮ್ಮಲ್ಲಿ ಉತ್ತಮವಾದ ನೂತನ ಬದಲಾವಣೆಗಳು ಕಂಡು ಬರಬೇಕೆಂದು ಕರ್ತನಲ್ಲಿ ಎಡೆಬಿಡದೆ ನಮಗೋಸ್ಕರ ಪಾಸ್ಟರ್.ಪಿ.ತೇಜಸ್ಸ್ ರವರು ಪರಿಶ್ರಮಿಸುತ್ತಿದ್ದಾರೆ. ಈ ರೀತಿ ಹೊರ ಬರುತ್ತಿರುವ ಈ ಪುಸ್ತಕಗಳಿಗಾಗಿ ನಮ್ಮೆಲ್ಲರ ಪ್ರಾರ್ಥನೆ ಸಹಕಾರ ಲೇಖಕರಿಗೆ ಅತ್ಯವಶ್ಯಕವಾಗಿ ಬೇಕಾಗಿದೆ. "ಪ್ರೀತಿಯ ಯಶಸ್ಸು" ಎನ್ನುವ ಈ '3' ನೆಯ ಪುಸ್ತಕವು ಆತ್ಮೀಕವಾಗಿದೆ ನಮ್ಮನ್ನು ಕರ್ತನೆಡೆಗೆ ನೇರವಾಗಿ ನಡೆಸುತ್ತದೆ ಎಂದು ನನ್ನ ಅನಿಸಿಕೆಯಾಗಿದೆ.

ಈ ಪುಸ್ತಕವನ್ನು ಓದುತ್ತಿರುವ ನಿಮ್ಮನ್ನು ಮತ್ತು ದೇವರಾತ್ಮನ ಸಹಾಯದಿಂದ ಈ ಪುಸ್ತಕವು ನಿಮ್ಮೆಲ್ಲರ ಕೈ ತಲುಪುವಂತೆ ಮಾಡಿದ ಪಾಸ್ಟರ್.ಪಿ.ತೇಜಸ್ಸ್ ರವರನ್ನೂ ಕರ್ತನು ಚಿಯೋನಿನಿಂದ ಅತ್ಯಧಿಕವಾಗಿ ಆಶೀರ್ವದಿಸಲೆಂದು ಹಾರೈಸುತ್ತೇನೆ.

ಕರ್ತನ ಸೇವಕಿಯಾದ
ಪಾಸ್ಟರ್. ಎ.ಪರಿಮಳ

# -: ಪೀಠಿಕೆ :-

1) ಕರುಣೆಯುಳ್ಳ ಪ್ರೀತಿ

2) ಅಪಾರವಾದ ಪ್ರೀತಿ

3) ಪರಲೋಕದ ಪ್ರೀತಿ

4) ಶಾಶ್ವತವಾದ ಪ್ರೀತಿ

5) ಸ್ನೇಹಿತನ ಪ್ರೀತಿ

6) ಹೃದಯದ ಪ್ರೀತಿ

7) ಸತ್ಯಮಾರ್ಗದ ಪ್ರೀತಿ

8) ವಂಚನೆಯ ಪ್ರೀತಿ

9) ಮರಣಗೆದ್ದ ಪ್ರೀತಿ

# 1. ಕರುಣೆಯುಳ್ಳ ಪ್ರೀತಿ

"ಯಾವನ ಮೇಲೆ ನನ್ನ ಕರುಣೆ ಉಂಟೋ ಅವನನ್ನು ಕರುಣಿಸುವೆನು" (ರೋಮಾ 9:15)

ಸರ್ವಶಕ್ತನಾದ ದೇವರ ಮಗುವೇ ಯೇಸುಕ್ರಿಸ್ತನು ಕರುಣೆಯುಳ್ಳ ದಯಾಪರನಾಗಿದ್ದಾನೆ. ಆತನ ಕರುಣೆ ನಿನ್ನ ಮೇಲೆ ಬಂದಿದೆ, ನಿನ್ನ ಹೃದಯವನ್ನು ಆತನಿಗೆ ಒಪ್ಪಿಸು. ಆಗ ನಿಜವಾದ ಪ್ರೀತಿ ನಿನ್ನಲ್ಲಿ ತುಂಬುತ್ತದೆ, ಮತ್ತು ನೀನು ಆ 'ಕರುಣೆಯುಳ್ಳ ಪ್ರೀತಿ'ಯನ್ನು ರುಚಿಸಿ ನೋಡಿ ನೀನೇ ಆತನಿಗೆ ಉತ್ತಮವಾದ ಸಾಕ್ಷಿಯಾಗಿ ನಿಲ್ಲುವುದಕ್ಕೆ ಸಾಧ್ಯವಾಗುತ್ತದೆ. ನಿನ್ನ ಮೇಲೆ ಕರ್ತನ ಕರುಣೆ ಇರುವುದರಿಂದ ನೀನು ಕರ್ತನನ್ನು ಮತ್ತು ನಿನ್ನ ನೆರೆಯವನನ್ನು ಪ್ರೀತಿಸಲೇಬೇಕೆಂಬ ಆಜ್ಞೆ ನಿನಗೆ ವಿಧಿಸಲಾಗಿದೆ.

"ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು. ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಲೂಕ 10:27)

ನೋಡಿರಿ :- ಒಬ್ಬ ವ್ಯಕ್ತಿ ತಾನೇ ನೀತಿವಂತನು ಎಂದು ಸ್ವಂತ ಆಲೋಚನೆಯಲ್ಲಿ ತಿಳಿದು ಕರ್ತನನ್ನು ಪರೀಕ್ಷೆ ಮಾಡುತ್ತಿದ್ದಾನೆ, ಈ ಕೆಳಗಿನ ಸಂಭಾಷಣೆಯನ್ನು ಗಮನಿಸೋಣ!

ವ್ಯಕ್ತಿ –> ಗುರುವೇ ನಾನು ನಿತ್ಯಜೀವಕ್ಕೆ ಬಾಧ್ಯನಾಗುವಂತೆ ಏನು ಮಾಡಬೇಕು?

ಕರ್ತನು –> ಶಾಸ್ತ್ರದಲ್ಲಿ ಏನು ಬರೆದದೆ? ಹೇಗೆ ಓದಿದ್ದೀ?

ವ್ಯಕ್ತಿ –> ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದ, ಪೂರ್ಣ ಪ್ರಾಣದಿಂದ, ಪೂರ್ಣ ಶಕ್ತಿಯಿಂದ, ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು, ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂದು ಬರೆದದೆ ಎಂದು ಉತ್ತರಕೊಟ್ಟನು.

ಕರ್ತನು –> ನೀನು ಸರಿಯಾಗಿ ಉತ್ತರಕೊಟ್ಟೆ; ಇದರಂತೆ ನೀನು ಮಾಡು ಹೀಗೆ ಮಾಡಿದರೆ ನಿತ್ಯಜೀವಕ್ಕೆ ಬಾಧ್ಯನಾಗುವಿ ಅಂದರು.

ವ್ಯಕ್ತಿ –> ಇದನ್ನು ಕೇಳಿ ಮನಸ್ಸಿನಲ್ಲಿ ದುರಾಲೋಚನೆ ಇಟ್ಟುಕೊಂಡು ನನ್ನ ನೆರೆಯವನು ಯಾರು? ಎಂದು ಪ್ರಶ್ನಿಸಿದನು.

ಸರ್ವಶಕ್ತನಾದ ದೇವರ ಮಗುವೇ, ಇಲ್ಲಿ ಸ್ವಲ್ಪ ಚಿಂತಿಸಿನೋಡು ಅವನು ನಿಜವಾಗಲೂ ಕರ್ತನನ್ನು ಪ್ರೀತಿ ಮಾಡುತ್ತಿದ್ದಾನಾ? ಪ್ರೀತಿ ಮಾಡುವುದಾದರೆ ಪ್ರಶ್ನೆ ಹಾಕುತ್ತಿರಲಿಲ್ಲ. ಪರಲೋಕ ದೇವರನ್ನೇ ಪರೀಕ್ಷಿಸುವ ವ್ಯಕ್ತಿಗೆ ನೆರೆಯವರು ಯಾರೆಂದು ಕರ್ತನು ತಿಳಿಸಬೇಕಾಗಿತ್ತು, ಆದರೆ ಕರ್ತನು ಕರುಣೆಯುಳ್ಳವನು ಆದುದರಿಂದ ಅವನ ಪ್ರಶ್ನೆಗೆ ಎಷ್ಟು ತಾಳ್ಮೆಯಿಂದ ಉತ್ತರ ನೀಡಿದರೆಂದು ಕೆಳಗಿನ ಸಂಭಾಷಣೆಯಿಂದ ಗಮನಿಸೋಣ.

ಕರ್ತನು –> "ಒಬ್ಬಾನೊಬ್ಬ ಮನುಷ್ಯನು ಯೆರೋಸಲೇಮಿನಿಂದ ಘಟ್ಟಾ ಇಳಿದು ಯೆರಿಕೋವಿಗೆ ಹೋಗುತ್ತಿರುವಾಗ ಕಳ್ಳರ ಕೈಗೆ ಸಿಕ್ಕಿದನು, ಅವರು ಅವನನ್ನು ಸುಲಿಗೆ ಮಾಡಿಕೊಂಡು ಗಾಯವಾಗುವಷ್ಟು ಹೊಡೆದು ಅವನನ್ನು ಅರೆಜೀವಮಾಡಿ ಬಿಟ್ಟು ಹೋದರು, ಆಗ ಹೇಗೋ ಒಬ್ಬ ಯಾಜಕನು ಆ ದಾರಿಯಲ್ಲಿ ಇಳಿದು ಬರುತ್ತ ಅವನನ್ನು ಕಂಡು ವಾರೆಯಾಗಿ ಹೋದನು. ಅದೇ ರೀತಿಯಲ್ಲಿ ಒಬ್ಬ ಲೇವಿಯನೂ ಆ ಸ್ಥಳಕ್ಕೆ ಬಂದು ಅವನನ್ನು ಕಂಡು ವಾರೆಯಾಗಿ ಹೋದನು. ಆದರೆ ಒಬ್ಬ ಸಮಾರ್ಯದವನು ಪ್ರಯಾಣ ಮಾಡುತ್ತಾ ಅವನಿದ್ದಲ್ಲಿಗೆ ಬಂದು ಅವನನ್ನು ಕಂಡು ಕನಿಕರಿಸಿ ಅವನ ಹತ್ತರಕ್ಕೆ ಹೋಗಿ ಅವನ ಗಾಯಗಳಲ್ಲಿ ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಹೊಯ್ದು ಕಟ್ಟಿ ತನ್ನ ಸ್ವಂತ ವಾಹನದ ಮೇಲೆ ಹತ್ತಿಸಿಕೊಂಡು ಛತ್ರಕ್ಕೆ ಕರೆದುಕೊಂಡು ಹೋಗಿ ಅವನನ್ನು ಆರೈಕೆಮಾಡಿದನು. ಮರುದಿನ ಅವನು ಎರಡು ಹಣಗಳನ್ನು ತೆಗೆದು ಛತ್ರದವನಿಗೆ ಕೊಟ್ಟು – ಇವನನ್ನು ಆರೈಕೆಮಾಡು; ಇದಕ್ಕಿಂತ ಹೆಚ್ಚಾಗಿ ಏನಾದರೂ ವೆಚ್ಚ ಮಾಡಿದರೆ ನಾನು ಹಿಂತಿರುಗಿ ಬಂದಾಗ ನಿನಗೆ ಕೊಡುವೆನು ಅಂದನು. ಈ ಮೂವರಲ್ಲಿ ಯಾವನು ಕಳ್ಳರ ಕೈಗೆ ಸಿಕ್ಕಿದವನಿಗೆ ನೆರೆಯವನಾದನೆಂದು ನಿನಗೆ ತೋರುತ್ತದೆ" ಎಂದು ಈ ವ್ಯಕ್ತಿಯ ಬಳಿ ಯೇಸುಕ್ರಿಸ್ತನು ಕರುಣೆಯಿಂದ ಕೇಳಿದಾಗ;

ವ್ಯಕ್ತಿ –> ಅವನಿಗೆ ದಯ ತೋರಿಸಿದವನೇ, ಎಂದು ಉತ್ತರ ಕೊಟ್ಟನು.

ಕರ್ತನು–> ಹೋಗು ನೀನು ಅದರಂತೆ ಮಾಡು ಎಂದು ಕರ್ತನು ಕರುಣೆಯುಳ್ಳ ಪ್ರೀತಿಯಿಂದ ಉತ್ತರ ಕೊಟ್ಟನು. (ಲೂಕ 10:30–37)

ಇದೇ ನಿಜವಾದ ಕರುಣೆಯುಳ್ಳ ಮಾತು ಇಂತಹ ಕರುಣೆ ಈ ವ್ಯಕ್ತಿಯ

ಮನಸ್ಸಿನಲ್ಲಿ ಇದೆಯಾ? ಇರುವುದಾದರೆ ಸರ್ವಶಕ್ತನಾದ ದೇವರ ಬಳಿ ನಿಲ್ಲಲು ಭಯಪಡುತ್ತಿದ್ದನು. ಈ ಮಾತುಗಳನ್ನು ಕೇಳಿದ ಮೇಲೆ ಅವನು ಹೀಗೆ ಯೋಚನೆ ಮಾಡಿರಬಹುದು! ನಾನು ನನ್ನ ಮನೆಯವರನ್ನೇ ಸರಿಯಾಗಿ ಪ್ರೀತಿ ಮಾಡುತ್ತಿಲ್ಲ; ಇನ್ನೂ ನೆರೆಯವರನ್ನು ಹೇಗೆ ಪ್ರೀತಿ ಮಾಡಲಿ! ಎಂದು ತನ್ನ ಮನಸ್ಸಿನಲ್ಲಿ ಏನೆಲ್ಲಾ ಅವನು ಚಿಂತಿಸಿರಬಹುದು ಅಲ್ಲವೇ! ಈ ಕಥೆ ಭಾಗವನ್ನು ಈಗ ಓದುತ್ತಿರುವ ನೀನು, ನಿನ್ನಲ್ಲಿ ಈ ಕಥೆ ಎಂಥಹ ಕಾರ್ಯವನ್ನು ಮಾಡುತ್ತಿದೆ ಎಂದು ಒಮ್ಮೆ ಗಮನಿಸಿಕೋ. ಒಂದು ವೇಳೆ ಕರ್ತನು ನಿನ್ನನ್ನು ಆ ಸಮಾರ್ಯದವನ ಬಳಿಗೆ ಕಳುಹಿಸಿರುವುದಾದರೆ ನೀನು ಏನು ಮಾಡುತ್ತಿದ್ದೆ? ಕರುಣೆ ತೋರಿಸಿ ಆರೈಕೆ ಮಾಡುತ್ತಿದ್ದ ಅಥವಾ ವಾರೆಯಾಗಿ ಹೋಗುತ್ತಿದ್ದ? ಕರ್ತನಿಂದ ಕರುಣೆ ಹೊಂದಿರುವ ನೀನು ಇತರರಿಗೆ ಕರುಣೆ ತೋರಿಸುವುದಕ್ಕೆ ನಿನ್ನ ಮನಸ್ಸು ಒಪ್ಪಿಕೊಳ್ಳುತ್ತಿರುವುದೋ ಇಲ್ಲವೋ ? ನಿನ್ನ ಉತ್ತರವನ್ನು ಕರ್ತನು ಎದುರುನೋಡುತ್ತಿದ್ದಾನೆ. !!! ಸಮಸ್ತವನ್ನು ಬಲ್ಲಾತನಾದ ನನ್ನ ಕರ್ತನು ಈಗಲೇ ನಿನ್ನ ಹೃದಯದ ಆಲೋಚನೆಗಳನ್ನು ಪರಿಶೀಲಿಸುತ್ತಿದ್ದಾನೆ.

ಸರ್ವಶಕ್ತನಾದ ದೇವರ ಮಕ್ಕಳೇ ಶಾಸ್ತ್ರವನ್ನು ಓದಿದ ಈ ವ್ಯಕ್ತಿ ಅದರಲ್ಲಿ ಏನಿದೆ ಎಂದು ತಿಳಿದಿರಬಹುದು, ಇಂತಹ ಪುಸ್ತಕದಲ್ಲಿ ಈ ರೀತಿ ಬರೆದಿದ್ದಾರೆ ನಾನು ಓದಿದ್ದೇನೆ, ನನಗೆ ಗೊತ್ತು ಎಂದು ಹೇಳುವುದಕ್ಕೆ ಆ ವ್ಯಕ್ತಿಗೆ ಆಸ್ಪದವಾಯಿತೇನೋ, ಆದರೆ ಕರ್ತನ ಕರುಣೆಯುಳ್ಳ ಪ್ರೀತಿಯನ್ನು ತಿಳಿಯದ ಈ ವ್ಯಕ್ತಿ ನನಗೆ ಎಲ್ಲಾ ಗೊತ್ತೂ. . . .ನಾನೇ ನೀತಿವಂತನು ಅಂಥ ಹೇಳಿಕೊಂಡು ಕರ್ತನನ್ನೇ ಪರೀಕ್ಷಿಸಿದಾ! ಆದರೆ ಸರ್ವವ್ಯಾಪಿಯಾದ ದೇವರು ಕೊಟ್ಟ ಉತ್ತರಕ್ಕೆ ಅವನ ಹೃದಯ ಅವನನ್ನೇ ಪ್ರಶ್ನಿಸುತ್ತಿದೆ.

ನಿನ್ನ ನೆರೆಯವನಾಗಿರುವ ವ್ಯಕ್ತಿಯನ್ನು ನೀನು ಸರಿಯಾಗಿ ತಿಳಿದುಕೊಳ್ಳದೇ ಅವನ ಸುಖ-ಕ್ಷೇಮ ತಿಳಿಯದೇ ನಿನ್ನ ಇಷ್ಟದ ರೀತಿಯಲ್ಲಿ ನಡೆಯುವಾಗ, ನೀನು ಎಂತಹ ವ್ಯಕ್ತಿ ಆಗಿರುತ್ತೀಯಾ? ನಿನ್ನ ಮನೆಯಲ್ಲಿ ನಿನ್ನವರ ಪ್ರೀತಿಯನ್ನು ಸಂಪಾದಿಸಿಕೊಳ್ಳದೇ ಇರುವ ನಿನಗೆ ಬೇರೆಯವರ ಪ್ರೀತಿ ಹೇಗೆ ಸಿಗುತ್ತದೆಂದು ಯೋಚಿಸಿ ನೋಡು! ನೀನು ಎಲ್ಲಾ ಪದವಿಯಲ್ಲಿ ಉನ್ನತಸ್ಥಾನ ಪಡೆದುಕೊಂಡು ದೊಡ್ಡ ವ್ಯಕ್ತಿಯೆಂದು ಮುಂದೆ ಒಳ್ಳೆಯವನೆಂದು ಎಣಿಸಿಕೊಂಡರೂ ಕರ್ತನ ಪ್ರೀತಿ ಮತ್ತು ಕರುಣೆ ನಿನ್ನಲ್ಲಿ ಇಲ್ಲದಿದ್ದರೆ ಯಾವುದೂ ಪ್ರಯೋಜನವಿಲ್ಲ. ನೀನು ನಿನ್ನ ಜೀವನದಲ್ಲಿ ಉತ್ತಮವಾದ ಯಶಸ್ಸನ್ನು ಕಾಣಬೇಕೆಂದರೆ ಮೊದಲು ಕರ್ತನ ಕರುಣೆಯುಳ್ಳ ಪ್ರೀತಿಯನ್ನು ತಿಳಿದಿಕೋ! ಆಗ ನಿನ್ನ ಜೊತೆಯಲ್ಲಿರುವ ಸ್ನೇಹಿತರನ್ನು ಕುಟುಂಬ ಸಧಸ್ಯರನ್ನು ಪ್ರೀತಿಸಲು ಸಾಧ್ಯವಾಗುತ್ತದೆ. ಬರೀ ಬಾಯಿಮಾತಿನಿಂದ ಎಲ್ಲವನ್ನೂ ತಿಳಿದುಕೊಂಡು ಬಾಯುಪಚಾರದಿಂದ ಎಲ್ಲವೂ ಮಾಡಿದರೆ ಸಾಲದು ಉದಾರಿಗಳಾಗಿ ಕೈಯಲ್ಲಿರುವುದನ್ನು ಸಹಾಯ ಮಾಡಲೇಬೇಕು. ಸಹಾಯ ಮಾಡಬೇಕಾದ

ಸಮಯದಲ್ಲಿ ಸುಮ್ಮನಿರುವುದಾದರೆ ಏನೂ ಪ್ರಯೋಜನವಿಲ್ಲ. ಒಬ್ಬ ಸಮಾರ್ಯದವನು ಮಾಡಿದ ಒಳ್ಳೇ ಕೆಲಸವನ್ನು ನೀನು ಸಹಾ ನೆರೆಯವನಿಗೆ ಮಾಡುವಾಗ ಅದರಲ್ಲಿ ಸಿಗುವಂತ ಪ್ರೀತಿ, ಸಮಾಧಾನ ಬೇರೆ ಯಾವುದರಲ್ಲೂ ಸಿಗುವುದಿಲ್ಲ. ನೀನು ಎಷ್ಟೇ ಸಂಪಾದಿಸಿ ಐಶ್ವರ್ಯವಂತನಾದರೂ ಮತ್ತೊಬ್ಬರಿಗೆ 'ಕರುಣೆಯುಳ್ಳ ಪ್ರೀತಿ' ತೋರಿಸದಿದ್ದರೆ ಯಾವ ಪ್ರಯೋಜನವಿಲ್ಲ.

"ಅವರ ನಾಲಿಗೆಯು ಕೊಲ್ಲುವ ಬಾಣವಾಗಿದೆ, ಅದು ಸುಳ್ಳನ್ನೇ ಆಡುತ್ತದೆ; ಒಬ್ಬನು ತನ್ನ ನೆರೆಯವನಿಗೆ ಬಾಯಿಂದ ಶುಭವಾಗಲಿ ಎಂದು ಹೇಳಿದರು ತನ್ನ ಹೃದಯದಲ್ಲಿ ಅವನಿಗಾಗಿ ಹೊಂಚು ಹಾಕುತ್ತಾನೆ." (ಯೆರೆ 9:8) ಹೌದು ಇದು ಸತ್ಯವೇ ತಾನೇ, ಮನುಷ್ಯನು ಒಳಗೊಂದು ಹೊರಗೊಂದು ಮಾತುಗಳನ್ನು ಆಡುತ್ತಾನೆ. ಆಗ ಮನುಷ್ಯನಿಗೆ ಎಲ್ಲಿದೆ ನಿಜವಾದ 'ಪ್ರೀತಿ' ಮತ್ತು 'ಕರುಣೆ' ನೀವೇ ಚಿಂತಿಸಿ ನೋಡಿರಿ, ಕರ್ತನು ಹೇಳುತ್ತಾನೆ. "ತಾನು ಪ್ರೀತಿ-ನೀತಿ-ನ್ಯಾಯಗಳನ್ನೇ ತೋರ್ಪಡಿಸುವ ದೇವರೆಂದು." (ಯೆರೆ 9:24) ಈ ಮೂರು ನಿನ್ನಲ್ಲಿ ಕಾರ್ಯ ನಡೆಯದಿದ್ದರೆ ನೀನು ಯಾವ ರೀತಿ ನಿತ್ಯಜೀವಕ್ಕೆ ಬಾಧ್ಯವಾಗಿ ಸೇರಲು ಸಾಧ್ಯ! ನಿನ್ನ ನಾಲಿಗೆ ಮತ್ತೊಬ್ಬರನ್ನು ದ್ವೇಷಿಸಿ ಅವರ ಪ್ರೀತಿಯನ್ನು ಕಳೆದುಕೊಂಡಿರುವುದಾದರೆ ಈಗಲೇ ನಿನ್ನನ್ನು ನೀನು ಸರಿಪಡಿಸಿಕೋ; ಆ ದೂಷಣೆಯ ಮಾತಿನಿಂದ ಹೊರ ಬರಬೇಕಾದರೆ ಕರ್ತನ ಕರುಣೆಯುಳ್ಳ ಪ್ರೀತಿ ನಿನ್ನಲ್ಲಿ ಬರಬೇಕು. ಆ ವ್ಯಕ್ತಿಯಲ್ಲಿ ಪ್ರೀತಿಯಿಲ್ಲದ ಕಾರಣ ಕರ್ತನನ್ನು ಪರೀಕ್ಷಿಸಿದನು. ಅದಕ್ಕೆ ಅವನ 'ಪ್ರೀತಿ'ಯು 'ಯಶಸ್ಸ'ನ್ನು ಕಾಣಲಾರದೇ ಹೋಯಿತು.

ಕರ್ತನಿಗೆ ಕರುಣೆಯುಳ್ಳ ಪ್ರೀತಿ ಇದ್ದುದ್ದರಿಂದ, ಆ ವ್ಯಕ್ತಿಯು ತನ್ನನ್ನು ಪ್ರಶ್ನಿಸುತ್ತಿದ್ದಾನೆ ಎಂದು ತಿಳಿದರೂ ಸಹ ಆ ವ್ಯಕ್ತಿಯನ್ನು ಗದರಿಸದೆ, ಖಂಡಿಸದೆ, ಕರುಣೆಯಿಂದ ಮಾತನಾಡಿರುವುದನ್ನು ನೀನು ಗಮನಿಸ ಬೇಕು. ಕರ್ತನು ಆ ವ್ಯಕ್ತಿಯ ಮೇಲೆ ನಿಜವಾದ ಕರುಣೆ ತೋರಿಸಿ ಆತನಿಗೆ ತಿಳಿಯದ ಸತ್ಯವನ್ನು ಆತನಿಗೆ ಪ್ರಕಟಪಡಿಸಿರುವುದರಲ್ಲಿ ಕರ್ತನ ಪ್ರೀತಿ ಇಂದಿನವರೆಗೂ ಯಶಸ್ಸನ್ನು ಕಾಣುತ್ತಿದೆ.

ಗಮನಿಸೋಣ:- ಸತ್ಯವೇದದ್ದಲ್ಲಿರುವ ಮತ್ತೊಂದು ಘಟನೆ.

ಕರ್ತನ ಕರುಣೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಮನಸ್ಸು ಕೊಡುವುದಾದರೆ ಹೆಚ್ಚು ಆಶೀರ್ವದಿಸಲ್ಪಡುವಿರಿ.

ಅತ್ಯುತ್ತಮವಾದ ದೇವರ ಕರುಣೆ ಎಷ್ಟು ಅಪಾರವಾದದ್ದು ಎಂದು ಮಾತಿನಿಂದ ಹೇಳಲು ಅಸಾಧ್ಯ. ಕರ್ತನು ಗೆರಸೇನರ ಸೀಮೆಗೆ ಹೋಗಿದ್ದಾಗ ಅಲ್ಲಿ ಒಬ್ಬ

ದೆವ್ವ ಹಿಡಿದವನೊಬ್ಬನು ಸಮಾಧಿಯ ಗವಿಗಳೊಳಗಿಂದ ಆತನೆದುರಿಗೆ ಬಂದನು. ಅವನಿಗೆ ಸಮಾಧಿಯ ಗವಿಗಳೇ ವಾಸಸ್ಥಳವಾಗಿದ್ದವು. ಅವನನ್ನು ಅನೇಕಸಾರಿ ಬೇಡಿಗಳಿಂದಲೂ ಸರಪಣಿಗಳಿಂದಲೂ ಕಟ್ಟಿದ್ದರೂ ಅವನು ಸರಪಣಿಗಳನ್ನು ಕಿತ್ತು ಬೇಡಿಗಳನ್ನು ಮುರಿದು ಹಾಕಿದ್ದನು. ಅವನನ್ನು ಯಾರೂ ಸರಪಣಿಯಿಂದ ಕಟ್ಟಲಾರದೇ ಹೋದರು; ಅವನನ್ನು ಹತೋಟಿಗೆ ತರುವುದಕ್ಕೆ ಯಾರಿಂದಲೂ ಆಗಲಿಲ್ಲ. ಅವನು ನಿತ್ಯ ರಾತ್ರಿ-ಹಗಲು ಸಮಾಧಿಯ ಗವಿಗಳಲ್ಲಿಯೂ ಗುಡ್ಡಗಳಲ್ಲಿಯೂ ಆರ್ಭಟಿಸುತ್ತಾ ಕಲ್ಲುಗಳಿಂದ ತನ್ನನ್ನು ಕಡಿದುಕೊಳ್ಳುತ್ತಾ ಇದ್ದನು. ಇಂಥಹ ವ್ಯಕ್ತಿಯನ್ನು ನೋಡಿದ ಕ್ಷಣದಲ್ಲಿ ಯೇಸುವು 'ಎಲಾ ದೆವ್ವಾ, ಇವನನ್ನು ಬಿಟ್ಟುಹೋಗು' ಎಂದು ಗದರಿಸಿ ಆ ವ್ಯಕ್ತಿಯನ್ನು ಸ್ವಸ್ಥಪಡಿಸಿದನು. ಇದು ಮನುಷ್ಯನಿಂದ ಅಸಾಧ್ಯ ಆದರೆ ಪರಲೋಕದ ದೇವರಿಂದ ಎಲ್ಲವೂ ಸಾಧ್ಯ.

ನೀನು ಇಂಥಹ ಪರಿಸ್ಥಿತಿಯಲ್ಲಿ ಇದ್ದರೆ ನಿನ್ನ ಮೇಲೆ ಯಾರು ಕರುಣೆ ತೋರಿಸುತ್ತಾರೆ. ಇಂಥಹ ಪರಿಸ್ಥಿತಿಯಲ್ಲಿ, ನಿನ್ನನ್ನು ಸೃಷ್ಟಿ ಮಾಡಿರುವ ಕರ್ತನು ಒಬ್ಬನೇ ಕರುಣಿಸಲು ಸಾಧ್ಯ. ಇದನ್ನು ಸರಿಯಾಗಿ ತಿಳಿದುಕೊಂಡರೆ ನಿನ್ನ ನೆರೆಯವರನ್ನು ಪ್ರೀತಿಸಲು ಸಾಧ್ಯವಾಗುತ್ತದೆ. ಕರ್ತನು ಆ ದೆವ್ವ ಹಿಡಿದ ವ್ಯಕ್ತಿಯನ್ನು ಪ್ರೀತಿಸಿದ ಕಾರಣವೇ ಅವನ ಮೇಲೆ ಕರುಣೆ ತೋರಿಸಿದನು.

ನೀನು ಮತ್ತೊಬ್ಬರ ಪ್ರೀತಿಯನ್ನು ಪಡೆದುಕೊಂಡು ಪ್ರೀತಿ-ನೀತಿ-ನ್ಯಾಯಗಳಲ್ಲಿ ಕರ್ತನ ಮುಂದೆ ಭಯ-ಭಕ್ತಿಯಿಂದ ಜೀವಿಸುವುದಾದರೆ ಆತನ ಕರುಣೆ ನಿನ್ನ ಮೇಲೆ ಸದಾಕಾಲ ನೆಲೆಯಾಗಿರುತ್ತದೆ. ನೀನು ಎಷ್ಟೇ ತಪ್ಪುಗಳನ್ನು ಮಾಡಿದಾಗ್ಯೂ ನಂಬಿಕೆ ದ್ರೋಹದಲ್ಲಿ ದೇವರ ಹತ್ತಿರ ವಂಚನೆಯಿಂದ ನಡೆದುಕೊಂಡು, ಪ್ರೀತಿ ವಿಶ್ವಾಸ ಎನ್ನದೇ ಇಷ್ಟ ಬಂದ ರೀತಿಯಲ್ಲಿ ನಿನ್ನ ಸಮಯವನ್ನು ವ್ಯರ್ಥ ಮಾಡುತ್ತಿರುವುದಾದರೆ ಈಗಲೇ ನೀನು ಕರ್ತನ ಪಾದದಲ್ಲಿ ಬಂದು ಪಶ್ಚಾತ್ತಾಪದಿಂದ ಸೇರುವುದಾದರೆ ಆತನು ನಿನ್ನನ್ನು ಕ್ಷಮಿಸೇ ಕ್ಷಮಿಸುತ್ತಾನೆ ಕರುಣಿಸೇ ಕರುಣಿಸುತ್ತಾನೆ. ಆತನು ಎಲ್ಲರಿಗೂ ಕರುಣಾಮಯಿ ಆಗಿದ್ದಾನೆ. ದಂಡು ದೆವ್ವ ಹಿಡಿದಿದ್ದವನನ್ನು ಕರುಣಿಸಿದ ಕರುಣಾಮಯಿಯಾದ ದೇವರು ಈ ಹೊತ್ತು ಅನಿನ್ನ ಅನೇಕ ತಪ್ಪುಗಳನ್ನು ಮಾಡಿಕೊಂಡು ಜೀವಿಸುತ್ತಿರುವ ನಿನ್ನನ್ನು ಕರುಣಿಸಿ ಕ್ಷಮಿಸಲು ಇಷ್ಟವುಳ್ಳವನಾಗಿದ್ದಾನೆ.

ಕರ್ತನ ಕರುಣೆಯನ್ನು ಹೊಂದಿಕೊಳ್ಳಲು ನಿನ್ನನ್ನೇ ಒಪ್ಪಿಸಿಕೊಡು! ಕರ್ತನು ಸ್ತುತಿ-ಸ್ತೋತ್ರಗಳಿಗೆ ಯೋಗ್ಯನು, ಪರಿಶುದ್ಧನೂ ನೀತಿವಂತನೂ ಪ್ರೀತಿಸ್ವರೂಪನೂ ಆಗಿದ್ದಾನೆ. ಅದೇ ರೀತಿಯಲ್ಲಿ ನೀನು ಸಹಾ ಕರ್ತನನ್ನು ಹಿಂಬಾಲಿಸಿ ಪರಿಶುದ್ಧತೆಯಿಂದ ಜನರ ಮಧ್ಯದಲ್ಲಿ ಎಲ್ಲರಿಗೂ ಕರ್ತನ ಕರುಣೆಯುಳ್ಳ ಪ್ರೀತಿಯನ್ನು ತೋರಿಸು. ನಿನ್ನೊಳಗೆ ಆ

ಪ್ರೀತಿ ತುಂಬಲಿ; ನೆರೆಯವರನ್ನು ನೋಡುವಾಗ ಅವರ ಮೇಲೆ ನಿನಗೆ ಕರುಣೆ ಬರಲಿ. ಆಗಲೇ ನಿನ್ನ ಜೀವನದಲ್ಲಿ ಕರುಣೆಯುಳ್ಳ ಪ್ರೀತಿಯನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಸರ್ವಶಕ್ತನಾದ "ದೇವರೇ ನನ್ನ ಕೂಗನ್ನು ಕೇಳಿ ನನ್ನ ಪ್ರಾರ್ಥನೆಗೆ ಕಿವಿಗೊಡು, ನಾನು ಎದೆಗುಂದಿದವನಾಗಿ ಭೂಮಿಯ ಕಡೇ ಭಾಗದಿಂದ ನಿನಗೆ ಮೊರೆಯಿಡುತ್ತೇನೆ; ನಾನು ಹತ್ತಲಾರದ ಆಶ್ರಯಗಿರಿಯ ಮೇಲೆ ನನ್ನನ್ನು ಹತ್ತಿಸು" (ಕೀರ್ತ 61: 1,2) ಎಂದು ಕರ್ತನ ಪಾದದಲ್ಲಿ ಕೇಳಿಕೋ, ಆತನ ಸನ್ನಿಧಿಯಲ್ಲಿ ಕುಳಿತು ಪ್ರಾರ್ಥಿಸು. ನಿನ್ನ ಮೊರೆಗೆ ಉತ್ತರಕೊಟ್ಟು ಆತನ ಕರುಣೆಯನ್ನು ನಿನ್ನಲ್ಲಿ ತುಂಬಲು ಕಾಯುತ್ತಿರುತ್ತಾನೆ.

ನಿನ್ನ ಮನೆಯಲ್ಲಿ ಯಾವ ಪ್ರೀತಿ ಸಿಗದೇ ಒಬ್ಬಂಟಿಗಳಾ/ನಾ/ಗಿ ಕುಳಿತು ಯೋಚಿಸಬೇಡ ಯೋಚನೆ ಮಾಡಿದರೆ ಯಾವ ಪ್ರಯೋಜನವಿಲ್ಲ, ಆದರೆ ನೀನು ಕರುಣೆಯುಳ್ಳ ದೇವರನ್ನು ಹುಡುಕುವುದಾದರೆ ನಿನ್ನ ಮನೆಯಲ್ಲಿ ಸಿಗದೇ ಇರುವ ಪ್ರೀತಿಯನ್ನು ಕರ್ತನು ನಿನ್ನೊಳಗೆ ತುಂಬುತ್ತಾನೆ. ಆಗ ಎಲ್ಲರು ನಿನ್ನನ್ನು ಹುಡುಕಿಕೊಂಡು ನಿನ್ನ ಹತ್ತಿರವೇ ಬರುತ್ತಾರೆ.

ಆಗ ನೀನು ಒಂಟಿಯಲ್ಲ ನಿನ್ನೊಂದಿಗೆ ಕರ್ತನು ಇರುತ್ತಾನೆ ಎಂದು ನಿನಗೆ ಗೊತ್ತಾಗುತ್ತದೆ. ನೀನು ಎಲ್ಲೇ ಹೋಗುವುದಾದರೂ 'ಪ್ರೀತಿಯ ಯಶಸ್ಸನ್ನು' ಕಾಣುತ್ತೀಯಾ! "ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವುದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು. ನಿನ್ನ ಕಾಲು ಕಲ್ಲಿಗೆ ತಗಲದಂತೆ ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು." (ಕೀರ್ತ 91;11–13)

ಸರ್ವಶಕ್ತನಾದ ದೇವರ ಮಗುವೇ, ನಿನಗೆ ಒಳ್ಳೇ ಪದವಿ ಇದ್ದರೂ ದೊಡ್ಡ ಐಶ್ವರ್ಯವಂತನಾಗಿದ್ದರೂ ನಿನ್ನ ಹೃದಯದಲ್ಲಿ ಕರ್ತನ ಕರುಣೆಯುಳ್ಳ ಪ್ರೀತಿ ಮತ್ತೊಬ್ಬರಿಗೆ ತೋರಿಸಲು ಇಷ್ಟವಿಲ್ಲದೇ ಇದ್ದರೆ, ಏನೇ ಧರ್ಮಕಾರ್ಯಗಳು ಮಾಡಿದರೂ ಪ್ರಯೋಜನವಿಲ್ಲ. ಮೊದಲು ಕರ್ತನು ನಿನ್ನನ್ನು ಕರುಣಿಸಿದ ಹಾಗೆ ನೀನು ಮತ್ತೊಬ್ಬರನ್ನು ಕರುಣಿಸು. ಆಗ ನೀನು 'ಪ್ರೀತಿಯ ಯಶಸ್ಸ'ನ್ನು ಕಾಣುತ್ತೀಯಾ. ಮತ್ತು ನಿನಗೆ ತೃಪ್ತಿಯಾಗುವ ರೀತಿಯಲ್ಲಿ ಕರ್ತನು ಹೆಚ್ಚು-ಹೆಚ್ಚಾಗಿ ಆಶೀರ್ವಾದಗಳನ್ನು ಮಾಡುತ್ತಾನೆ. ಕರ್ತನಲ್ಲಿ ತನ್ನನ್ನು ತಗ್ಗಿಸಿಕೊಳ್ಳುವವನು ಎಷ್ಟೋ ಧನ್ಯನು.

"ದೀನರು ಕರ್ತನಲ್ಲಿ ಹೆಚ್ಚು-ಹೆಚ್ಚಾಗಿ ಆನಂದಿಸುವರು" ಆಮೆನ್

# 2. ಅಪಾರವಾದ ಪ್ರೀತಿ

"ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ" (ಮತ್ತಾಯ 5:44)

ನಿನ್ನ ಹೃದಯದಲ್ಲಿ ಕರ್ತನು ಇಟ್ಟಿರುವ ಪ್ರೀತಿಯು ಯಾರಿಗಾಗಿ ಇಟ್ಟಿದ್ದಾರೆಂದು ನೀನು ಮೊದಲು ಗ್ರಹಿಸಿಕೊಳ್ಳಬೇಕು. ಏಕೆಂದರೆ ಸಾಮಾನ್ಯವಾಗಿ ಎಲ್ಲರೂ ತಮ್ಮನ್ನು ಪ್ರೀತಿಮಾಡುವವರನ್ನು ಮಾತ್ರವೇ ಪ್ರೀತಿಸಲು ಮುಂದಾಗುತ್ತಾರೆ. ಆದರೆ ವೈರಿಗಳನ್ನು ಪ್ರೀತಿಸುವ ಮನೋಭಾವ ಇರುವವರು ಕಡಿಮೆ, ಆದರೆ ಕರ್ತನು ನಿನ್ನಲ್ಲಿ ಆಸೆ ಪಡುತ್ತಿರುವುದು ನೀನು ವೈರಿಗಳನ್ನೂ ಪ್ರೀತಿಸಬೇಕು ಮತ್ತು ನಿನ್ನನ್ನು ಹಿಂಸೆ ಪಡಿಸುವವರಿಗಾಗಿ ದೇವರನ್ನು ಪ್ರಾರ್ಥಿಸಬೇಕು ಎಂದು, ಆತನ ಆಜ್ಞೆಯನ್ನು ಪರಿಪಾಲಿಸುವುದೇ ನಿನ್ನ ಮೊದಲ ಕರ್ತವ್ಯವಾಗಿದೆ.

ನೀನು ಕರ್ತನಿಗೆ ಸ್ವಂತ ಮಗುವಾಗಿದ್ದೀಯ. ಆತನ ಮಾತಿಗೆ ವಿಧೇಯಳಾ/ನಾ/ಗಬೇಕು ಸುಮ್ಮ-ಸುಮ್ಮನೆ ಹೆಸರಿಗಾಗಿ ಪ್ರೀತಿಮಾಡುವುದಲ್ಲ ಅಪಾರವಾಗಿ ಪ್ರೀತಿಸಬೇಕು. ಏಕೆಂದರೆ ಸರ್ವಶಕ್ತನಾದ ದೇವರು ಸಹ ನಿನ್ನನ್ನು ಅಪಾರವಾಗಿಯೇ ಪ್ರೀತಿಮಾಡುತ್ತಿರುವುದು. 'ನೀನು ಮೊದಲು ದೇವರ ರಾಜ್ಯಕ್ಕಾಗಿಯೂ ಮತ್ತು ನೀತಿಗಾಗಿಯೂ ತವಕಪಡಬೇಕಾಗಿದೆ.' ಸರ್ವಶಕ್ತನಾದ ದೇವರ ರಾಜ್ಯವು ಮಾತಿನಲ್ಲಿ ಅಲ್ಲ, ಕಾರ್ಯದಲ್ಲಿಯೂ, ಪ್ರೀತಿಯಿಂದಲೂ, ಕೃಪೆಯಿಂದಲೂ, ಶಾಂತಿಯಿಂದಲೂ, ಮತ್ತು ಸಮಾಧಾನದಿಂದಲೂ ಕೂಡಿದ್ದಾಗಿರುವುದರಿಂದ ನೀನು ನಿನ್ನನ್ನು ಹಿಂಸಿಸುವವರಿಗಾಗಿ ಪ್ರಾರ್ಥಿಸುವುದಕ್ಕೆ ಮುಂದಾಗಬೇಕಾಗಿದೆ.

"ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿರಲಾಗಿ" (ರೋಮಾ 5:10)

ಕರ್ತನಿಗೆ ನಮ್ಮ ಮೇಲೆ ಇದ್ದ 'ಅಪಾರವಾದ ಪ್ರೀತಿಯು', ಆತನಿಗೆ ವೈರಿಗಳಾಗಿ ಪಾಪ ಮಾಡಿಕೊಂಡು ಜೀವಿಸುತ್ತಿದ್ದಂತಹ ನಮ್ಮ ಮೇಲೆ ಬಂದಿತು, ಅದಕ್ಕೆ ಕರ್ತನು 2019 ವರ್ಷಗಳ ಹಿಂದೆ ಬೆತ್ಲೆಹೇಮಿನಲ್ಲಿ ಪರಿಶುದ್ಧವಾಗಿ ಜನಿಸಿ ನಂತರ ಮೂವತ್ತುಮೂರುವರೆ ವರ್ಷ ಆದ ಮೇಲೆ, ನಮ್ಮ ಮೇಲಿದ್ದ ಪಾಪ, ಶಾಪ,

ರೋಗಗಳನ್ನೆಲ್ಲಾ ತನ್ನ ಮೇಲೆ ಬರಮಾಡಿಕೊಂಡು ಶಾಪಗ್ರಸ್ತನಾಗಿ ಶಿಲುಬೆಗೆ ತೂಗುಹಾಕಲ್ಪಟ್ಟು, ಸತ್ತು ಹೂಣಲ್ಪಟ್ಟು, ಮೂರು ದಿನಗಳಾದ ಮೇಲೆ ಪುನರುತ್ಥಾನ ಹೊಂದಿ ಸರ್ವಶಕ್ತನಾದ ದೇವರ ಬಲಪಾರ್ಶ್ವದಲ್ಲಿ ಕುಳಿತು ನಮಗಾಗಿ ಬಿನ್ನಹಗಳನ್ನು ಮಾಡುತ್ತಿರುವ ಕ್ರಿಸ್ತನು ನಮ್ಮ ಮೇಲೆ ಅದೆಂತಹ 'ಅಪಾರವಾದ ಪ್ರೀತಿ'ಯನ್ನು ಇಟ್ಟಿದ್ದಾನೆಂದು ಒಮ್ಮೆ ಯೋಚಿಸಿನೋಡಿರಿ. ಕ್ರಿಸ್ತನ 'ಅಪಾರವಾದ ಪ್ರೀತಿ'ಯನ್ನು ನೀನು ಅರ್ಥಮಾಡಿಕೊಳ್ಳದಿದ್ದರೆ ನೀನು 'ಅಪಾರವಾದ ಪ್ರೀತಿ'ಯಿಂದ ತುಂಬಲು ಸಾಧ್ಯವಿಲ್ಲ ಮತ್ತು ನಿನ್ನ ವೈರಿಗಳನ್ನು ನೀನು 'ಅಪಾರವಾದ ಪ್ರೀತಿ'ಯಿಂದ ಪ್ರೀತಿಸುವುದಕ್ಕೆ ಸಾಧ್ಯವಿಲ್ಲ.

ಪ್ರೀತಿಯ ದೇವರ ಮಗುವೇ, ನಡೆದ ಒಂದು ಘಟನೆಯನ್ನು ನಾನು ನಿಮಗೆ ತಿಳಿಸಲು ಇಚ್ಚಿಸುತ್ತೇನೆ.

ಇಬ್ಬರು ಸ್ತ್ರೀಯರೂ ಒಂದು ಬೋಧಕರ ಹತ್ತಿರ ಬಂದರು, ಇವರು ಇಕ್ಕಟ್ಟಿನಲ್ಲಿ ಇದ್ದರೂ ಅನ್ನ-ಪಾನಗಳಿಗೆ ಕೊರತೆಯಿಲ್ಲ. ವಿದ್ಯಾವಂತರು ಎಲ್ಲವನ್ನು ತಿಳಿದವರೂ ಇಕ್ಕಟ್ಟನಲ್ಲಿ ಇದ್ದರೂ ಸಹಾ ಕುಟುಂಬವು ಉತ್ತಮವಾಗಿ ಸಾಗುತ್ತಿತ್ತು ಆಕಸ್ಮಿಕವಾಗಿ ಆ ಸ್ತ್ರೀಯರ ತಂದೆಗೆ ಆರೋಗ್ಯವಿಲ್ಲದೆ ಚಿಕಿತ್ಸೆಗೆ ಒಳಗಾದರೂ ಅಂತಹ ಇಕ್ಕಟ್ಟಿನಲ್ಲಿ ಇದ್ದರೂ ಸಹಾ ತಂದೆಯನ್ನು ನೋಡಿಕೊಳ್ಳುತ್ತಿದ್ದರು. ತಂದೆಗೆ ರೋಗ ಹೆಚ್ಚಾಗಿ ಹಾಸಿಗೆ ಹಿಡಿದಾಗ, ಆ ಸ್ತ್ರೀಯರೂ ಬೋಧಕರ ಬಳಿ ಸಲಹೆ ಕೇಳಲು ಬಂದರು. ಬೋಧಕರು ಸ್ತ್ರೀಯರು ಹೇಳಿದ ಮಾತುಗಳನ್ನೆಲ್ಲಾ ಕೇಳಿ, ಆ ತಂದೆಯನ್ನು ಇಲ್ಲಿಗೆ ಕರೆದುಕೊಂಡು ಬನ್ನಿ ಎಂದು ಹೇಳಿದರು. ಅವರು ಆ ಮಾತನ್ನು ಕೇಳಿ ಬೋಧಕರ ಬಳಿ ತಂದೆಯನ್ನು ಕರೆತಂದಾಗ ಆ ತಂದೆಗೆ ಕಾಲಿನಲ್ಲಿ ಗಾಯವಾಗಿ ಹುಳಬಂದಿತ್ತು. ವಾಸನೆ ಹಿಡಿದಿತ್ತು ಅದನ್ನು ನೋಡಿದ ಬೋಧಕರು ತನ್ನ ಕೈಗಳಿಂದ ಆ ಕಾಲನ್ನು ಕ್ಲೀನ್ ಮಾಡಿ, ಅದರಲ್ಲಿದ್ದ ಕೀವು, ರಕ್ತ ಹೊರ ತೆಗೆದರು ಆಗ ಆ ತಂದೆಗೆ ಸ್ವಲ್ಪ ನೋವು ಕಡಿಮೆಯಾಯಿತು. ಬೋಧಕರು ಕಾಲನ್ನು ಕ್ಲೀನ್ ಮಾಡಿ, ನಂತರ ತಂದೆಯೊಟ್ಟಿಗೆ ಪ್ರೀತಿಯಿಂದ ಮಾತಾಡಿದರು. ಅವರ ಹೃದಯದಲ್ಲಿ ಇದ್ದ ನೋವುಗಳನ್ನು, ಚಿಂತೆಭಾರವನ್ನು ಪ್ರೀತಿಯಿಂದ ಹೊರಹಾಕಿದರು, ಅವರಲ್ಲಿ ಒಂದು ನಗುಮುಖವನ್ನು ಕಾಣುವ ಹಾಗೆ ಪ್ರೀತಿಯನ್ನು ತುಂಬಿದರು, ಆ ತಂದೆ ಗುಣಮುಖವಾಗಿ ಕರ್ತನ 'ಅಪಾರವಾದ ಪ್ರೀತಿ'ಯನ್ನು ಆ ಬೋಧಕರು ತೋರಿದ ಪ್ರೀತಿಯ ಕಾರ್ಯಗಳ ಮುಖಾಂತರ ಹೊಂದಿಕೊಂಡರು.

ನೋಡಿರಿ ಎಂಥಹ 'ಅಪಾರವಾದ ಪ್ರೀತಿ'ಯನ್ನು ಆ ಬೋಧಕರು ತೋರಿಸಿದರು ಈ ಬೋಧಕರ ಸ್ಥಾನದಲ್ಲಿ ನೀನು ಇದ್ದಿದ್ದರೆ ಏನು ಮಾಡುತ್ತಿದ್ದೆ

ಯಾವಾಗ ಇವನು ಸಾಯುತ್ತಾನೋ, ಈ ಗೋಳಿನಿಂದ ನನಗೆ ಯಾವಗ ವಿಮುಕ್ತಿ ಸಿಗುತ್ತದೋ ಎಂದು ಪ್ರತಿದಿನ ಗುಣುಗುಟ್ಟುತ್ತಾ ಆ ತಂದೆಯ ಸಾವನ್ನು ಎದುರುನೋಡುತ್ತಿದ್ದಿಯಾ! ಅಥವಾ ಬೋಧಕರು ಆ ವ್ಯಕ್ತಿಯನ್ನು ಸಂತೈಸುವ ರೀತಿಯಲ್ಲಿ ನೀನು ಸಂತೈಸುತ್ತಿದ್ದೆಯಾ ಏನು ಮಾಡುತ್ತಿದ್ದೆ? ಯೋಚಿಸಿನೋಡು! ಈ ಬೋಧಕರಲ್ಲಿ ಕರ್ತನ ಪ್ರೀತಿ ಅಪಾರವಾಗಿದ್ದುದರಿಂದ ಆ ತಂದೆಗೆ ಆದರಣೆ ಸಿಕ್ಕಿತು. ತನ್ನ ಜೀವನದಲ್ಲಿ ನಡೆದ ಸಂಭವಗಳಿಂದ ಕರ್ತನ ಪ್ರೀತಿಯನ್ನು ಆ ಭೋದಕರು ಚೆನ್ನಾಗಿ ರುಚಿ ನೋಡಿದ್ದರು, ಅದಕ್ಕಾಗಿ ಬೋಧಕರು ಅಪಾರವಾದ ಪ್ರೀತಿಯನ್ನು ತಂದೆಗೆ ತೋರ್ಪಡಿಸಿದರು.

ಹೊರಗೆ ಕಾಣುವ ಇಂತಹ ರೋಗದಲ್ಲಿದ್ದವರನ್ನು ಪ್ರೀತಿಸಬೇಕಾದರೆ ನೀನು ಮೊದಲು ನಿನ್ನ ಮನೆಯವರನ್ನು ಸರಿಯಾಗಿ ಪ್ರೀತಿಸಬೇಕು. ಇಲ್ಲ ನಾನು ಹೊರಗಿನವರನ್ನು ಬೇಕಾದರೆ ಪ್ರೀತಿಸುತ್ತೇನೆ ನನ್ನ ಮನೆಯವರನ್ನು ಪ್ರೀತಿಸುವುದಕ್ಕೆ ನನಗೆ ಸಾಧ್ಯವಿಲ್ಲ ಎಂದು ನೀನು ಹೇಳುವುದಾದರೆ, ಸ್ವಂತ ಮನೆಯವರನ್ನೇ ಪ್ರೀತಿಸದಿರುವ ನೀನು ಮತ್ಯಾರನ್ನ ಪ್ರೀತಿಸುತ್ತೀಯಾ! ನಿನ್ನ ಮನೆಯಲ್ಲಿ ನೀನೇ ವೈರಿಯಾಗಿ ನಿಲ್ಲುವುದಾದರೆ ಈ 'ಅಪಾರವಾದ ಪ್ರೀತಿ'ಯನ್ನು ಇನ್ಯಾರ ಬಳಿ ತೋರಿಸುತ್ತೀಯಾ? ಆದದರಿಂದ ಪ್ರೀತಿಯಲ್ಲಿ ನೆಲೆನಿಲ್ಲು ಮನೆಯವರ ಪ್ರೀತಿಯನ್ನು ಗಳಿಸಲು ಪ್ರಯತ್ನಿಸು ಆಗಲೇ ಮತ್ತೊಬ್ಬರಿಗೆ 'ಅಪಾರವಾದ ಪ್ರೀತಿ'ಯನ್ನು ತೋರಿಸಲು ಸಾಧ್ಯವಾಗುತ್ತದೆ. ಮತ್ತು ಆಗಲೇ ನೀನು ಉತ್ತಮವಾಗಿ ಸರ್ವಶಕ್ತನಾದ ದೇವರ ಮಗುವಾಗಿ ಕಂಡು ಬರುತ್ತೀಯಾ. ಆದರೆ ನಿನ್ನ ಮನೆಯವರ ಮೇಲೆ ಹಗೆತನ ಬೆಳೆಸುವುದಾದರೆ ಯಾವ ಪ್ರಯೋಜನವೂ ಇಲ್ಲ. ನೀನು ಕರ್ತನಲ್ಲಿ ಭಯಭಕ್ತಿಯುಳ್ಳವಳಾ/ನಾ/ಗಿ ಆತನ ಮಾರ್ಗಗಳಲ್ಲಿ ನಡೆಯುವುದಾದರೆ ನೀನು ಮಾಡುವ ಕೆಲಸ ಕಾರ್ಯಗಳಲ್ಲಿ ಶುಭವಿರುತ್ತದೆ.

ನೀನು ಮೊದಲು ದಾರಿತಪ್ಪಿ ಅಲೆಯುವಾಗ, ಯಾರಿಗೂ ಸಿಗದೇ ಪರದೇಶಿಯಾಗಿ ಕುಳಿತಿರುವಾಗ ನಿನ್ನನ್ನು ನೋಡಿ ಕನಿಕರಿಸಿದ್ದು 'ಕರ್ತನ ಅಪಾರವಾದ ಪ್ರೀತಿ'ಯೇ ಹೊರತು; ಯಾವ ಮನುಷ್ಯನ ಪ್ರೀತಿ ಅಲ್ಲ! ಅಂಥಹ ಪ್ರೀತಿಯನ್ನು ಮರೆತು ನಿನ್ನ ಸ್ವಬುದ್ಧಿಯನ್ನೇ ಆಧಾರ ಮಾಡಿಕೊಂಡು ನಡೆದರೆ ನೀನು ಎಷ್ಟರವರೆಗೆ ಪ್ರಯಾಣ ಬೆಳೆಸಲು ಸಾಧ್ಯವೆಂದು ಚಿಂತಿಸು.

"ಕರ್ತನೇ, ಒಳ್ಳೆಯವರೂ ಯಥಾರ್ಥಚಿತ್ತರೂ ಆಗಿರುವವರಿಗೆ ಉಪಕಾರಮಾಡು." (ಕೀರ್ತ 125:4) ಕರ್ತನು ಎಲ್ಲಾ ದೇವರುಗಳಿಗಿಂತ ಹೆಚ್ಚಿನವನೆಂದು ರುಚಿಸಿ ತಿಳಿದಿಕೋ; ಆಗ ಅಪಾರವಾದ ಪ್ರೀತಿ ಯಾವುದೆಂದು

ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಸರ್ವಶಕ್ತನಾದ ದೇವರ ಮಗುವೇ ಒಂದು ಕುಟುಂಬದಲ್ಲಿ ತಂದೆ, ತಾಯಿ ಮಗಳು ಇದ್ದಂತಹ ಮನೆಯಲ್ಲಿ ತಂದೆ ಆಕಸ್ಮಿಕವಾಗಿ ತೀರಿಹೋದರು. ತಾಯಿ ತನ್ನ ಮಗಳಿಗೋಸ್ಕರ ರಾತ್ರಿ-ಹಗಲು ಕಷ್ಟ ಪಟ್ಟು ಕೆಲಸ ಮಾಡಿ ದೊಡ್ಡವಳನ್ನಾಗಿ ಮಾಡಿ, ಒಳ್ಳೇ ಉದ್ಯೋಗ ದೊರೆಯುವಂತೆ ಮಾಡಿ ಮಗಳ ಜೀವಿನವನ್ನು ಒಂದು ಉತ್ತಮವಾದ ಹಂತಕ್ಕೆ ರೂಪಿಸಿದರು. ಆದರೆ ತಾಯಿ ನೆನಸದ ರೀತಿಯಲ್ಲಿ ಮಗಳು ವಿರುದ್ಧವಾಗಿ ನಿಂತು ಸ್ನೇಹಿತರ ಮಾತುಗಳನ್ನು ಕೇಳುತ್ತಾ ಮನೆಯಲ್ಲಿ ತಾಯಿಯೊಟ್ಟಿಗೆ ಜಗಳವಾಡುತ್ತಾ, ಬೈಯುತ್ತಾ, ಹೊಡೆಯುತ್ತಾ, ಚಿತ್ರಹಿಂಸೆ ಕೊಡುತ್ತಿದ್ದಳು. ಆದರೂ ಸಹಾ ಆ ತಾಯಿಯು ಮಗಳ ಎಲ್ಲಾ ಹಿಂಸೆಯನ್ನು ಸಹಿಸಿಕೊಂಡು ಪರಿಶುದ್ಧವಾದ ದೇವರ ಮುಖವನ್ನು ದೃಷ್ಟಿಸಿದರು ಮತ್ತು ಅವರು ಸಭಾಪಾಲಕರ ಬಳಿಗೆ ಹೋಗಿ ಎಲ್ಲಾ ವಿಷಯಗಳನ್ನು ಹೇಳಿಕೊಂಡಾಗ, ಆ ಸಭಾಪಾಲಕರು ಅವರಿಗೋಸ್ಕರ ಪ್ರಾರ್ಥಿಸಿದರು.

ಕೆಲವು ದಿನಗಳು ಆದ ಮೇಲೆ ಪರಾತ್ಪರನಾದ ದೇವರು ಆ ಮಗಳನ್ನು ಸಂಧಿಸಿದರು. ಆಗ ಆ ಮಗಳಲ್ಲಿ ಮನಃ ಪರಿವರ್ತನೆಯಾಯಿತು ಆ ಮಗಳು ತಾಯಿಯೊಟ್ಟಿಗೆ ಪ್ರೀತಿಯಿಂದ ಮಾತಾಡಲು ಆರಂಭಿಸಿದಳು, ಆಗ ಆ ತಾಯಿಗೆ ಆದಂತ ಸಂತೋಷ ಹೇಳಲು ಸಾಧ್ಯವಿಲ್ಲ. ಆ ತಾಯಿಯು ಸರ್ವಶಕ್ತನಾದ ದೇವರಿಗೆ ಆ ಕ್ಷಣದಲ್ಲಿ ಕೃತಜ್ಞತೆ ಸಲ್ಲಿಸಿದಳು, ಈಗ ಆ ತಾಯಿ-ಮಗಳು ಸಂತೋಷದಿಂದ ಅಳಿಯನೊಟ್ಟಿಗೆ ನೆಲೆಯಾಗಿ ನಿಂತು ಜೀವಿಸುತ್ತಿದ್ದಾರೆ. ಇಲ್ಲಿ ತಾಯಿಯ ಪ್ರಯಾಸಕ್ಕೆ ಕನಿನಕರವುಳ್ಳ ದೇವರು ಪ್ರತಿಫಲಕೊಟ್ಟರು. ತಾಯಿಗಿದ್ದಂತಹ 'ಅಪಾರವಾದ ಪ್ರೀತಿ'ಯು ಕ್ರಿಸ್ತನ ಸಹಾಯದಿಂದ ಮಗಳನ್ನು ಗೆಲ್ಲಲು ಸಾಧ್ಯವಾಯಿತು.

ಒಂದು ತಾಯಿ ತನ್ನ ಮಗಳ ಪ್ರೀತಿಗಾಗಿ ಇಷ್ಟು ತವಕಿಸಿರುವುದಾದರೆ ನಮ್ಮೆಲ್ಲರನ್ನು ಅಪಾರವಾಗಿ ಪ್ರೀತಿ ಮಾಡುತ್ತಿರುವ ನನ್ನ ಕರ್ತನು ಶಿಲುಬೆ ಮೇಲೆ ನಮಗೋಸ್ಕರ ಬಲಿಯಾಗಿರುವ ನಮ್ಮ ಯೇಸುಕ್ರಿಸ್ತನು ನಮ್ಮ ಪ್ರೀತಿಗಾಗಿ ಅದೆಷ್ಟು ತವಕಿಸುತ್ತಿರಬಹುದು, ತಾಯಿ ತನ್ನ ಮಗಳಿಗಾಗಿ ತವಕಿಸಿದ ರೀತಿಯಲ್ಲಿ ನಮ್ಮ ತಂದೆಯಾಗಿರುವ ಯೇಸುಕ್ರಿಸ್ತನು ನಮ್ಮ ಪ್ರೀತಿಗಾಗಿಯೇ ಎದುರುನೋಡುತ್ತಿರುವನು. ನೀನು ಮಾಡುವ ದ್ರೋಹದಿಂದ ಕರ್ತನು ಗಾಯಗೊಂಡನು. ಮನುಷ್ಯರು ತಿಳಿದು ತಿಳಿಯದೇ ಮಾಡುವಂತಹ ಅಪರಾಧಗಳಿಗೆ ಕರ್ತನು ಶಿಲುಬೆ ಮೇಲೆ ಜಜ್ಜಲ್ಪಟ್ಟನು. ನೀನು ಎಷ್ಟೇ ತಪ್ಪು ಮಾಡಿದರೂ ನಿನಗೆ ಸುಕ್ಷೇಮವನ್ನುಂಟು ಮಾಡಲು ದಂಡನೆಯನ್ನು ಕರ್ತನು ಅನುಭವಿಸಿದನು. ಇಂತಹ ತ್ಯಾಗವನ್ನು ನಿನ್ನ ತಾಯಿಯೂ ಸಹ ಮಾಡಲಿಲ್ಲ. ನಿನಗೋಸ್ಕರ ಈ 'ಅಪಾರವಾದ ಪ್ರೀತಿ'ಯನ್ನು ಇಟ್ಟಿರುವ

ಸರ್ವಶಕ್ತನಾದ ದೇವರನ್ನೇ ಮರೆತು ಜೀವನ ಸಾಗಿಸುತ್ತೀದ್ದೀಯಾ! ಇಲ್ಲಿ ಈ ತಾಯಿಯ ಪ್ರೀತಿ ನೋಡುವುದಾದರೆ ಮಗಳು ಕೊಡುವ ಚಿತ್ರಹಿಂಸೆಯಿಂದ ಹೊರಬರಬೇಕು ಎಂದು ಅದಕ್ಕೆ ಪ್ರಯಾಸ ಪಟ್ಟಿರುವುದು, ಎರಡನೇದಾಗಿ ಮನೆಗೌರವ ಎಲ್ಲಿ ಬೀದಿಗೆ ಬಂದು ಮಗಳ ಜೀವನ ಏನಾಗುತ್ತದೋ ಎಂದು ಭಯಪಟ್ಟು ಸಹಿಸಿಕೊಂಡಳು. ಇದು ತಾತ್ಕಾಲಿಕವಾದ ಪ್ರೀತಿ, ಇಂತಹ ಪ್ರೀತಿಗೇ ಆಕೆ ಇಷ್ಟು ತವಕಿಸಿರುವುದಾದರೆ, ಕರ್ತನು ನಿನಗೆ ನಿಜವಾಗಿ ತೋರಿಸುವ ಶಾಶ್ವತವಾದ ಪ್ರೀತಿಗೆ ಎಷ್ಟು ತವಕಿಸುತ್ತಿರಬಹುದು.

ಸರ್ವಶಕ್ತನಾದ ದೇವರ ಮಗುವೇ ನಿನ್ನ ಬಳಿಯಲ್ಲಿ ಇರುವ ವ್ಯಕ್ತಿಗಳಿಗೆ ಕರ್ತನ ಪ್ರೀತಿಯನ್ನು ಯಾವಾಗಲೂ ತಿಳಿಸು. ಒಳ್ಳೇ ಮನಸ್ಸು ಇರುವ ನಿನ್ನ ಎಲ್ಲಾ ಸ್ನೇಹಿತರಿಗೆ ಕರ್ತನ ಮಾರ್ಗವನ್ನು ತೋರಿಸು. ಕುಯುಕ್ತಿಯ ಮನಸ್ಸುಳ್ಳ ಸ್ನೇಹಿತರನ್ನೂ ನೀನು ನೋಡುವಾಗ ಅವರನ್ನು ದ್ವೇಷಿಸದೇ ಅವರಿಗಾಗಿ ಕರ್ತನಲ್ಲಿ ಮೊರೆಯಿಡು. ನಿನಗಾಗಿ ತಂದೆ ಬಳಿ ಕರ್ತನು ಮೊರೆಯಿಡುವ ಪ್ರಕಾರ ನಿನ್ನ ಸ್ನೇಹಿತರಿಗಾಗಿ ಕೇಳಿಕೋ ಸ್ವಂತ ಕಾರ್ಯಕ್ಕೆ ಸ್ಥಾನ ಕೊಡದೇ ಕರ್ತನ ಕಾರ್ಯಕ್ಕೆ ಸಮಯವನ್ನು ಕೊಡು ಆಗ ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು." (ಕೀರ್ತ 37:4) ಯಾಕೆಂದರೆ ಕರ್ತನ ಪ್ರೀತಿ ಎಷ್ಟೋ ಅಮೂಲ್ಯವಾಗಿದೆ; ಆತನ ಪ್ರೀತಿ ಬಹು ತಾಳ್ಮೆಯುಳ್ಳದ್ದು, ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ. ಈ ಪ್ರೀತಿಯನ್ನು ನಿನ್ನ ಹೃದಯದಲ್ಲಿ ಭದ್ರಪಡಿಸಿಕೊಳ್ಳುವುದಾದರೆ ಖಂಡಿತವಾಗಿಯೂ ಕರ್ತನ ಪ್ರೀತಿ ಅಪಾರವಾಗಿ ನಿನ್ನಲ್ಲಿ ತುಂಬಿ ಅದು ಮತ್ತೊಬ್ಬರಿಗೆ ಮಾರ್ಗದರ್ಶಿಯಾಗುತ್ತದೆ. ಈ ಪ್ರೀತಿಗಾಗಿ ಒಪ್ಪಿಸಿಕೊಡು 'ಅಪಾರವಾದ ಪ್ರೀತಿ' ನಿನ್ನಲ್ಲಿ ತುಂಬುವಾಗ ನೀನು ಈ ಲೋಕದಲ್ಲಿ 'ಪ್ರೀತಿಯ ಯಶಸ್ಸ'ನ್ನು ಹೊಂದಲು ಸಾಧ್ಯವಾಗುತ್ತದೆ.

**"ನೀತಿಯನ್ನೂ ಮಹಿಮೆಯನ್ನೂ ದಿನವೆಲ್ಲಾ ಧ್ಯಾನಿಸು"**

# 3. ಪರಲೋಕದ ಪ್ರೀತಿ

"ದೇವರ ದಯೆ ಹೊಂದಿದವಳೇ, ನಿನಗೆ ಶುಭವಾಗಲಿ; ಕರ್ತನು ನಿನ್ನ ಸಂಗಡ ಇದ್ದಾನೆ" (ಲೂಕ 1:28)

ದೇವದೂತನ ಮಾತನ್ನು ಕೇಳಿ ಬಹು ಗಲಿಬಿಲಿಗೊಂಡ ಮರಿಯಳು, "ಇದರ ಅರ್ಥವೇನಿರಬಹುದು?" ಎಂದು ಆಶ್ಚರ್ಯಪಟ್ಟಳು. ಆ ಮಾತಿಗೆ ತತ್ತರಿಸಿ–ಇದೆಂಥ ಆಶೀರ್ವಾದ ಎಂದು ಯೋಚಿಸಿದಳು. ಅವಳ ಮನಸ್ಸಿನ ಆಲೋಚನೆಯನ್ನು ತಿಳಿದ ದೂತನು ತತ್‌ಕ್ಷಣವೇ – "ಕರ್ತನು ನಿನ್ನ ಸಂಗಡ ಇದ್ದಾನೆ. ಹೆದರಬೇಡ ನಿನಗೆ ದೇವರ ದಯೆ ದೊರಕಿತು." "ಇಗೋ ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ 'ಯೇಸು' ಎಂದು ಹೆಸರಿಡಬೇಕು." (ಲೂಕ 1:31) ಅಂದನು. ಮರಿಯಳು ಇದನ್ನು ಕೇಳಿ ಏನು ಉತ್ತರ ಕೊಟ್ಟಳು?

ಈ ಮರಿಯಳ ಸ್ಥಾನದಲ್ಲಿ ನೀನು ಇದ್ದರೆ ನಿನ್ನ ಸ್ಥಿತಿ ಯಾವ ರೀತಿ ಇರುತ್ತಿತ್ತು!

1) ನೀನು ಗರ್ಭಿಣಿಯಾಗಲು ಒಪ್ಪಿಸಿಕೊಡಲು ನಿನಗೆ ಮನಸ್ಸು ಬರುತ್ತಿತ್ತ!
2) ಅಥವಾ ನೀನು ಮೊದಲು ದೇವರನ್ನು ದೂಷಿಸುತ್ತಿದ್ದೆಯಾ!
3) ತಂದೆ–ತಾಯಿಗೆ ಯಾವ ರೀತಿ ತಿಳಿಸುವುದು ಎಂದು ದಾರಿ ಹುಡುಕುತ್ತಿದ್ದೆಯಾ!
4) ಈ ಲೋಕದವರಿಗೂ ಮತ್ತು ಸಮಾಜಕ್ಕೂ ಭಯ ಪಡುತ್ತ ಸರ್ವಶಕ್ತನಾದ ದೇವರ ಸಂದೇಶವನ್ನು ತಿರಸ್ಕರಿಸುತ್ತಿದ್ದೆಯಾ!
5) ಅಥವಾ 'ಸ್ವಾಮಿ ಬೇರೊಬ್ಬರನ್ನು ಈ ಕೆಲಸಕ್ಕೆ ನೇಮಿಸು ನನ್ನನ್ನು ಕ್ಷಮಿಸು' ಎಂದು ಪ್ರಾರ್ಥಿಸುತ್ತಿದ್ದಾ! ಏನು ಮಾಡುತ್ತಿದ್ದೆ ?

ಹೆಚ್ಚು ಹೇಳಬೇಕಾದರೆ ಮಹೋನ್ನತನಾದ ದೇವರು ಹೇಳುವ ಮಾತನ್ನು ಕೇಳದೆ ನಿನ್ನ ಸ್ವಂತ ಆಲೋಚನೆಯಲ್ಲಿ ಏನು ಮಾಡಬೇಕೋ ಅದನ್ನೇ ಮಾಡುತ್ತಿದ್ದೆ, ಆದರೆ ಸರ್ವಶಕ್ತನಾದ ದೇವರ ಮಾತಿಗೆ ಕಿವಿಗೊಡುತ್ತಿರಲಿಲ್ಲ. ಈಗ ಇರುವ ಮಕ್ಕಳಿಗೆ ತಂದೆ–

ತಾಯಿಯ ಭಯವಾಗಲೀ ದೊಡ್ಡವರ ಭಯವಾಗಲೀ ಇಲ್ಲ; ಇನ್ನು ಪರಲೋಕದ ದೇವರ ಮಾತನ್ನು ಕೇಳುವ ಜ್ಞಾನ ಇದೆಯಾ?

ಇಲ್ಲಿ ಮರಿಯಳು ಏನು ಮಾಡಿದಳು ನೋಡಿರಿ. ಮರಿಯಳು ಆ ದೂತನನ್ನು–ಇದು ಹೇಗಾದೀತು? ನಾನು ಪುರುಷನನ್ನು ಅರಿತವಳಲ್ಲವಲ್ಲಾ ಎಂದು ಕೇಳಿದಳು. ನೋಡಿದಿರಾ! ನಿಮ್ಮ ಹಾಗೆ ಅವಳು ಆಲೋಚನೆ ಮಾಡಲಿಲ್ಲ ಕಾರಣ–ಮರಿಯಳು ತಂದೆ–ತಾಯಿಗೆ, ಸಹೋದರ/ರಿಯರಿಗೆ ವಿಧೇಯಳಾಗಿ ನಡೆಯುತ್ತಾ ಶುದ್ಧ ಮನಸ್ಸಿನಿಂದ ತನ್ನ ನೆರೆಯವರೊಟ್ಟಿಗೆ ಜೀವಿಸುತ್ತಾ ಸರ್ವಶಕ್ತನಾದ ದೇವರ ಮಾತಿಗೆ ಭಯಪಡುತ್ತಿದ್ದಳು. ಅದಕ್ಕಾಗಿಯೇ ದೇವದೂತನೊಟ್ಟಿಗೆ ಮಾತಾಡಿದಳು.

ಸರ್ವಶಕ್ತನಾದ ದೇವರ ಮಗುವೇ ನೀನು ಕುಟುಂಬದಲ್ಲಿ ಎಲ್ಲರೊಟ್ಟಿಗೆ ಪ್ರೀತಿಯಿಂದ ನಡೆದುಕೊಳ್ಳುವುದಾದರೆ ನಿನ್ನ ಬಳಿ ಆತನು ಮಾತನಾಡುವಾಗ ಯಾವುದೇ ತರವಾದಂತಹ ಭಯ ಬರುವುದಿಲ್ಲ. ಯಾವ ಕೆಟ್ಟ ಆಲೋಚನೆಗಳು ನಿನ್ನನ್ನು ಪೀಡಿಸುವುದಿಲ್ಲ. ನೀನು ಕುಟುಂಬ ಸದಸ್ಯರಿಗೆ ಮೋಸ ಮಾಡಿ ಲೋಕದ ವ್ಯಾಮೋಹದಿಂದ ತಿರುಗಾಡುತ್ತಾ ಜೀವನವನ್ನು ನಿನ್ನ ಇಷ್ಟದ ಪ್ರಕಾರ ನಡಿಸಿಕೊಂಡು ಹೋಗುವುದಾದರೆ ಪರಲೋಕದ ದೇವರು ಮಾತನಾಡುವಾಗ ನಿನಗೆ ಅರ್ಥವಾಗುವುದಿಲ್ಲ.

ನಿನ್ನ ತಂದೆ–ತಾಯಿಯ ಮಾತನ್ನು ಕೇಳಬೇಕು, ಮತ್ತು ಕರ್ತನ ಬಳಿ ನಡೆಸುತ್ತಿರುವ ನಿನ್ನ ಆತ್ಮೀಕ ತಂದೆ ಅಥವಾ ತಾಯಿಯ ಮಾತಿಗೆ ವಿಧೇಯಳಾ/ನಾ/ಗಿ ಅವರು ಹೇಳುವ ಮಾತನ್ನು ಕೇಳಬೇಕು. ನಿನ್ನ ನೆರೆಯವರೊಟ್ಟಿಗೆ ಪ್ರೀತಿಯಿಂದ ನಡೆದುಕೊಳ್ಳಬೇಕು. ಉತ್ತಮ ರೀತಿಯಲ್ಲಿ ಮರಿಯಳು ಸರ್ವಶಕ್ತನಾದ ದೇವರ ಚಿತ್ತದ ಪ್ರಕಾರ ಜೀವನವನ್ನು ಸಾಗಿಸುತ್ತಾ ಇದ್ದದ್ದಕ್ಕಾಗಿಯೇ ಅವಳನ್ನು ಪರಲೋಕದಿಂದ ನೋಡಿದ ದೇವರು ಆಕೆಯ ಗರ್ಭವನ್ನು ಆರಿಸಿಕೊಂಡಿದ್ದು.

ಮರಿಯಳು ಯಾವ ಪುರುಷನೊಟ್ಟಿಗೆ ಮಾತಾಡದೇ, ನೋಡದೇ, ಸ್ನೇಹ ಬೆಳಸದೇ ಇರುತ್ತಿದ್ದ ಸಮಯದಲ್ಲಿ ಆಕೆಗೆ ಸರ್ವಶಕ್ತನಾದ ದೇವರ ಸಂದೇಶವು ಬಂದಾಗ ಆಕೆಯ ಮನಸ್ಸಿಗೆ ಏನು ಪರಿಣಾಮ ಬೀರಿರಬಹುದು, ಹೃದಯದಲ್ಲಿ ಏನಾಗಿರಬಹುದು, ನೀವೇ ಆಲೋಚಿಸಿರಿ. ಮರಿಯಳು ಮಹೋನ್ನತನಾದ ದೇವರನ್ನು ಪ್ರೀತಿಸುವ ಕಾರಣ ಅವಳು ಕಂಡ ದೂತನಿಗೆ ಹೀಗೆ ಹೇಳಿದಳು – "ಇಗೋ, ನಾನು

ಕರ್ತನ ದಾಸಿ; ನಿನ್ನ ಮಾತಿನಂತೆ ನನಗಾಗಲಿ ಅಂದಳು." ಎಷ್ಟು ಪ್ರೀತಿ ತ್ರಿಐಕ್ಯ ದೇವರ ಮೇಲೆ ಇಟ್ಟಿರುವುದಾದರೆ ಇಂತಹ ಧೈರ್ಯದ ಮಾತನ್ನು ಹೇಳಲು ಆಕೆಗೆ ಸಾಧ್ಯವಾಯಿತು. ಕರ್ತನು ಹೊರಗಿನ ವೇಷವನ್ನು ನೋಡುವುದಿಲ್ಲ; ನನ್ನ ಅಂತರಂಗ ಹೃದಯವನ್ನೇ ನೋಡುತ್ತಾನೆ ಎಂದು ಅವಳು ತಿಳಿದು ಕೊಂಡಿದ್ದಳು. ಅದಕ್ಕಾಗಿಯೇ ಶರೀರಿ–ಆತ್ಮ–ಪ್ರಾಣವನ್ನು ಸರ್ವಶಕ್ತನಾದ ದೇವರಿಗೆ ಒಪ್ಪಿಸಿಕೊಟ್ಟಳು. ಆಗಲೇ ಅವಳ ಮೇಲೆ 'ಪರಲೋಕದ ಪ್ರೀತಿ' ಸಂಪೂರ್ಣವಾಗಿ ತುಂಬಿಕೊಂಡಿತು.

"ನಿನ್ನ ಮೇಲೆ ಪವಿತ್ರಾತ್ಮ ಬರುವದು; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು; ಆದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು" (ಲೂಕ 1:35) ಹೀಗೆ ತಂದೆ ದೇವರು, ಪವಿತ್ರಾತ್ಮನು, ಯೇಸುಕ್ರಿಸ್ತನನ್ನು ಮರಿಯಳ ಗರ್ಭದಲ್ಲಿ ಕಳುಹಿಸಲು ಪರಲೋಕದಿಂದ ಇಳಿದು ಬಂದರು. ಆಹಾ ಎಂಥಹ ಸೌಭಾಗ್ಯವನ್ನು ಆ ಮರಿಯಳು ಹೊಂದಿದಳೆಂದು ನೋಡಿದರೆ ಆಶ್ಚರ್ಯವಾಗುತ್ತದೆ.

ಈ ಹೊತ್ತು 'ಪರಲೋಕದ ಪ್ರೀತಿ'ಯನ್ನು ಪಡೆಯಬೇಕೆಂಬ ಹಂಬಲ ನಿನಗಿರುವುದಾದರೆ ಕರ್ತನ ಚಿತ್ತವನ್ನು ನಿನ್ನ ಜೀವನದಲ್ಲಿ ಅರ್ಥಮಾಡಿಕೊಂಡು ನೆರವೇರಲು ಒಪ್ಪಿಸಿಕೊಡು. ಆಗ ತತ್‌ಕ್ಷಣೇ 'ಪರಲೋಕದ ಪ್ರೀತಿ' ನಿನ್ನ ಮೇಲೆ ಎರಗಿ ಬರುತ್ತದೆ. ಈ ಲೋಕದಲ್ಲಿ ಕರ್ತನು ನಿನಗೆ ನೇಮಕ ಮಾಡಿರುವ ಕಾರ್ಯವನ್ನು ಮಾಡುವುದೇ ನಿನ್ನ ಕರ್ತವ್ಯವಾಗಿದೆ ಆತನ ಉದ್ದೇಶವನ್ನು ನೆರವೇರಿಸುವ 'ಪರಲೋಕದ ಪ್ರೀತಿ'ಯಲ್ಲಿ ಸೇರಿದ ಮರಿಯಳ ಹಾಗೇ ನೀನೂ ಸೇರಬೇಕೆಂದೇ ನಮ್ಮ ರಕ್ಷಕನಾದ ದೇವರು ಆಸೆಪಡುತ್ತಿರುವುದು.

**ಇಲ್ಲಿ ಮತ್ತೊಂದು ಉತ್ತಮವಾದ ಕಥೆಯನ್ನು ನೋಡೋಣ :-**

ನೀನು ಸರ್ವಶಕ್ತನಾದ ದೇವರ ಪ್ರೀತಿಯನ್ನು ಬಿಟ್ಟು ಬೇರೆ ಪ್ರೀತಿಯನ್ನು ಹುಡುಕಿಕೊಂಡು ಹೋಗುವುದಾದರೆ ಅದರಿಂದ ಯಾವ ಪ್ರಯೋಜನವಿಲ್ಲ. ಒಂದು ತಂದೆಗೆ ಇಬ್ಬರು ಮಕ್ಕಳು ಇದ್ದರು. ಅವರಲ್ಲಿ ಕಿರೀಮಗನು ತಂದೆಗೆ–ಅಪ್ಪಾ ಆಸ್ತಿಯಲ್ಲಿ ಬರಬೇಕಾದ ಪಾಲನ್ನು ಕೊಡು ಎಂದನು. ಆಗ ಅಪ್ಪನು ಮಗನು ಕೇಳುವ ಮಾತಿಗೆ ಏನೂ ಉತ್ತರಕೊಡದೇ ಅವನು ಕೇಳಿದ ಆಸ್ತಿಯನ್ನು ಇಬ್ಬರಿಗೂ ಒಂದೇ ಸಾರಿ ಕೊಟ್ಟು ಬಿಟ್ಟನು. ಆಗ ಕಿರೀಮಗನಿಗೆ ತುಂಬ ಸಂತೋಷವಾಯಿತು. ಅವನ ಹೃದಯದಿಂದ ತಂದೆಯ ಪ್ರೀತಿ ದೂರವಾಯಿತು, ಸರ್ವಶಕ್ತನಾದ ದೇವರ ಭಯ ಪೂರ್ಣವಾಗಿ ಬಿದ್ದು ಹೋಯಿತು. ಅವನನ್ನು ಕೇಳುವವರು ಯಾರು ಇಲ್ಲ ಈಗ ಅವನೇ ಮಹಾರಾಜ.

ತಂದೆ ಕೊಟ್ಟ ಹಣವನ್ನು ತೆಗೆದುಕೊಂಡು ದೇಶವನ್ನು ಸುತ್ತಿದನು. ಸ್ನೇಹಿತರೊಟ್ಟಿಗೆ ಸೇರಿ ಸಿನಿಮಾ ನೋಡುತ್ತಾ, ಇಷ್ಟ ಬಂದ ಸ್ತ್ರೀಯರೊಟ್ಟಿಗೆ ಸಮಯವನ್ನು ಕಳೆದುಕೊಂಡು, ಬಾರ್, ಕ್ಲಬ್, ಜೂಜು ಎನ್ನುತ್ತಾ ಈ ಲೋಕದ ಆಢಂಭರಕ್ಕೆ ಒಳಗಾದನು. ಅವನು ಇದೇ ನನಗೆ ಸ್ವರ್ಗ, ಇದರಲ್ಲಿ ಎಲ್ಲಾ ಸಿಗುತ್ತದೆ. ಹಣ ಇದ್ದರೆ ನಾನು ಈ ಲೋಕವನ್ನೇ ನನ್ನದೆನಿಸಿಕೊಳ್ಳುತ್ತೇನೆ ಎಂಬ ಅಹಂಕಾರದಿಂದ ಹಣ ಇರುವವರೆಗೂ ಮೆರೆದನು. ದಿನ-ದಿನ ಕಳೆಯುತ್ತಾ ಹಣ ಕಡಿಮೆಯಾಯಿತು, ಹಣ ಕಡಿಮೆಯಾದಾಗ ದೇಶ ಸುತ್ತಾಡುವುದನ್ನು ಬಿಟ್ಟನು, ಆ ದೇಶಬಿಟ್ಟಾಗ ಹುಡುಗಿಯರು ಕೈ ಕೊಟ್ಟರು; ಆಗ ಸ್ನೇಹಿತರು ಅವನಿಂದ ಮೆಲ್ಲನೆ ಜಾರಿಕೊಂಡರು. ಈಗ ಕಿರಿ ಮಗ ಅಲೆದಾಡುವ ಪರದೇಶಿಯಾದನು. ಜೀವಿಸಲು ಕೆಲಸ ಹುಡುಕಿದನು ಆದರೆ ಕೆಲಸ ಸಿಗಲೇ ಇಲ್ಲಾ.. . . ! ಕೊನೆಯಲ್ಲಿ ಯಾವ ಕೆಲಸ ಸಿಕ್ಕಿರಬಹುದು!

"ಆ ದೇಶದ ನಿವಾಸಿಗಳೊಳಗೆ ಒಬ್ಬನಲ್ಲಿ ಸೇರಿಕೊಂಡನು; ಆ ಮನುಷ್ಯನು ಹಂದಿಗಳನ್ನು ಮೇಯಿಸುವುದಕ್ಕೆ ಅವನನ್ನು ತನ್ನ ಹೊಲಗಳಿಗೆ ಕಳುಹಿಸಿದನು, ಹೀಗಿರಲಾಗಿ ಅವನು ಹಂದಿ ತಿನ್ನುತ್ತಿದ್ದ ಕಾಯಿಗಳನ್ನಾದರೂ ತಿಂದು ಹಸಿವನ್ನು ತೀರಿಸಿಕೊಳ್ಳಬೇಕೆಂದು ಆಶೆಪಟ್ಟನು. ಆದರೂ ಯಾರೂ ಅವನಿಗೆ ಕೊಡಲಿಲ್ಲ." (ಲೂಕ 15:15-16) ನೋಡಿ ಎಂಥ ಗತಿ ಬಂತು. ದುಡ್ಡು ಇದ್ದರೆ ಪರಲೋಕದ ದೇವರು ಸಹಾ ನನ್ನ ಜೇಬಿನಲ್ಲಿ ಇರುತ್ತಾರೆ ಎನ್ನುವ ವ್ಯಕ್ತಿಗಳಿಗೆ ಕೊನೆಯಲ್ಲಿ ಇದೇ ಗತಿ.

ಯಾರು 'ದೇವರ ಪರಲೋಕದ ಪ್ರೀತಿ'ಯನ್ನು ಕಂಡು ಕೊಳ್ಳುತ್ತಾರೋ ಅವರೇ ಧನ್ಯರು. ಅದ್ವಿತೀಯನಾದ ದೇವರ ಪ್ರೀತಿಯನ್ನು ತಿಳಿದಂತ ಮರಿಯಳು 'ಪರಲೋಕದ ಪ್ರೀತಿ'ಯನ್ನು ಬಹು ಬೇಗನೇ ಹೊಂದಿಕೊಂಡಳು. ಕರ್ತನು ಆಕೆಯ ಮೇಲೆ ಇಟ್ಟ ಉದ್ದೇಶವು ನೆರವೇರಿತು. ಈಗಲೂ ಅವಳ ಹೆಸರನ್ನು ಎಲ್ಲರೂ ಸಾಕ್ಷಿಯಾಗಿ ಇಟ್ಟುಕೊಂಡು 'ಪರಲೋಕ ದೇವರ' ಚಿತ್ತ ತನ್ನಲ್ಲಿ ನೆರವೇರಬೇಕೆಂದು ಪ್ರಾರ್ಥಿಸುತ್ತಿದ್ದಾರೆ. ಇಂದು ನೀನು ಸಹ ಮರಿಯಳ ರೀತಿ ನಿನ್ನ ಕುಟುಂಬದಲ್ಲಿ ಜೀವಿಸಬೇಕು ನಿತ್ಯನಾದ ತಂದೆಯ ದಯೆಯನ್ನು ಹೊಂದಿಕೊಳ್ಳಬೇಕು ಎಂದು ಒಪ್ಪಿಸಿ ಕೊಡುವುದಾದರೆ ಕರ್ತನು ನಿನ್ನನ್ನು 'ಪರಲೋಕದ ಪ್ರೀತಿ'ಯಿಂದ ಆಶೀರ್ವದಿಸುತ್ತಾನೆ.

ಸರ್ವಶಕ್ತನಾದ ದೇವರ ಮಗುವೇ ನೀನು ಕಿರೀ ಮಗನ ರೀತಿಯಲ್ಲಿ ನಿನ್ನ ಜೀವನ ನಡೆಸುವುದಾದರೆ ನಿನ್ನೊಂದಿಗೆ ಯಾರೂ ಬರಲ್ಲ. ಆದರೆ ಮಹೋನ್ನತನಾದ ದೇವರಿಗೆ ಒಳ್ಳೇ ಮಗನಾ/ಳಾ/ಗಿ ನೀನು ಜೀವಿಸುವುದಾದರೆ ನಿನ್ನ ಹೃದಯದಲ್ಲಿ 'ದೇವರ ಪರಲೋಕದ ಪ್ರೀತಿ' ಸಿಕ್ಕುವುದು. ನಿನ್ನ ದಾರಿಯು ಎಲ್ಲಾ ರೀತಿಯಲ್ಲಿಯೂ ನಿರ್ಭಯವಾಗಿ ಇರುತ್ತದೆ. ತತ್ಕ್ಷಣವೇ ಬರುವ ಎಲ್ಲಾ ತೊಂದರೆಗಳಿಂದ

ದೂರವಾಗುತ್ತೀ, ಎಂಥಹಾ ಅಪಾಯಗಳು ಬರುವುದಾದರೂ ಅದಕ್ಕೆ ನೀನು ಅಂಜುವುದಿಲ್ಲ. ಯಾಕೆಂದರೆ ಕರ್ತನು ನಿನ್ನ ಪ್ರೀತಿಗೆ ಆಧಾರನಾಗಿದ್ದು ಎಲ್ಲಾ ತೊಂದರೆಗಳಿಂದ ಕಾಪಾಡುವನು. "ನಿನ್ನ ಎಲ್ಲಾ ನಡವಳಿಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು; ಆತನೇ ನಿನ್ನ ಮಾರ್ಗಗಳನ್ನು ಸರಾಗ ಮಾಡುವನು ನೀನೇ ಬುದ್ಧಿವಂತನು ಎಂದೆಣಿಸದೆ ಕರ್ತನಿಗೆ ಭಯಪಟ್ಟು ಕೆಟ್ಟದ್ದನ್ನು ತೊರೆದುಬಿಡು." (ಜ್ಞಾನೋಕ್ತಿ 3:6,7)

ನಿನ್ನ ಬುದ್ಧಿಯಿಂದ, ಭುಜಬಲದಿಂದ, ಪರಾಕ್ರಮದಿಂದ, ಜ್ಞಾನದಿಂದ ಏನೂ ಮಾಡಲು ಸಾಧ್ಯವಿಲ್ಲ. ಪ್ರಯಾಸಪಟ್ಟು ಏನಾದರು ಒಂದು ಕಾರ್ಯ ಮಾಡಿದರೂ ಯಾವ ಪ್ರಯೋಜನವೂ ಸಿಗುವುದಿಲ್ಲ. ಕಾರಣ ನಿನಗೆ ಜ್ಞಾನಕೊಟ್ಟ ಸರ್ವಶಕ್ತನಾದ ದೇವರನ್ನೇ ಮರೆತು, ನಿನ್ನಿಷ್ಟದ ರೀತಿಯಲ್ಲಿ ಏನೇ ಕೆಲಸ ಮಾಡಿದಾರೂ ಅದರಿಂದ ಜಯವಾಗಲಿ. ಸಮಾಧಾನವಾಗಲಿ ಸಿಗುವುದಿಲ್ಲ.

ಇಲ್ಲಿ ಕಿರೀ ಮಗನು ಮನಃತಿರುಗಿ ಬರುವ ಸಮಯವು ಬರುತ್ತದೆ. ಆತನ ಹಸಿವು ಆತನಿಗೆ ಪಾಠ ಕಲಿಸಿತು, ತಂದೆಯ ಮನೆಯಲ್ಲಿ ಕೆಲಸದ ಆಳುಗಳಿಗೂ ಊಟಕ್ಕೆ ಕೊರತೆ ಇಲ್ಲದಿರುವುದನ್ನು ನೆನೆಸಿ ನನ್ನ ತಂದೆಯ ಬಳಿ ಹೋಗಿ ನಾನು ಕ್ಷಮಾಪಣೆ ಹೊಂದಿಕೊಂಡು ತಂದೆಗೆ ಆಳಾಗಿ ಜೀವಿಸುತ್ತೇನೆಂದು ತೀರ್ಮಾನಿಸಿ ಹಿಂದಿರುಗಿ ತಂದೆಯ ಬಳಿಗೆ ಹೋಗುತ್ತಾನೆ. "ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ" ಎಂದು ತನ್ನನ್ನು ತಂದೆಯ ಬಳಿಯಲ್ಲಿ ತಗ್ಗಿಸಿಕೊಂಡನು. ಅವನು ನೆನೆಸದ ರೀತಿಯಲ್ಲಿ ಅವನ ತಂದೆ ಅವನಿಗೆ 'ಪರಲೋಕದ ಪ್ರೀತಿ'ಯನ್ನು ತೋರಿಸಿ ಮಗನನ್ನು ಆಳಾಗಿ ಅಲ್ಲ ತನ್ನ ಜೀವವಾಗಿ ಪ್ರೀತಿಸಿ ಸೇರಿಸಿಕೊಳ್ಳುತ್ತಾನೆ. ಯಾವಾಗ ನಿನ್ನ ತಪ್ಪು ನಿನಗೆ ಅರಿವಾಗುತ್ತದೋ, ಪಶ್ಚಾತ್ತಾಪ ನಿನ್ನಲ್ಲಿ ಬರುತ್ತದೋ ಆಗಲೇ ಕರ್ತನು ನಿನ್ನನ್ನು ಆಶೀರ್ವದಿಸುತ್ತಾನೆ. ಕೇಡು ತೊಂದರೆಗಳಿಂದ ತಪ್ಪಿಸುತ್ತಾನೆ, ನಿನ್ನನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸುತ್ತಾನೆ. ನೀನು ಆತನ ಜ್ಞಾನವನ್ನು ಹೊಂದಿಕೊಳ್ಳಲು, ಪ್ರೀತಿಯ ಬೆಲೆಯನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಸ್ವಂತ ಜ್ಞಾನದಿಂದ ನೀನು ನಡೆಯುವಿಯಾದರೆ 'ಪರಲೋಕದ ಪ್ರೀತಿ' ಅರ್ಥವಾಗುವುದಿಲ್ಲ, ಎಷ್ಟು ಹುಡುಕಿದರೂ ಅದು ನಿನಗೆ ಸಿಗುವುದಿಲ್ಲ.

ನೀನು ನಡೆಯುವ ದಾರಿಯಿಂದ ಹೊರಗೆಬಾ; ಆಗಲೇ ಒಳ್ಳೇ ದಾರಿ ಸಿಗಲು ಸಾಧ್ಯ. ನೀನು ನಿನ್ನ ಆಲೋಚನೆಯ ಪ್ರಕಾರ ಹೋಗುತ್ತಿರುವ ದಾರಿ ನಿನಗೆ ಮಾತ್ರ ಇಷ್ಟವಾಗುತ್ತೆ; ಆದರೆ ನಿನ್ನ ಮನಸಾಕ್ಷಿಗೆ ಅದು ಇಷ್ಟವಾಗುವುದಿಲ್ಲ, ನಿನ್ನ ಮನಸಾಕ್ಷಿಗೆ

ಮೋಸಮಾಡಲು ಸಾಧ್ಯವಿಲ್ಲ. ಈ ಲೋಕದಲ್ಲಿ ನೀನು ಪ್ರೀತಿಸುವ ಪ್ರತಿಯೊಬ್ಬರನ್ನೂ ಮಾತಿನಿಂದ ಕ್ರಿಯೆಯಿಂದ ಮೋಸಪಡಿಸಬಹುದು. ಆದರೆ ನಿನ್ನನ್ನು ಸೃಷ್ಟಿ ಮಾಡಿರುವ ತಂದೆಯಾದ ದೇವರನ್ನು ಮತ್ತು ನಿನ್ನ ಮನಸಾಕ್ಷಿಯನ್ನು ಮೋಸ ಮಾಡಲು ಸಾಧ್ಯವಿಲ್ಲ. ಮನಸಾಕ್ಷಿಗೆ ಸರಿಯಾಗಿ ನೀನು ನಡೆಯುವಿಯಾದರೆ ಖಂಡಿತವಾಗಿ ನಿಜವಾದ ಪ್ರೀತಿ ನಿನ್ನಲ್ಲಿ ತುಂಬಿರುತ್ತದೆ. ಆಗ ಕರ್ತನು ನಿನ್ನನ್ನು ನಾಶದಿಂದ ತಪ್ಪಿಸುವನು, ಆತನ ಪ್ರೀತಿ-ಕೃಪೆಗಳಿಂದ ನಿನ್ನನ್ನು ಶೃಂಗರಿಸಿ ನಿನ್ನ ಆಶೆಯನ್ನು ಪೂರ್ಣಗೊಳಿಸುವನು. ನಿಜವಾದ 'ಪರಲೋಕದ ಪ್ರೀತಿ'ಗಾಗಿ ಪರಿಶ್ರಮಪಡು. ಕಿರೀ ಮಗನ ರೀತಿಯಲ್ಲಿ ಹಣಕ್ಕಾಗಿ ಆಸೆ ಪಡುತ್ತಿರುವುದಾದರೆ ಈಗಲೇ ಬದಲಾವಣೆ ಮಾಡಿಕೋ. ಆ ಕಿರೀ ಮಗನು ಕೆಟ್ಟ ನಂತರ ಬುದ್ಧಿ ಕಲಿತನು, ನೀನು ಒಂದು ವೇಳೆ ನಾಶನದ ಮಾರ್ಗದಲ್ಲಿದ್ದೀಯೋ ಏನೋ ಪರಿಶೀಲನೆ ಮಾಡಿಕೊಂಡು 'ತಂದೆಯ ಪರಲೋಕದ ಪ್ರೀತಿ'ಗೆ ಹಿಂತಿರುಗಿ ಬಾ. ಕರ್ತನು ನಿನ್ನನ್ನು ಅಪ್ಪಿಕೊಂಡು ಮುದ್ದಾಡಿ ತನ್ನ ನಿಜವಾದ ಪ್ರೀತಿಯಲ್ಲಿಯೂ ಪರಿಶುದ್ಧತೆಯಲ್ಲಿಯೂ ನಿನ್ನನ್ನು ನಡೆಸುವನು.

ದೇವರ ಮಗುವೇ, ಆತನು ನಿನ್ನನ್ನು ನಿನ್ನ ಪಾಪಗಳಿಗೆ ಸರಿಯಾಗಿ ಶಿಕ್ಷಿಸಲಿಲ್ಲ; ನಿನ್ನ ಅಪರಾಧಗಳಿಗೆ ತಕ್ಕಂತೆ ದಂಡಿಸಲಿಲ್ಲ. ಯಾಕೆಂದರೆ ಆತನು ಪ್ರೀತಿಸ್ವರೂಪನು. ಆ ಕ್ಷಮಿಸುವಂತಹ 'ಪರಲೋಕದ ಪ್ರೀತಿ'ಯನ್ನು ಬಿಟ್ಟು ಕ್ಷಮಿಸದಂತಹ 'ಲೋಕದ ಪ್ರೀತಿ'ಯನ್ನು ಹುಡುಕುವುದು ನಿನ್ನ ದೃಷ್ಟಿಯಲ್ಲಿ ನ್ಯಾಯವಾಗಿದೆಯಾ? ಎಂದು ಒಮ್ಮೆ ಚಿಂತಿಸಿ ನೋಡು.

ನೀನು ಯಾವ ಪರಿಸ್ಥಿತಿಯಲ್ಲಿ ಇದ್ದೀಯಾ? ಯಾವ ರೀತಿ ಈ ಲೋಕದಲ್ಲಿ ಜೀವಿಸುತ್ತಿದ್ದೀಯಾ? ಒಂದು ಸಾರಿ ಯೋಚಿಸಿ ಅದರಿಂದ ಹೊರಗೆ ಬಂದು, ನಿಜವಾದ ಪ್ರೀತಿಗೆ ನಿನ್ನ ಸಮಯವನ್ನು ಕೊಡು. ಒಂದು ಸಾರಿ ಆತನ ಮುಖವನ್ನು ನೋಡಿ ಪಾಪವನ್ನು ಒಪ್ಪಿಕೊಳ್ಳುವುದಾದರೆ ಕಿರೀ ಮಗನ ರೀತಿಯಲ್ಲಿ ಹಂದಿ ಕಾಯುವ ಕೆಲಸ ನಿನಗೆ ಸಿಗುವುದಿಲ್ಲ; ಒಳ್ಳೇ ಕುರಿಗಳನ್ನು ಮೇಯಿಸುವ ಕುರುಬನ ಹಾಗೆ ಕರ್ತನು ನಿನ್ನನ್ನು ನಿಲ್ಲಿಸುತ್ತಾನೆ. ಯಾವುದು ಬೇಕು-ಕುರಿನಾ! ಹಂದಿನಾ! ಯೋಚಿಸಿ 'ಪರಲೋಕದ ಪ್ರೀತಿ'ಗೆ ಪ್ರಯಾಸಪಟ್ಟು, 'ಪ್ರೀತಿಯ ಯಶಸ್ಸಿ'ನ ಕಡೆಗೆ ನಿನ್ನ ಪ್ರಯಾಣವನ್ನು ಸಾಗಿಸಿ, ಕರ್ತನಿಂದ ಬರುವ ಆಶೀರ್ವಾದವನ್ನು ಹೊಂದಿಕೋ.

**"ನಿನ್ನನ್ನು ಬೇಟೆಗಾರನ ಬಲೆಯಿಂದ ಬಿಡಿಸುವನು." ಆಮೆನ್**

## 4. ಶಾಶ್ವತವಾದ ಪ್ರೀತಿ

"ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ, ಏನೆಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ." (ಯೋಹಾನ 13:34)

ಅಬ್ರಹಾಮನ ದೇವರು ಪ್ರೀತಿಸ್ವರೂಪಿಯಾಗಿದ್ದಾನೆ, ಆತನು ನಿನ್ನನ್ನು ಬಹಳವಾಗಿ ಪ್ರೀತಿಸುತ್ತಾ ಸದಾಕಾಲ ನಿನ್ನೊಂದಿಗೆ ಇರಲು ಬಯಸುತ್ತಾನೆ. ಯಾಕೆಂದರೆ ಆತನು ನಮ್ಮ ಮೇಲೆ ಇಟ್ಟಿರುವ ಪ್ರೀತಿಯು ಅಲ್ಪಕಾಲ ಮಾತ್ರವೇ ನಮ್ಮ ಬಳಿ ಇದ್ದು ನಂತರ ಕಣ್ಮರೆಯಾಗುವಂತಹ ಪ್ರೀತಿಯಲ್ಲ, ಅದು ನಿತ್ಯ-ನಿರಂತರವಾದ 'ಶಾಶ್ವತವಾದ ಪ್ರೀತಿ'ಯಾಗಿದೆ. ಆತನು ಸರ್ವಜ್ಞಾನಿ; ನಿಮ್ಮನ್ನು ಪ್ರೀತಿಸಬೇಕೆಂತಲೂ ಒಳ್ಳೆಯದನ್ನು ಮಾಡಬೇಕೆಂತಲೂ ಆತನಿಗೆ ತಿಳಿದಿದೆ. ನಿನ್ನನ್ನು ಸೃಷ್ಟಿಸಿದ ಕರ್ತನಿಗೆ ನಿನ್ನನ್ನು ಒಪ್ಪಿಸಿಕೊಡುವುದಾದರೆ ಆತನು ಇಂದೇ 'ಶಾಶ್ವತವಾದ ಪ್ರೀತಿ'ಯಿಂದ ನಿನ್ನನ್ನು ತುಂಬಿಸುತ್ತಾನೆ. ಯಾರನ್ನೂ ಕರ್ತನು ಒತ್ತಾಯ ಪಡಿಸುವುದಿಲ್ಲ. ಎಲ್ಲರೂ ಸ್ವ-ಇಚ್ಛೆಯಿಂದ ತನ್ನನ್ನು ಪ್ರೀತಿಸಬೇಕೆಂದು ಆತನು ಬಯಸುತ್ತಾನೆ.

ಸರ್ವಶಕ್ತನಾದ ದೇವರ ಮಗುವೇ, ಕರ್ತನ ಪ್ರೀತಿಯನ್ನು ವರ್ಣಿಸಲು ಆಗುವುದಿಲ್ಲ. ಎಲ್ಲಾ ಜನರು ಮಹೋನ್ನತನಾದ ದೇವರ ಪ್ರೀತಿಯನ್ನು ಕಂಡುಕೊಂಡು ಆತನ ಕಡೆಗೆ ತಿರುಗಿಕೊಂಡು ಒಳ್ಳೇಯದನ್ನೇ ಮಾಡಬೇಕೆಂದು ಆತನು ಇಷ್ಟಪಡುತ್ತಾನೆ. ಆತನು ನಿನ್ನನ್ನು ಪರಿಪೂರ್ಣನನ್ನಾಗಿ ಮಾಡಬಲ್ಲನು; ಆತನನ್ನು ಹೃದಯಪೂರ್ವಕವಾಗಿ ನಿನ್ನ ಸ್ವಂತ 'ರಕ್ಷಕ'ನೆಂದು ಒಪ್ಪಿಕೊಂಡು ರಕ್ಷಕನಾಗಿ ಅಂಗೀಕರಿಸಿಕೊಂಡಿರುವುದಾದರೆ ನಿನ್ನ ಎಲ್ಲಾ ತೊಂದರೆಗಳಿಂದ ಕ್ರಮೇಣವಾಗಿ ಆತನು ನಿನ್ನನ್ನು ಬಿಡಿಸುವನು. ಹೊಸ ಮಾರ್ಗವನ್ನು ತೋರಿಸಿ ನೂತನ ಜೀವನವನ್ನು ಅನುಗ್ರಹಿಸುವನು.

ನೀನು ಮಾಡಿರುವ ಸಕಲ ತಪ್ಪುಗಳನ್ನು ಕ್ಷಮಿಸಿ ಪರಿಶುದ್ಧಗೊಳಿಸುವನು. "ನಾನು ದ್ರೋಹಿ ಎಂದು ನಾನೇ ಒಪ್ಪಿಕೊಂಡಿದ್ದೇನೆ; ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ. ನಿನಗೇ ಕೇವಲ ನಿನಗೆ ತಪ್ಪು ಮಾಡಿದ್ದೇನೆ; ನಿನ್ನ ದೃಷ್ಟಿಗೆ ಕೆಟ್ಟದ್ದಾಗಿರುವದನ್ನೇ ಮಾಡಿದ್ದೇನೆ." (ಕೀರ್ತನೆ 51:3,4) ಎಂದು ಒಪ್ಪಿಕೊಳ್ಳುವುದಾದರೆ

ನಿನ್ನಲ್ಲಿ ಆತನ ಪ್ರೀತಿ ಶಾಶ್ವತವಾಗಿ ನಿಲ್ಲುತ್ತದೆ.

ನೀನು ಕಷ್ಟಕಾಲದಲ್ಲಿ ಜನರ ಮುಂದೆ ಕೈಚಾಚುವಾಗ ಒಂದು ಸಾರಿ ಅಥವಾ ಎರಡುಸಾರಿ ನೀನು ಕೇಳಿದ್ದನ್ನು ಕೊಡುತ್ತಾರೆ. ನಂತರ ಅವರು ನಿನಗೆ ಕೊಡುವುದಕ್ಕೆ ಮನಸ್ಸನ್ನು ಬೇರೆ ಮಾಡಿಕೊಳ್ಳುತ್ತಾರೆ, ಈ ವ್ಯಕ್ತಿಗೆ ಕೊಟ್ಟು-ಕೊಟ್ಟು ನಾನೇ ಅಭ್ಯಾಸ ಮಾಡಿಕೊಂಡು ತಪ್ಪುಮಾಡಿದ್ದೇನೆಂದು ಹೇಳಲು ಪ್ರಾರಂಭಿಸುತ್ತಾರೆ. ಆದರೆ ಕರ್ತನನ್ನು ಕೇಳುವುದಾದರೆ ಸದಾಕಾಲ ನಿನಗೆ ಕೊರತೆಯಿಲ್ಲದೆ ಸಮೃದ್ಧಿಯಾಗಿ ಕೊಡಲು ಇಷ್ಟವುಳ್ಳವನಾಗಿದ್ದಾನೆ. ಕರ್ತನು ನಿನಗೆ ಹೇರಳವಾಗಿ ಅನುಗ್ರಹಿಸಬೇಕೆಂದು ಮನಸುಳ್ಳವನಾಗಿದ್ದಾನೆ. ಯಾಕೆಂದರೆ ಕರ್ತನ ಬಳಿಯಲ್ಲಿ "ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು." (ಮತ್ತಾಯ 7;8)

ಕರ್ತನು ತನ್ನ 'ಶಾಶ್ವತವಾದ ಪ್ರೀತಿ'ಯಲ್ಲಿ ನೀವು ಸೇರುವುದಕ್ಕೆ ಒಂದು ಸುಲಭವಾದ ಮಾರ್ಗವನ್ನು ನಿಮಗೆ ಬೋಧಿಸುತ್ತಿದ್ದಾನೆ. ಈ ಲೋಕದ ಎಲ್ಲಾ ಚಿಂತಾಭಾರವನ್ನು ಬಿಟ್ಟು ನೀವು ಶ್ರದ್ಧೆಯಿಂದ ಆತನ ಮಾತಿಗೆ ಕಿವಿಗೊಡಿರಿ.

ನಿಕೋದೇಮನೆಂಬ ಒಬ್ಬ ಮನುಷ್ಯನು ರಕ್ಷಕನ ಹತ್ತಿರ ಬಂದು ಈ ರೀತಿ ಪ್ರಶ್ನೆಹಾಕಿದನು:-

ನಿಕೋದೇಮನು :- ನೀನು ದೇವರ ಕಡೆಯಿಂದ ಬಂದ ರಕ್ಷಕ ಎಂದು ಬಲ್ಲೆನು. ನೀನು ಮಾಡುವಂತಹ ಈ ಸೂಚಕ ಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವುದು ಯಾರಿಂದಲೂ ಆಗದು ಎಂದಾಗ,

ರಕ್ಷಕನು :- "ನಾನು ನಿನಗೆ ನಿಜ-ನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು" ಅಂದನು.

ನಿಕೋದೇಮನು :- ಮನುಷ್ಯನು ಮುದುಕನಾದ ಮೇಲೆ ಹುಟ್ಟುವುದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರಿಗಿ ಸೇರಿ ಹುಟ್ಟುವದಾದೀತೇ? ಎಂದು ಕೇಳಿದನು.

ರಕ್ಷಕ :- "ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು. ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ. ನೀವು ಹೊಸದಾಗಿ ಹುಟ್ಟಬೇಕು. ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯ ಪಡಬೇಡ. ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು

ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ" ಅಂದನು.

ನಿಕೋದೇಮನು :– ಇದು ಆಗುವುದು ಹೇಗೆ? ಎಂದನು!

ಇಲ್ಲಿ ಇಸ್ರಾಯೇಲ್ ಜನಕ್ಕೆ ಬೋಧಕನಾದ ನಿಕೋದೇಮನು ರಕ್ಷಕನನ್ನು ಪ್ರಶ್ನಿಸುತ್ತಿದ್ದಾನೆ, 'ಮನುಷ್ಯನು ಮುದುಕನಾದ ಮೇಲೆ ಹುಟ್ಟುವುದು ಹೇಗೆಂದು?' ಕರ್ತನು 'ನಿನಗೆ ಇದು ತಿಳಿಯುವುದಿಲ್ಲವಾ?' ಎಂದು ಹಿಂತಿರುಗಿ ಪ್ರಶ್ನಿಸುತ್ತಿದ್ದಾನೆ.

ಜ್ಞಾನವನ್ನು ಕೊಟ್ಟಿರುವ ದೇವರನ್ನು ಪ್ರಶ್ನಿಸಬೇಡಿರಿ, ಕರ್ತನ ವಾಕ್ಯವು ನಿಮ್ಮ ಮುಂದೆಯೇ ಇದೇ ಅದನ್ನು ಬೋಧಿಸುವುದಕ್ಕೆ ಅಭಿಷಿಕ್ತರನ್ನು ನಿನ್ನ ಮುಂದೆ ಕರ್ತನು ಕಳುಹಿಸಿದ್ದಾನೆ. ಆತನ 'ಶಾಶ್ವತವಾದ ಪ್ರೀತಿ' ನಿನ್ನಲ್ಲಿ ನೆಲೆನಿಲ್ಲಿಸಲು ಆತನು ನಿನ್ನನ್ನು ಶುದ್ಧ ಮಾಡಲು ಬಯಸುತ್ತಿದ್ದಾನೆ. ಒಂದು ವೇಳೆ ಅನವಶ್ಯವಾದ ಪ್ರಶ್ನೆಗಳು ನಿನ್ನಲ್ಲಿ ಇರುವುದಾದರೆ ನಿನ್ನಲ್ಲಿ ತಂದೆ ದೇವರ ಪ್ರೀತಿ ಎಲ್ಲಿದೆ? ಪ್ರೀತಿ ಇರುವುದಾದರೆ 'ಪ್ರಶ್ನೆ' ಹಾಕದೇ ಹೇಳುವಂತ ಮಾತಿಗೆ ಕಿವಿಗೊಡತ್ತಾ ಆತನ ಚಿತ್ತವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ನೀನು ಎಲ್ಲರನ್ನು ಮೋಸ ಮಾಡಿಕೊಂಡು, ವಂಚನೆಮಾಡುತ್ತಾ, ಕುಟುಂಬದಲ್ಲಿ ಸರಿಯಾದ ಪ್ರೀತಿ ತೋರದೇ ನಿನ್ನ ಕಾರ್ಯಕ್ಕೆ ಮಾತ್ರ ಸಮಯಕೊಡುವುದಾದರೆ ಸೃಷ್ಟಿ ಕರ್ತನ 'ಶಾಶ್ವತವಾದ ಪ್ರೀತಿ'ಯು ನಿನಗೆ ಯಾವ ರೀತಿ ಅರ್ಥವಾಗುತ್ತೇ ನೀನೇ ಯೋಚಿಸು. ಕರ್ತನು ಹೇಳುವ ಮಾತನ್ನು ಶ್ರದ್ಧೆಯಿಂದ ಕೇಳಿ ಅದನ್ನು ಗ್ರಹಿಸುವುದಾದರೆ ಮಾತ್ರ ತಿರುಗಿ ತಾಯಿಯ ಗರ್ಭದಲ್ಲಿ ಸೇರಿ ಹುಟ್ಟಬೇಕಾಗುವ ಅವಶ್ಯವಿಲ್ಲವೆಂದು ಚೆನ್ನಾಗಿ ಅರ್ಥವಾಗುತ್ತದೆ.

ರಕ್ಷಕನು ನಿನ್ನ ಹೃದಯದೊಳಗೆ ಬಂದಾಗ ನೀನು ಹೊಸ ವ್ಯಕ್ತಿಯಾಗಲು ಸಾಧ್ಯವಾಗುತ್ತದೆ. ಅದಕ್ಕೋಸ್ಕರ ನಿನ್ನ ಹೃದಯದಲ್ಲಿ ಇರುವ ಎಲ್ಲಾ ಭಾರವನ್ನು ತೆಗೆದುಹಾಕು. ಆತನನ್ನು ಪೂರ್ಣವಾಗಿ ಅಂಗೀಕರಿಸಿ ಪಶ್ಚಾತ್ತಾಪದಿಂದ ಕಣ್ಣೀರಿಡು. 'ಶಾಶ್ವತವಾದ ಪ್ರೀತಿ'ಯು ನಿನ್ನಲ್ಲಿ ತುಂಬಲ್ಪಡುತ್ತದೆ.

ರಕ್ಷಕ :– ಆತನನ್ನು ನಂಬುವವನಿಗೆ ತೀರ್ಪು ಆಗುವುದಿಲ್ಲ; ಆದರೆ ನಂಬದವನಿಗೆ ದೇವರ ಒಬ್ಬನೇ ಮಗನಾದ ಯೇಸುವಿನ ಹೆಸರನ್ನು ನಂಬದೆ ಹೋದದರಿಂದ ಆಗಲೇ ತೀರ್ಪು ಆಗಿಹೋಯಿತು. ಆ ತೀರ್ಪು ಏನೆಂದರೆ ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವುದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ

ಹೆಚ್ಚಾಗಿ ಪ್ರೀತಿಸಿದರು. ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವುದಿಲ್ಲ. ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವುದಿಲ್ಲ. ಆದರೆ ಸತ್ಯವನ್ನು ಅನುಸರಿಸಿ ನಡೆಯುವವನು ತಾನು ದೇವರಿಂದ ನಡಿಸಿಕೊಂಡು ತನ್ನ ಕೃತ್ಯಗಳನ್ನು ಮಾಡಿದ್ದೇನೆಂದು ತೋರಿಬರುವಂತೆ ಬೆಳಕಿಗೆ ಬರುತ್ತಾನೆ. ಎಂದು ಹೇಳಿದನು. (ಯೋಹಾನ 3:1–21)

ರಕ್ಷಕನು ನಿನ್ನ ಪಾಪ ದೋಷವನ್ನು ತನ್ನ ಮೇಲೆ ಹಾಕಿಕೊಂಡು ಬಾಧೆಗೆ ಒಳಗಾದನು. ನಿನಗೋಸ್ಕರ ಮೌನವಾಗಿ ಎಲ್ಲವನ್ನು ಸಹಿಸಿಕೊಂಡನು. "ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು." (ಯೆಶಾಯ 53:7) ನಿನಗೋಸ್ಕರ ನಿನ್ನ ಪಾಪ–ಶಾಪಕ್ಕೋಸ್ಕರ ಕ್ರಿಸ್ತನು ಮಾಡಿದ ತ್ಯಾಗವನ್ನು ನೆನಸಿಕೊಳ್ಳಿರಿ, ಪ್ರೀತಿಯ ದೇವರ ಮಕ್ಕಳೇ, ಇದೇ ನಿಜವಾದ 'ಶಾಶ್ವತವಾದ ಪ್ರೀತಿ' ಎನ್ನುವುದು.

ನಿಮ್ಮ ಮನೆಯಲ್ಲಿಯಾಗಲೀ ನಿನ್ನ ಸ್ನೇಹಿತರ ಬಳಿಯಾಗಲಿ ನೀನು ತಪ್ಪು ಮಾಡಿ ಸಿಕ್ಕಿಕೊಳ್ಳುವುದಾದರೆ ಸುಮ್ಮನೇ ಎರಡು ಮಾತು ಬೈದು ಸುಮ್ಮನಾಗುತ್ತಾರಾ! ಇಲ್ಲವೇ ಇಲ್ಲಾ, ಅದೇ ವಿಷಯವನ್ನು ಹೇಳಿ. . . . .ಹೇಳಿ. . . . . ಮನಸ್ಸನ್ನು ಕೊಲ್ಲುತ್ತಾರೆ. ನೆಮ್ಮದಿಯನ್ನು ಕಿತ್ತುಹಾಕುತ್ತಾರೆ ಇದೇ ಮನುಷ್ಯರ ಪ್ರೀತಿ, ಆದರೆ ಅತ್ಯುತ್ತಮವಾದ ದೇವರ ಶಾಶ್ವತವಾದ ಪ್ರೀತಿಯನ್ನು ಗಮನಿಸಿನೋಡು ಆತನು ನಿನಗೋಸ್ಕರ ಎಲ್ಲವನ್ನು ಸಹಿಸಿಕೊಂಡು ಶಿಲುಬೆಯ ಕಂಬವನ್ನೇರಿ, ಭಾದೆಯನ್ನು ಅನುಭವಿಸಿ ಎಲ್ಲಾ ಅವಮಾನವನ್ನೂ ಸಹಿಸಿಕೊಂಡು ನೀನು ಆತನ ಶ್ರಮೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ 'ಶಾಶ್ವತವಾದ ಪ್ರೀತಿ'ಯನ್ನು ತೋರಿಸಿ ತನ್ನ ಪರಿಶುದ್ಧ ರಕ್ತದಿಂದ ನಿನ್ನನ್ನು ಶುದ್ಧಮಾಡಿ ಪುನರ್ ಜನ್ಮ ನೀಡುವುದಕ್ಕಾಗಿ ಕರೆಯುತ್ತಿದ್ದಾನೆ.

"ಬೆಟ್ಟಗಳು ಸ್ಥಳವನ್ನು ಬಿಟ್ಟು ಹೋದಾವು, ಗುಡ್ಡಗಳು ಕದಲಿಯಾವು; ಆದರೆ ನನ್ನ ಕೃಪೆ ನಿನ್ನನ್ನು ಬಿಟ್ಟು ಹೋಗದು" (ಯೆಶಾಯ 52:10)

ನಿನ್ನ ಪಾಪಗಳನ್ನು ಈ ನಿಮಿಷದಲ್ಲಿ ರಕ್ಷಕನಿಗೆ ಒಪ್ಪಿಸಿಕೊಡು; ತಿಳಿದು ತಿಳಿಯದೇ ಮಾಡಿರುವ ಎಲ್ಲಾ ತಪ್ಪುಗಳನ್ನು ಆತನ ಬಳಿ ಕಣ್ಣೀರಿನಿಂದ ಹೇಳಿ ಮೊರೆಯಿಡು. ನೀನು ಒಂದು ವೇಳೆ ಪ್ರೀತಿಮಾಡಿದ ವ್ಯಕ್ತಿಯಿಂದ ಯಾವುದೇ ರೀತಿಯಲ್ಲಿ ಪ್ರೀತಿ ಸಿಗದೇ ಚಿಂತೆಗೆ ಒಳಗಾಗಿರುವುದಾದರೆ ರಕ್ಷಕನ ಪ್ರೀತಿಗೆ ನಿನ್ನ ಮನಸ್ಸನ್ನು ಒಪ್ಪಿಸಿಕೊಡು. ನಿನ್ನನ್ನು ಪರಿಶುದ್ಧವಾದ ಪ್ರೀತಿಯಿಂದ ಪ್ರೀತಿಸಲು ರಕ್ಷಕನು ಕಾತುರದಿಂದ ಕಾಯುತ್ತಿದ್ದಾನೆ. ಆತನ ಪ್ರೀತಿಯು ಶಾಶ್ವತವಾಗಿರುವುದರಿಂದಲೇ ಆತನು

ನಿನ್ನ ಆತ್ಮ ರಕ್ಷಣೆಗಾಗಿ ಬಲಿಯಾಗಿರುವುದು ಈಗಲೇ ನೀನು ನಿನ್ನನ್ನು ಕರ್ತನಿಗೆ ಒಪ್ಪಿಸಿಕೊಟ್ಟು ಆತ್ಮ ರಕ್ಷಣೆಯಲ್ಲಿ ಭದ್ರವಾಗಿ ನಿಂತಿಕೋ.

ರಕ್ಷಕನು ನಿನಗೆ ಪರಲೋಕದಲ್ಲಿ ಕೊಡುವ ಬಹುಮಾನ ನಿತ್ಯಜೀವವಾಗಿದೆ. ಅಷ್ಟು ಮಾತ್ರವೇ ಅಲ್ಲ ಈ ಲೋಕದಲ್ಲಿಯೂ ತನ್ನನ್ನು ಪ್ರೀತಿಸುವವರಿಗೆ ಧನದ ಬಾಧ್ಯತೆಯನ್ನು ದೊರಕಿಸಿ ಅವರ ಬೊಕ್ಕಸಗಳನ್ನು ತುಂಬಿಸುವನು, ಯಾಕೆಂದರೆ ಆತನ ಸಹಾಯದಿಂದಲೇ ಎಲ್ಲವು ನಡೆಯುತ್ತಿರುವುದು, ರಾಜರು ಸಹ ಆತನ ಸಹಾಯದಿಂದಲೇ ಜೀವಿಸುವರು. ನೀನು ಯಥಾರ್ಥವಾಗಿ ಎಲ್ಲರೊಂದಿಗೆ 'ಶಾಶ್ವತ ಪ್ರೀತಿ'ಯಿಂದ ನಡೆದುಕೋ; ಸತ್ಯವನ್ನೇ ಯಾವಾಗಲೂ ಅನುಸರಿಸು. ಮತ್ತೊಬ್ಬರೊಂದಿಗೆ ಮಾತಾಡುವಾಗ ನೀತಿಭರಿತವಾಗಿಯೂ ಕೊಂಚವಾಗಿಯೂ ಮಾತನಾಡು, ಆಗ ನಿನ್ನನ್ನು ಕಾಣುವವರು ನಿನ್ನ ಮುಖಾಂತರವಾಗಿ ನಿಜವಾದ ಪ್ರೀತಿ ಯಾವುದು ಎಂದು ಅರ್ಥಮಾಡಿಕೊಂಡು ರಕ್ಷಕನ 'ಶಾಶ್ವತವಾದ ಪ್ರೀತಿ'ಯನ್ನು ಹೊಂದಿಕೊಳ್ಳುವರು.

ದೇವರ ಮಗುವೇ, ನಿನ್ನನ್ನೇ ರಕ್ಷಕನಿಗೆ ಒಪ್ಪಿಸಿಕೊಟ್ಟು, "ಕರ್ತನೇ, ನನ್ನ ಪ್ರಾರ್ಥನೆಯನ್ನು ಆಲಿಸು; ನನ್ನ ಬಿನ್ನಹಕ್ಕೆ ಕಿವಿಗೊಡು; ನಿನ್ನ ನೀತಿಸತ್ಯತೆಗಳಿಗನುಸಾರವಾಗಿ ಸುದುತ್ತರವನ್ನು ದಯಪಾಲಿಸು. ನಿನ್ನ ಮಗನನ್ನು ವಿಚಾರಣೆಗೆ ಗುರಿ ಮಾಡಬೇಡ; ನಿನ್ನ ಸನ್ನಿಧಿಯಲ್ಲಿ ಯಾವ ಮನುಷ್ಯನು ನೀತಿವಂತನಲ್ಲ."(ಕೀರ್ತ 143:1,2) "ನಾನು ಪಾಪಿಯಾಗಿದ್ದೇನೆ. ನನ್ನನ್ನು ನೂತನ ಪಡಿಸು; ನಿನ್ನ 'ಶಾಶ್ವತವಾದ ಪ್ರೀತಿ'ಯನ್ನು ನನಗೆ ಅನುಗ್ರಹಿಸು" ಎಂದು ಪ್ರಾರ್ಥಿಸು. ಆಗ ನಿನ್ನಲ್ಲಿ ಹೊಸ ಬದಲಾವಣೆ ಕಂಡು ಬರುತ್ತದೆ. ಯಾರ ಮುಖಾಂತರವೂ ನನಗೆ ಒಳ್ಳೇ ಪ್ರೀತಿ ಸಿಗಲಿಲ್ಲ ಎಂದು ಕೊರಗಬೇಡ. ನಿಜವಾದ ಪ್ರೀತಿ ನಿನ್ನನ್ನು ಹುಡುಕಿಕೊಂಡು ನಿನ್ನತ್ತಿರ ಬಂದಿದೆ. ಈ ಪ್ರೀತಿಯನ್ನು ಅರ್ಥಮಾಡುಕೊಂಡು ಹೃದಯವನ್ನು ಒಪ್ಪಿಸಿಕೊಡು ಆಗ ನನ್ನ ಯೇಸುಕ್ರಿಸ್ತನ 'ಪ್ರೀತಿಯ ಯಶಸ್ಸು' ನಿನ್ನ ಮುಖಾಂತರ ಎಲ್ಲರಿಗೂ ಸಮಾಧಾನಕರವಾಗಿ ಪ್ರಕಟವಾಗುತ್ತದೆ.

**"ಆತನೇ ನಿನ್ನ ಆಶ್ರಯವೂ ಗುರಾಣಿಯಾಗಿದ್ದಾನೆ." ಆಮೆನ್**

# 5. ಸ್ನೇಹಿತನ ಪ್ರೀತಿ

"ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವುದೂ ಇಲ್ಲ." (ಯೋಹಾನ 15:13)

ಸರ್ವಶಕ್ತನಾದ ದೇವರೇ ನಿನ್ನನ್ನು ನಿಜವಾಗಿ ಪ್ರೀತಿಸುವುದು ಎಂದು ನೀನು ತಿಳಿದುಕೊಳ್ಳಲೇ ಬೇಕು, ಆತನೇ ನಿನಗೆ ಪ್ರಾಣಸ್ನೇಹಿತನಾಗಿ ನಿಂತಿದ್ದಾನೆ. ನಮ್ಮ ಕರ್ತನಾದ ಯೇಸುಕ್ರಿಸ್ತನು "ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನೂ ಪ್ರೀತಿಸಿದ್ದೇನೆ; ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ" ಎಂದು ಆಜ್ಞೆಕೊಟ್ಟಿದ್ದಾನೆ. ನಿನ್ನ ಜೊತೆಯಲ್ಲಿ ಪ್ರಾಣಸ್ನೇಹಿತನಾಗಿ ನಿಲ್ಲಲು ನಿನ್ನ ಬಳಿಯಲ್ಲಿ ಕಾತುರದಿಂದ ಎದುರುನೋಡುತ್ತಾನೆ.

ಪ್ರೀತಿಯ ದೇವರ ಮಗುವೇ, ಈ ಲೋಕದಲ್ಲಿ ಎಲ್ಲರೂ ಪ್ರೀತಿ ಸಿಗಬೇಕೆಂದು ಅಲೆದಾಡುತ್ತಾರೆ. ನಿಮಗೆ ಗೊತ್ತಿರುವ ಪ್ರಕಾರವಾಗಿ ಹೇಳಬೇಕಾದರೆ ವಿದ್ಯಾಭ್ಯಾಸ ಮಾಡುತ್ತಿರುವಂತಹ ಮಕ್ಕಳಿಗೆ ಸ್ನೇಹಿತರು ಅವಶ್ಯವಾಗಿ ಬೇಕಾಗಿರುತ್ತದೆ. ಸ್ನೇಹಿತರು ಇಲ್ಲ ಎಂದರೆ ಅವರ ಜೀವನ ಒಂಟಿ ಎಂದೆಣಿಸುತ್ತಾರೆ. ಕುಟುಂಬದಲ್ಲಿ ತಂದೆ-ತಾಯಿ ಪ್ರೀತಿ ಸರಿಯಾಗಿ ಸಿಗದಿದ್ದರೆ ಅವರು ಬೇರೆ ವ್ಯಕ್ತಿಯ ಸ್ನೇಹವನ್ನು ಬೆಳೆಸಲು ಪ್ರಾರಂಭಿಸುತ್ತಾರೆ, ಆದರೆ ನಿಜವಾದ ಸೃಷ್ಟಿ ಕರ್ತನ ಪ್ರೀತಿಯನ್ನು ಹುಡುಕಲು ಬಯಸುವುದಿಲ್ಲ. ಇಕ್ಕಟ್ಟಿನಲ್ಲಿ ಇರುವಾಗ ಯಾರಾದರೂ ಆ ಸಮಯದಲ್ಲಿ ಆಸರೆಯಾಗಿ ನಿಂತು ಸಹಾಯ ಮಾಡುತ್ತಾರೋ ಅವರೇ ನಿಜವಾದ ಸ್ನೇಹಿತನೆಂದು ಭಾವಿಸುವುದು ಸಹಜವಾಗಿರುತ್ತದೆ. ಆದರೆ ಅವರ ಮೂಲಕ ಕರ್ತನು ನನಗೆ ಸಹಾಯಮಾಡುತ್ತಿದ್ದಾನೆ ಎಂದು ಕರ್ತನ ಸ್ನೇಹವನ್ನು ಅರ್ಥಮಾಡಿಕೊಳ್ಳುವುದು ಅಪರೂಪ.

ಇಲ್ಲಿ ಒಬ್ಬ ನಿಜವಾದ ಸ್ನೇಹಿತನು ಇದ್ದಾನೆ, ಆ ನಿಜವಾದ ಸ್ನೇಹಿತನ ಪ್ರೀತಿ ಹೇಗಿರುತ್ತದೆ ನೋಡೋಣ : -

ಬೇಥಾನ್ಯ ಎಂಬ ಊರಿನಲ್ಲಿ ಇಬ್ಬರು ಅಕ್ಕಂದಿರು ಒಬ್ಬ ತಮ್ಮ ಇರುವ ಕುಟುಂಬ ವಾಸವಾಗಿತ್ತು. ಈ ಕುಟುಂಬ ದೇವರಿಗೆ ಭಯಭಕ್ತಿಯಾಗಿ ನಡೆದುಕೊಳ್ಳುತ್ತಿತ್ತು. ಇಂತಹ ಕುಟುಂಬದಲ್ಲಿ ಯೇಸುಕ್ರಿಸ್ತನು ಸೇವೆ ಮಾಡುವ ಸಮಯದಲ್ಲಿ ಅವರ ಮನೆಗೆ ಬಂದು ವಿಶ್ರಾಂತಿ ಪಡೆಯುತ್ತಾ ಮುಂದೆ ಪ್ರಯಾಣ

ಮಾಡುತ್ತಿದ್ದರು. ಇವರ ಪ್ರೀತಿ ಯೇಸುವಿನ ಹೃದಯವನ್ನು ಮುಟ್ಟಿತು. ಲಾಜರನು ಯೇಸುವಿನೊಟ್ಟಿಗೆ ಉತ್ತಮ ಸ್ನೇಹಿತನಾಗಿ ನಿಂತುಕೊಂಡಿದ್ದನು. ಯೇಸುಕ್ರಿಸ್ತನು ಮಾಡುವಂತಹ ಪ್ರತಿಯೊಂದು ಕಾರ್ಯಗಳನ್ನು ನೋಡುತ್ತಿದ್ದನು.

ಒಂದು ದಿನ ಲಾಜರನು ಅಸ್ವಸ್ಥನಾಗಿ ಸತ್ತುಹೋದನು. ಲಾಜರನು ಸತ್ತು ಮೂರುದಿನಗಳಾದ ಮೇಲೆ ಯೇಸುಕ್ರಿಸ್ತನು ಆ ಮಾರ್ಗವಾಗಿ ಬರುತ್ತಿದ್ದನು. ಆಗ ಮಾರ್ಥಳು ಯೇಸುವಿಗೆ – ಸ್ವಾಮೀ ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ; ಈಗಲಾದರೂ ದೇವರನ್ನು ಏನು ಬೇಡಿಕೊಳ್ಳುತ್ತೀಯೋ ಅದನ್ನು ದೇವರು ನಿನಗೆ ಅನುಗ್ರಹಿಸುವನೆಂದು ಬಲ್ಲೆನು ಅಂದಾಗ, ಅದಕ್ಕೆ ಯೇಸು ಆಕೆಗೆ–"ನಿನ್ನ ತಮ್ಮನು ಎದ್ದು ಬರುವನೆಂದು" ಹೇಳಿದನು. ನಂತರ ಮರಿಯಳು ಯೇಸು ಇದ್ದಲ್ಲಿಗೆ ಓಡಿ ಬಂದು ಆತನನ್ನು ಕಂಡು ಆತನ ಪಾದಕ್ಕೆ ಬಿದ್ದು–ಸ್ವಾಮೀ ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ ಎಂದು ಹೇಳಿ ಗೋಳಾಡಿದಳು, ಇದನ್ನು ಕೇಳಿ ಎಲ್ಲಾ ಯೆಹೂದ್ಯ ಜನರು ಗೋಳಾಡಿದರು. ಯೇಸು ಇದನ್ನು ಕಂಡು "ಆತ್ಮದಲ್ಲಿ ನೊಂದು ಕೊಂಡು ತತ್ತರಿಸಿ–ಅವನನ್ನು ಎಲ್ಲಿ ಇಟ್ಟಿದ್ದೀರಿ ಎಂದು ಕೇಳಿ ಅದನ್ನು ನೋಡಿ ಯೇಸು ಕಣ್ಣೀರು ಬಿಟ್ಟನು." (ಯೋಹಾನ 11:35)

ಕರ್ತನಾದ ಯೇಸು ತನ್ನಲ್ಲಿ ತಿರಿಗಿ ನೊಂದುಕೊಳ್ಳುತ್ತಾ ಸಮಾಧಿಯ ಬಳಿಗೆ ಬಂದು "ಆ ಕಲ್ಲನ್ನು ತೆಗೆದುಹಾಕಿರಿ" ಅನ್ನಲು ಅಕ್ಕನಾದ ಮಾರ್ಥಳು–ಸ್ವಾಮೀ, ಅವನು ಸತ್ತು ನಾಲ್ಕು ದಿವಸವಾಯಿತು; ಈಗ ನಾತ ಹುಟ್ಟಿದೆ ಅಂದಳು.

ಕರ್ತನಾದ ಯೇಸು ಆಕೆಗೆ–"ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ ಅಂದನು. ಅಲ್ಲಿದ್ದ ಜನರು–ಕಲ್ಲನ್ನು ತೆಗೆದು ಹಾಕಿದರು. ಯೇಸು ತಂದೆಯ ಬಳಿಯಲ್ಲಿ ಪ್ರಾರ್ಥಿಸಿ–ದೊಡ್ಡ ಶಬ್ಧದಿಂದ "ಲಾಜರನೇ, ಹೊರಗೆ ಬಾ" ಎಂದು ಕೂಗಿದನು. ಸತ್ತಿದ್ದ ಲಾಜರನು ಆ ಕೂಗಿಗೆ ಜೀವವನ್ನು ಹೊಂದಿಕೊಂಡು ಹೊರಗೆ ಬಂದನು.

ಪ್ರೀತಿಯ ದೇವರ ಮಗುವೇ, ತನ್ನ ಸ್ನೇಹಿತರನ್ನು ಉಳಿಸಿಕೊಳ್ಳಬೇಕೆಂದು ತಂದೆ ದೇವರ ಹತ್ತಿರ ಪ್ರಾರ್ಥಿಸಿ ಲಾಜರನಿಗೆ ಮತ್ತೇ ಜೀವ ಬರುವ ರೀತಿಯಲ್ಲಿ ಜನರ ಮಧ್ಯದಲ್ಲಿ ಅದ್ಭುತ ಕಾರ್ಯನಡೆಸಿದನು. ಯೇಸುವಿನ ಜೊತೆಯಲ್ಲಿ ಇದ್ದ ಮಾರ್ಥ–ಮರಿಯಳಿಗೆ ಆ ನಂಬಿಕೆ ಇರದೇ ಸತ್ತ ಲಾಜರನನ್ನು ಸಮಾಧಿಗೆ ಹಾಕಿದರು. ಈಗ ಸರ್ವಶಕ್ತನಾದ ದೇವರ ಮೇಲೆ ಅತಿಯಾದ ನಂಬಿಕೆಯಿಂದುವವರೂ ಆತ್ಮೀಕವಾಗಿ ನಡೆಯುವವರೂ ಸಹಾ ಒಂದೊಂದು ಸಾರಿ ನಂಬಿಕೆ ಕಳೆದುಕೊಂಡು ಪರಲೋಕ

ದೇವರ ಪ್ರೀತಿಯನ್ನು ಮರೆತುಹೋಗುತ್ತಾರೆ. ಸರ್ವಶಕ್ತನು ಮಾಡಿರುವ ಸಹಾಯವನ್ನು ನೆನಸಿಕೊಳ್ಳಲು ಸಮಯ ಸಿಗುವುದಿಲ್ಲ ಎನ್ನುವವರಿಗೆ ಇನ್ನೂ ನಂಬಿಕೆ ಎಲ್ಲಿ ಬರಬೇಕು? ಅದರಲ್ಲಿ ಕರ್ತನ ಸ್ನೇಹ ಹೇಗೆ ಜ್ಞಾಪಕಕ್ಕೆ ಬರುತ್ತದೆ. ನಿನಗಾಗಿ ಈ ಕ್ಷಣದವರೆಗೂ ನಮ್ಮ ಪ್ರಿಯ ಕರ್ತನಾದ ಯೇಸುಕ್ರಿಸ್ತನು ತಂದೆಯ ಬಳಿ ಎಷ್ಟು ಭಾರಿ ವಿಜ್ಞಾಪನೆ ಮಾಡಿ ನಿನಗೆ ಎಷ್ಟು ಒಳ್ಳೆಯ ಸ್ನೇಹಿತನಾಗಿ ನೆಲೆಗೊಂಡಿದ್ದಾನೆಂದು ನೆನಸಿ ನೀನು ಕೃತಜ್ಞತೆ ತಿಳಿಸಬೇಕಲ್ಲವೇ.

ಕರ್ತನಾದ ಯೇಸು ಕ್ರಿಸ್ತನು ಲಾಜರನು ಸತ್ತ ಸುದ್ಧಿಯನ್ನು ಕೇಳಿ ಸುಮ್ಮನೇ ಸೇವೆ ಮಾಡಿಕೊಂಡು ಇರಬಹುದಾಗಿತ್ತು ಆದರೆ ಆ ರೀತಿ ಮಾಡಲಿಲ್ಲ; ಕಾರಣ ಲಾಜರನು ಯೇಸುವಿನ ಪ್ರಾಣ ಸ್ನೇಹಿತನು ಆಗಿದ್ದನು. ಅವನಿಗಾಗಿ ತಂದೆಯಾದ ದೇವರ ಬಳಿ ಪ್ರಾರ್ಥಿಸಿ ಮರುಜೀವ ಬರುವಂತೆ ಮಾಡಿದನು.

ನಿನಗೆ ಒಬ್ಬ ಸ್ನೇಹಿತ ಇರುವುದಾದರೆ ಅವನನ್ನು ಯಾವ ರೀತಿಯಲ್ಲಿ ಕಾಣುತ್ತಿದ್ದೀಯಾ?

→ ಅವನ ಸ್ನೇಹ ನಿನ್ನಲ್ಲಿ ಯಾವ ಭಾವನೆ ಮೂಡಿಸುತ್ತದೆ?
→ ಅವನು ಒಳ್ಳೆಯ ಮಾರ್ಗದಲ್ಲಿ ನಡೆಸುತ್ತಾನಾ?
→ ಸ್ನೇಹ ಬೆಳೆದ ಮೇಲೆ ಸ್ವಭಾವ ಹೇಗಿದೆ?
→ ವಿದ್ಯಾಭ್ಯಾಸದಲ್ಲಿ ಬೆಳವಣಿಗೆ ಹೇಗಿದೆ?
→ ರೀತಿ, ನೀತಿ, ನಡುವಳಿಕೆ ಹೇಗಿದೆ?
→ ಕುಟುಂಬದೊಟ್ಟಿಗೆ ಯಾವ ರೀತಿ ನಡೆದುಕೊಳ್ಳುತ್ತೀಯಾ?

ಇವು ನಿನ್ನ ಜೀವನದಲ್ಲಿ ಮುಖ್ಯವಾದ ಅಂಶಗಳು, ಯಾಕೆಂದರೆ ಸ್ನೇಹ ಬೆಳೆಸುವಾಗ ಎಲ್ಲದರಲ್ಲೂ ಒಳ್ಳೆಯದನ್ನೇ ಕಾಣಬೇಕು. ನೀನು ಒಳ್ಳೆಯವನಾಗಿದ್ದು ಸ್ನೇಹ ಸಹವಾಸದಿಂದ ಕೆಟ್ಟವಳಾ/ನಾ/ಗಬಾರದು. ನೀನು ಕೆಟ್ಟವಳಾ/ನಾ/ಗಿದ್ದು ಸ್ನೇಹ ಬೆಳಸಿ ಇನ್ನೂ ಕೆಟ್ಟು ಮೋಸಹೋಗಬಾರದು. ವಾಕ್ಯ ಹೇಳುತ್ತದೆ "ಮನುಷ್ಯನ ಮಾರ್ಗಗಳು ಕರ್ತನಿಗೆ ಕಾಣುತ್ತಲೇ ಇವೇ. ಆತನು ಮನುಷ್ಯನ ನಡತೆಯನ್ನೆಲ್ಲಾ ಪರೀಕ್ಷಿಸುವವನಾಗಿದ್ದಾನೆ."(ಜ್ಞಾನ 5:21) ನೀನು ಸ್ನೇಹಿತನೊಟ್ಟಿಗೆ ಸ್ನೇಹ ಬೆಳೆಸುವಾಗ, ಅವನೊಟ್ಟಿಗೆ ಕೆಲಸ ಕಾರ್ಯಗಳನ್ನು ಮಾಡುವಾಗ ನಿನ್ನ ಕುಟುಂಬದವರಿಗೆ, ನೆರೆಯವರಿಗೆ ನೀನು ಅವನ ಸಂಗಡ ಏನು ತಪ್ಪು ಮಾಡುತ್ತಿದ್ದೀಯಾ ಎಂದು ಕಾಣಲ್ಲ. ಆದರೆ ಲೋಕವನ್ನು ಉಂಟುಮಾಡಿದ ಪರಲೋಕದ ದೇವರು ಎಲ್ಲವನ್ನು ಕಾಣುತ್ತಾನೆ.

ನೀನು ಸತ್ಯವಾದ ದೇವರನ್ನು ಕಂಡು ಕೊಂಡಿದ್ದೀಯಾ? ಕಂಡು ಕೊಂಡಿರುವುದಾದರೆ ನಿನ್ನ ಸ್ವಭಾವವನ್ನೂ, ನಿನ್ನ ನಡವಳಿಕೆಯನ್ನು ಬದಲಾಯಿಸಿ ಯೇಸುವಿಗೆ ಪ್ರಿಯಾ ಸ್ನೇಹಿತಳಾ/ನಾ/ಗಿ ಜೀವಿಸುವುದಕ್ಕೆ ಪ್ರಯಾಸ ಪಡು, ಆಗ ನಿನ್ನ ಜೀವನದಲ್ಲೂ, ಕುಟುಂಬದಲ್ಲೂ ಯೇಸು ದೊಡ್ಡ ಅದ್ಭುತವನ್ನು ಮಾಡುತ್ತಾರೆ. ನಿನ್ನಲ್ಲಿ ಎಂಥಹಾ ಬಿರುಗಾಳಿ ಬಂದರೂ ಕರ್ತನಾದ ಯೇಸುಕ್ರಿಸ್ತನು ಅದನ್ನು ನಿಲ್ಲಿಸಲು ಶಕ್ತನಾಗಿದ್ದಾನೆ. ಆತನ ಸ್ನೇಹ ನಿನ್ನಲ್ಲಿ ಬೆಳೆದು ಬರುತ್ತಿರುವುದಾದರೆ ನಿನ್ನಲ್ಲಿ ಕರ್ತನ ಸ್ನೇಹ ಕಾರ್ಯನಡೆಸುತ್ತಿರುವುದು ನಿನಗೇ ಅರ್ಥವಾಗುತ್ತದೆ. ಮತ್ತು-"ಪ್ರೀತಿ-ಸಂತೋಷ-ಸಮಾಧಾನ-ದೀರ್ಘಶಾಂತಿ-ದಯೆ-ಉಪಕಾರ-ನಂಬಿಕೆ-ಸಾಧುತ್ವ-ಶಮೆದಮೆ (ಗಲಾತ್ಯ 5:19) ಇಂಥವುಗಳು ನಿನ್ನಲ್ಲಿ ತುಂಬಿರುತ್ತದೆ. ಕರ್ತನ ಭಯದಲ್ಲೇ ಮಾರ್ಥ-ಮರಿಯ-ಲಾಜರನು ಜೀವಿಸುತ್ತಿದ್ದರು. ರಕ್ಷಕನಾದ ಯೇಸುಕ್ರಿಸ್ತನು ಅವರೊಟ್ಟಿಗೆ ಇದ್ದರೂ-ಇಲ್ಲದಿದ್ದರೂ ಆತನು ಹೇಳುವಂತಹ ಮಾತಿಗೆ ಕಿವಿಗೊಡುತ್ತಿದ್ದರು. ನೀನು ರಕ್ಷಕನ ಸ್ನೇಹಿತಳಾ/ನಾ/ಗಿ ಈ ಲೋಕದಲ್ಲಿ ಎಲ್ಲರ ಕಣ್ಣಿಗೆ ಕಾಣಿಸಬೇಕು. ಎಲ್ಲರಿಗೂ ನಿನ್ನ ಮುಖಾಂತರ ರಕ್ಷಕನ ಸ್ನೇಹ ಹೇಗಿರುತ್ತದೆ ಎಂದು ಗೊತ್ತಾಗಬೇಕು. ಅದಕ್ಕಾಗಿಯೇ ಕರ್ತನು ನಿನ್ನನ್ನು ಆಯ್ಕೆ ಮಾಡಿಕೊಂಡಿರುವುದೆಂದು ನೀನು ಮರೆಯದಿದ್ದರೆ ಮಾರ್ಥ-ಮರಿಯ-ಲಾಜನರ ಹೆಸರಿನೊಟ್ಟಿಗೆ ನಿನ್ನ ಹೆಸರು ಜನರು ಹೇಳಲು ಸಾಧ್ಯವಾಗುತ್ತದೆ.

ನೀನು ಸರಿಯಾಗಿ ರಕ್ಷಕನ ಸ್ನೇಹವನ್ನು ಸಂಪಾದಿಸಿಕೊಳ್ಳದಿದ್ದರೆ ಯಾವಗಲೂ ಜಗಳ, ನಷ್ಟ, ಕಷ್ಟಗಳು ಮನೆಯಲ್ಲಿ ಆಗುತ್ತಲೇ ಇರುತ್ತದೆ. ನೀನು ಸತ್ಯ ದೇವರನ್ನು ಕಂಡು ಕೊಂಡಿದ್ದು ವ್ಯರ್ಥವಾಗಿ ಹೋಗುತ್ತದೆ, ಏನೂ ಪ್ರಯೋಜನವಿರುವುದಿಲ್ಲ. ಆಗ ನೀನು ಎಲ್ಲಾ ಕಾರ್ಯದಲ್ಲೂ ಜಯಹೊಂದಿಕೊಳ್ಳಲು ಸಾಧ್ಯವಿರುವುದಿಲ್ಲ.

ಸತ್ಯ ದೇವರ ಮಗುವೇ, ನಿನಗೆ ಒಳ್ಳೇ ಸ್ನೇಹಿತನ ಪ್ರೀತಿ ಬೇಕಾದರೆ ಮೊದಲು ರಕ್ಷಕನಾದ ಯೇಸುವಿನ ಬಗ್ಗೆ ಸಂಪೂರ್ಣವಾಗಿ ತಿಳಿದುಕೋ ಯಾಕೆಂದರೆ ಆತನಿಂದಲೇ ಎಲ್ಲವನ್ನು ಹೊಂದಿಕೊಳ್ಳಲು ಸಾಧ್ಯ. ನನ್ನ ಕುಟುಂಬದಲ್ಲಿ ನನ್ನ ತಂದೆಯವರು ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಕೊನೆಮಗಳೆಂದು ಹಣದಿಂದಲೇ ನನ್ನನ್ನು ಯಾವ ಕೊರತೆ ಇಲ್ಲದ ರೀತಿಯಲ್ಲಿ ನಾನು ಕೇಳುವುದಕ್ಕಿಂತಲೂ ಅಧಿಕವಾಗಿ ಕೊಟ್ಟು ನನ್ನನ್ನು ಬೆಳೆಸುತ್ತಿದ್ದರು. ಬೆಳಿಗ್ಗೆ ನನ್ನ ಮುಖವನ್ನೇ ನೋಡಿ ಮುಂದಿನ ಕೆಲಸ ಮಾಡುತ್ತಿದ್ದರು. ನನಗೆ ಸ್ವಲ್ಪ ನೋವು ಬಂದು ಅಯ್ಯೋ ಅಂದರೆ ಅವರ ಹೃದಯ ಒಡಯುವಷ್ಟು ನೋವಾಗುತ್ತಿತ್ತು. ಅವರು ನನ್ನ ಬಳಿ ಯಾವಾಗಲೂ ಒಂದು ಮಾತು ಹೇಳುತ್ತಿದ್ದರು. ಮಗಳೇ ನೀನು ಯಾವಾಗಲೂ ನನ್ನತ್ತಿರನೇ ಇರು; ಆಗ ನಾನು ಹೆಚ್ಚು

ಆರೋಗ್ಯದಿಂದ ಇರುತ್ತೇನೆ ಎಂದು. ಆದರೆ ನಾನು ಹೊರಗೆ ಹೋಗಿ ಎಲ್ಲಾ ಸ್ನೇಹಿತರೊಟ್ಟಿಗೆ ಆಟವಾಡಿಕೊಂಡು ಬರುತ್ತಿದ್ದೆ. ನನ್ನ ತಂದೆ ಹೊರಗೆ ಹೋಗಿ ಮನೆಗೆ ಬಂದಾಗ ನಾನು ಮನೆಯಲ್ಲಿ ಕಾಣಲಿಲ್ಲ ಎಂದರೆ ಆ ಹೊತ್ತು ಮನೆಯಲ್ಲಿ ಜಗಳಗಳು ಆಗುತ್ತಿತ್ತು; ಆ ಜಗಳದಿಂದ ನನ್ನನ್ನು ನನ್ನ ತಂದೆ ಹೊಡೆಯುತ್ತಿದ್ದರು.

ನನಗೆ ಈಗ ಅರ್ಥವಾಗುತ್ತದೆ ನನ್ನ ತಂದೆಯೇ ನನ್ನ ಎಲ್ಲಾ ಸ್ನೇಹಿತರಿಗಿಂತ ನನ್ನನ್ನು ಹೆಚ್ಚಾಗಿ ಪ್ರೀತಿಮಾಡುತ್ತಿದ್ದರು ಎಂದು. ಅದಕ್ಕಾಗಿಯೇ ಅವರು ನನ್ನನ್ನು ಬೈದು ಹೊಡೆಯುತ್ತಿದ್ದರು ಎಂದು. ಸತ್ಯವೇದವು ಹೀಗೆ ಹೇಳುತ್ತದೆ–"ತಂದೆಯು ತನ್ನ ಮುದ್ದುಮಗನನ್ನು ಗದರಿಸುವಂತೆ ಕರ್ತನು ತಾನು ಪ್ರೀತಿಸುವವನನ್ನೇ ಗದರಿಸುತ್ತಾನೆ." (ಜ್ಞಾನೋ 3:12) ಇದನ್ನು ಓದಿದಾಗ ನನ್ನ ತಂದೆಯು ನನ್ನ ಮೇಲೆ ಎಷ್ಟು ಅಪಾರವಾದ ಪ್ರೀತಿಯನ್ನು ಇಟ್ಟಿದ್ದಾರೆ ಎಂದು ತಿಳಿದುಕೊಂಡೆ. ಅದೇ ರೀತಿಯಲ್ಲಿ ಅವರು ನನ್ನ ಸಂಗಡ ಪ್ರೀತಿಯಿಂದ ಮಾತಾಡುವಾಗ ಹೇಳುತ್ತಿದ್ದಂತಹ ಮಾತು:–

ಮಗಳೇ–ಈ ಲೋಕದಲ್ಲಿ ಯಾರೂ ಸರಿಯಿಲ್ಲಾ, ಎಲ್ಲರೂ ಮೋಸ ಮಾಡುತ್ತಾರೆ. ಯಾರನ್ನೂ ನಂಬಬೇಡ ನಾನು ಹೇಳಿದ ಹಾಗೆ ನೀನು ಕೇಳುವುದಾದರೆ ನೀನು ಎಲ್ಲಿ ಹೋದರೂ ಜಯಶಾಲಿಯಾಗುತ್ತೀಯಾ. ಯಾರ್‍ಯಾರೋ ಜೊತೆಯಲ್ಲಿ ಸ್ನೇಹ ಬೆಳಸಬೇಡ. ಯಾವ ಸ್ನೇಹಿತರು ಒಳ್ಳೆಯವರು ಅಲ್ಲಾ–––ನಿನ್ನ ಹತ್ತಿರ ಹಣ ಇರುವವರೆಗೂ ಆ ಸ್ನೇಹಿತರು ಇರುತ್ತಾರೆ, ಆ ಮೇಲೆ ನಿನಗೆ ಕೈ ಕೊಟ್ಟು ಓಡಿಹೋಗುತ್ತಾರೆ ಬಹು ಜಾಗ್ರತೆಯಾಗಿ ಈ ಲೋಕದಲ್ಲಿ ಜೀವಿಸಬೇಕು, ಎಂದು ನನ್ನ ತಂದೆ ನನಗೆ ಉಪದೇಶ ನೀಡುತ್ತಿದ್ದರು. ಅವರು ಸತ್ಯದೇವರನ್ನು ಕಂಡುಕೊಂಡಿರಲಿಲ್ಲ ಕಾರಣ ಅವರು ನನಗೆ ಯಾವಾಗಲೂ ಒಂದು ಮಾತನ್ನು ಹೇಳುತ್ತಿದ್ದರು, 'ನೀನು ನನಗೆ ದೇವರು; ನಾನು ನಿನಗೆ ದೇವರು' ಎಂದು. ಈ ಮಾತು ನನ್ನ ತಂದೆ ನನ್ನನ್ನು ಎಷ್ಟು ಪ್ರೀತಿಸುತ್ತಿದ್ದರು ಎಂದು ನನಗೆ ಈಗ ಅರ್ಥವಾಗುತ್ತೆ. ನನ್ನ ಮನೆಯಲ್ಲಿ ಅಣ್ಣಂದಿರು, ಅಕ್ಕಂದಿರು ಇದ್ದರೂ ಸಹ ನನಗೆ ಸಿಗುತ್ತಿದ್ದ ನನ್ನ ತಂದೆಯ ಪ್ರೀತಿ ಅವರಿಗೆ ಸಿಗಲಿಲ್ಲ. ಯಾವಾಗಲೂ ನಾನು ನನ್ನ ತಂದೆಯ ಜೊತೆಯಲ್ಲೇ ಇರುತ್ತಿದ್ದೆ. ಅವರು ಎಲ್ಲಿಗೆ ಹೋದರೂ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಹೋಗುವಾಗಲೂ ನನ್ನನ್ನೇ ಕರೆದುಕೊಂಡು ಹೋಗುತ್ತಿದ್ದರು. ನಮ್ಮ ತಂದೆ ನನ್ನ ಮೇಲೆ ಇಟ್ಟಂತಹ ಪ್ರೀತಿ ವಿವರಿಸ ಬೇಕಾದರೆ ನನ್ನನ್ನು ತನ್ನ ಮಗುವಾಗಿ, ತನ್ನ ಸ್ನೇಹಿತನಾಗಿ, ತನ್ನ ಜೀವವಾಗಿ ನೋಡಿಕೊಳ್ಳುತ್ತಿದ್ದರು ಎಂದು ನಾನು ಹೆಮ್ಮೆಯಿಂದ ಹೇಳಿಕೊಳ್ಳಲು ಇಷ್ಟಪಡುತ್ತೇನೆ. ಎಲ್ಲರೂ ನನ್ನನ್ನು ನೋಡಿ ಹೊಟ್ಟೆಕಿಚ್ಚು ಪಟ್ಟಿಕೊಳ್ಳುತ್ತಿದ್ದರು. ಆದರೂ ನನ್ನ ತಂದೆ ನನ್ನನ್ನು ದೂರ ತಳ್ಳಲೇ ಇಲ್ಲ.

ಪ್ರೀತಿಯ ದೇವರ ಮಗುವೇ, ಇಂಥಹ ಪ್ರೀತಿಯನ್ನು ಕೊಟ್ಟಂತಹ ನನ್ನ ತಂದೆ

ಆಕಸ್ಮಿಕವಾಗಿ ನನ್ನಿಂದ ಅಗಲಿದಾಗ ಎಷ್ಟು ದುಃಖವಾಗಿರಬೇಕು ಯೋಚಿಸಿ ನೋಡಿರಿ, ಅಂತಹ ದುಃಖದಲ್ಲೂ ಕೈ ಬಿಡದ ನನ್ನ 'ಯೇಸು' ಹೇಳಿದರು "ಈ ಲೋಕದ ತಂದೆ ನಿನ್ನನ್ನು ಬಿಟ್ಟರು; ಆದರೆ ನಿನ್ನನ್ನು ಸೃಷ್ಟಿಸಿದ ತಂದೆಯಾದ ನಾನು ಸದಾಕಾಲ ನಿನ್ನೊಂದಿಗೆ ಇರುವೆನು." ಎಂದು ಒಂದು ಶಬ್ದವು ನನ್ನ ಕಿವಿಯಲ್ಲಿ ಬಿದ್ದಿತು. ಆಗ ಆ ಕ್ಷಣದಲ್ಲೇ ನನ್ನ ತಂದೆಯ ಪ್ರೀತಿ ನನ್ನಿಂದ ದೂರವಾಗಿ ನಿಜವಾದ ತಂದೆಯಾದ ನನ್ನ ಯೇಸುವಿನ ಸ್ನೇಹದ ಪ್ರೀತಿಯು ನನ್ನ ಹೃದಯವನ್ನು ತುಂಬಿಕೊಂಡಿತು. ನನ್ನನ್ನು ಪ್ರಾಣಕ್ಕೆ–ಪ್ರಾಣವಾಗಿ ಪ್ರೀತಿಮಾಡಿದ ನನ್ನ ತಂದೆ ನನ್ನನ್ನು ಕೈ ಬಿಟ್ಟು ಹೋದರು. ಆದರೆ ನನ್ನನ್ನು ಸೃಷ್ಟಿಮಾಡಿದ ನನ್ನ ಯೇಸುವು ತನ್ನ ಪ್ರಾಣವನ್ನೇ ನನಗೋಸ್ಕರ ಕೊಟ್ಟು ನನ್ನನ್ನು ಎಡೆಬಿಡದೆ ನನ್ನ ಸ್ನೇಹಿತನಾಗಿ ಪುನರುತ್ಥಾನ ಹೊಂದಿದ ನನ್ನ ಪ್ರಿಯ ಯೇಸುಕ್ರಿಸ್ತನು ನನ್ನೊಟ್ಟಿಗೆ ಈ ಹೊತ್ತೂ ಇದ್ದಾನೆ. ಮುಂದೆಯೂ ನಿತ್ಯ ನಿರಂತರವಾಗಿಯೂ ಇರುತ್ತಾನೆ. ಆಮೆನ್. ಹಾಗೆಯೇ ರಕ್ಷಕನು ನನಗೆ 'ಅಗಾಪೆ'(ತಂದೆ ದೇವರ) ಪ್ರೀತಿಯೆಡೆಗೆ ನನ್ನನ್ನು ನಡೆಸಿದರು. ರಕ್ಷಕನಾದ ಯೇಸುಕ್ರಿಸ್ತನಿಗೆ ಸ್ತೋತ್ರ.

"ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು" (ರೋಮಾ 12:1)

ಕರ್ತನಾದ ಯೇಸುವಿಗೆ ಬೇಕಾಗಿರುವುದು ಧಾನ, ಧರ್ಮ, ಗುಡಿಗೋಪುರಗಳು ಅಲ್ಲಾ; ನಿನ್ನಲ್ಲಿ ಇರುವ ಪುಟ್ಟ ಹೃದಯ. ನೀನು ಆ ಹೃದಯದಲ್ಲಿ ಸ್ಥಾನ ಕೊಡುವುದಾದರೆ, ಲಾಜರನಾದರೋ ಸತ್ತು ಎದ್ದು ಬಂದನು, ಆದರೆ ನೀನು ಎಲ್ಲಾ ಇಕ್ಕಟ್ಟಿನಿಂದ ಹೊರ ಬಂದು ಉನ್ನತ ಸ್ಥಾನಕ್ಕೆ ಬರುತ್ತೀಯ.

"ಯಾರು ಕರ್ತನಿಗೆ ಸ್ತುತಿಯಜ್ಞವನ್ನು ಸಮರ್ಪಿಸುತ್ತಾರೋ ಅವರೇ ಆತನನ್ನು ಗೌರವಿಸುವವರು; ತಮ್ಮ ನಡತೆಯನ್ನು ಸರಿಪಡಿಸಿಕೊಳ್ಳುವವರಿಗೆ ಕರ್ತನು ವಿಶೇಷವಾದ ರಕ್ಷಣೆಯನ್ನು ತೋರಿಸುವನು." ನೀನು ಇಷ್ಟರವರೆಗೂ ಕರ್ತನಾದ ಯೇಸುವನ್ನು ಪ್ರಾಣಸ್ನೇಹಿತನಾಗಿ ಅಂಗೀಕರಿಸಿಕೊಳ್ಳಲಿಲ್ಲವಾದರೇ ಇಂದೇ ಕರ್ತನನ್ನು ನಿನ್ನ ಪ್ರಾಣಸ್ನೇಹಿತನಾಗಿ ಅಂಗೀಕರಿಸಿಕೋ, ನಿನ್ನ ಹೃದಯವನ್ನು ಸಿದ್ಧಪಡಿಸಿಕೊಂಡು ರಕ್ಷಕನಾದ ಯೇಸುವಿನ ಮುಖವನ್ನು ನೋಡು; ಕರ್ತನಿಗೆ ಸ್ತುತಿಯಜ್ಞಗಳನ್ನು ಭಯಭಕ್ತಿಯಿಂದ ಸಮರ್ಪಿಸು, ಆಗ ಆತನು ನಿನ್ನನ್ನು ಕರುಣಿಸಿ ಪ್ರೀತಿಯಿಂದ ನಿನ್ನನ್ನು ಸಂತೈಸಿ ನಿನ್ನನ್ನು ತೃಪ್ತಿಪಡಿಸುವನು.

ಈ ಲೋಕದಲ್ಲಿ ನಮಗೆ ನಂಬಗಸ್ಥನಾದ ಸ್ನೇಹಿತನು ಎಲ್ಲಿ ಸಿಕ್ಕುವನು ಎಂದು

ನಾವು ಯೋಚಿಸಬೇಕು. ಒಂದು ವೇಳೆ ಇಲ್ಲ ನನಗೆ ಸಿಕ್ಕಿದ್ದಾರೆ ಎಂದು ಹೇಳುವುದಾದರೆ ಅವರು ನನ್ನ ಜೊತೆಯಲ್ಲಿ ನಿರಂತರವಾಗಿ ಇರುತ್ತಾರ ಎಂದು ಚಿಂತಿಸಬೇಕಲ್ಲವೇ.

ನಮ್ಮೆಲ್ಲರ ಪ್ರಿಯವಾದ ಸ್ನೇಹಿತನು ಯೇಸುಕ್ರಿಸ್ತನೇ ಆಗಿದ್ದಾನೆ. ಅದಕ್ಕಾಗಿಯೇ ಆತನು ತನ್ನ ಪ್ರಾಣವನ್ನು ಕೊಟ್ಟು ಚರಿತ್ರೆಯಲ್ಲಿಯೇ 'ಪ್ರೀತಿಯ ಯಶಸ್ಸ'ನ್ನು ಹೊಂದಿದ್ದಾನೆ. ಆತನ ಪ್ರೀತಿಗೆ ಕೊನೆಯಿಲ್ಲ. ಆಮೆನ್.

**"ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ"**

# 6. ಹೃದಯದ ಪ್ರೀತಿ

"ಕಲ್ಲಾದ ಹೃದಯವನ್ನು ಅವರೊಳಗಿಂದ ತೆಗೆದು ಮೃದುವಾದ ಹೃದಯವನ್ನು ಅವರಿಗೆ ಅನುಗ್ರಹಿಸುವೆನು; ಅವರು ನನಗೆ ಪ್ರಜೆಯಾಗಿರುವರು, ನಾನು ಅವರಿಗೆ ದೇವರಾಗಿರುವೆನು." (ಯೆಹೆಜ್ಕೇಲ 36:26)

ರಕ್ಷಕನಾದ ಯೇಸುವನ್ನು ಹಿಂಬಾಲಿಸುತ್ತಿರುವ ಜನರನ್ನು ಹಿಂಸಿಸುತ್ತಿದ್ದಂತಹ ಸೌಲನು ಯೆರೂಸಲೇಮ್‌ನಲ್ಲಿ ವಾಸವಾಗಿದ್ದು ಮಹಾಯಾಜಕನ ಬಳಿಯಲ್ಲಿ ಕೆಲಸ ಮಾಡುತ್ತಿದ್ದನು. ಇವನು ಕಠಿಣವಾದ ರೀತಿಯಲ್ಲಿ ಜನರನ್ನು ಹಿಂಸಿಸುತ್ತಿದ್ದನು. ಎಲ್ಲರನ್ನು ಬೆದರಿಸುತ್ತಾ ಕ್ರೈಸ್ತರಿಗೆ ವಿರೋಧವಾಗಿ ಮಾತುಗಳನ್ನಾಡುತ್ತಾ ಅವರನ್ನು ಸಂಹರಿಸಬೇಕು ಎನ್ನುವ 'ಕಲ್ಲಾದ ಹೃದಯ'ದಿಂದ ಆತನು ಜೀವಿಸುತ್ತಿದ್ದನು. ಕರ್ತನಾದ ಯೇಸುವಿನ ಮಾರ್ಗವನ್ನು ಹಿಡಿದವರು ಯಾರಾದರೂ ಸಿಕ್ಕಿದರೆ, ಅವರು ಗಂಡಸರಾದರೂ ಸರಿಯೇ, ಹೆಂಗಸರಾದರೂ ಸರಿಯೇ, ಅವರಿಗೆ ಬೇಡಿಹಾಕಿಸಿ, ಯೆರೂಸಲೇಮಿಗೆ ತರುವಂತೆ ದಮಸ್ಕದಲ್ಲಿರುವ ಅಯಾ ಸಭಾಮಂದಿರದವರಿಗೆ ಕಾಗದವನ್ನು ಕೊಡಲು ಅನುಮತಿ ಪಡೆದಿದ್ದನು. ಸೌಲನು ಅಹಂಕಾರದಿಂದ, ಮೆರೆಯುತ್ತಿದ್ದ ಕಾರಣ ಮತ್ತು ನಾನೇ ಮಹಾರಾಜ ಎಂದು ಆರ್ಭಟದಿಂದ ಕ್ರೈಸ್ತರಿಗೆ ಹಿಂಸೆ ಪಡಿಸುವ ಸಲುವಾಗಿ ಪ್ರಯಾಣ ಮಾಡುತ್ತಾ ದಮಸ್ಕದ ಹತ್ತಿರಕ್ಕೆ ಬರಲು ಪಕ್ಕನೆ ಆಕಾಶದೊಳಗಿಂದ ಒಂದು ಬೆಳಕು ಅವನ ಸುತ್ತಲು ಮಿಂಚಿತು. ಆ ಬೆಳಕು ತಾಕಿದ ತಕ್ಷಣ ನೆಲಕ್ಕೆ ಬಿದ್ದನು. ಕರ್ತನು ಬೆಳಕಾಗಿ ಸೌಲನಿಗೆ ಕಾಣಿಸಲು ಆ

ಪರಿಶುದ್ಧವಾದ ಬೆಳಕಿನ ಮುಂದೆ ನಿಲ್ಲಲ್ಲು ಪಾಪದಿಂದ ತುಂಬಿದ್ದ ಸೌಲನಿಗೆ ಸಾಧ್ಯವಾಗಲಿಲ್ಲ ಕಾರಣ ಅವನಿಗೆ ತಿಳಿಯದೆ ನೆಲಕ್ಕೆ ಬಿದ್ದನು. ಆಗ ರಕ್ಷಕನು ಸೌಲನ ಬಳಿಯಲ್ಲಿ ಮಾತನಾಡಿದರು.

ರಕ್ಷಕನು :- ಸೌಲನೇ, ಸೌಲನೇ ನನ್ನನ್ನು ಯಾಕೆ ಹಿಂಸೆಪಡಿಸುತ್ತೀ
ಸೌಲನು :- "ಕರ್ತನೇ, ನೀನಾರು"

ರಕ್ಷಕನು :- ನೀನು ಹಿಂಸೆ ಪಡಿಸುವ 'ನಜರೇತಿನ ಯೇಸುವೇ' ನಾನು. ನೀನೆದ್ದು ಊರೊಳಕ್ಕೆ ಹೋಗು, ನೀನು ಮಾಡಬೇಕಾದದ್ದು ಅಲ್ಲಿ ನಿನಗೆ ತಿಳಿಸಲ್ಪಡುವದು ಎಂದನು.

ಆಗ ಜೊತೆಯಲ್ಲಿ ಪ್ರಯಾಣಮಾಡುತ್ತಿದ್ದವರು ಧ್ವನಿಯನ್ನು ಮಾತ್ರ ಕೇಳಿದರೇ ಹೊರತು ಯಾರನ್ನೂ ಕಾಣದೆ ನಿಂತರು. ಸೌಲನು ನೆಲದಿಂದ ಎದ್ದು ಕಣ್ಣು ತೆರೆದಾಗ ಏನೂ ಕಾಣಿಸಲಿಲ್ಲ. ಆಗ ಅವರು ಅವನನ್ನು ಕೈ ಹಿಡಿದು ದಮಸ್ಕದೊಳಕ್ಕೆ ಕರೆದುಕೊಂಡು ಹೋದರು. ಸೌಲನಿಗೆ ಮೂರು ದಿವಸ ಕಣ್ಣು ಕಾಣದೆ ಏನೂ ತಿನ್ನಲಿಲ್ಲ, ಏನೂ ಕುಡಿಯಲಿಲ್ಲ.

ಪ್ರೀತಿಯ ದೇವರ ಮಗುವೇ, ಇಲ್ಲಿ ಸ್ವಲ್ಪ ಯೋಚಿಸಿ ನೋಡಿ, ಈ ಸೌಲನು ಮನುಷ್ಯನ ಪ್ರೀತಿಯನ್ನೂ ಮತ್ತು ಬೆಲೆಯನ್ನು ಅರ್ಥಮಾಡಿಕೊಳ್ಳದೇ; ನಿಜವಾದ ದೇವರು ಯಾರೆಂದು ಹುಡುಕದೇ ಜನರನ್ನು ಹಿಂಸಿಸುತ್ತಾ ಕುಟುಂಬಗಳನ್ನು, ಸಭೆಗಳನ್ನು ನಾಶಮಾಡುತ್ತಾ ನಡೆಯುತ್ತಿದ್ದನು, ಇಂಥಹ ವ್ಯಕ್ತಿಗೆ ಯಾರು ಯಾವ ರೀತಿಯಲ್ಲಿ ಸತ್ಯವನ್ನು ತಿಳಿಸಲು ಸಾಧ್ಯ? ಯೋಚಿಸಿ ನೋಡು. ಇಂಥಹ ವ್ಯಕ್ತಿಯ ಮುಂದೆ ನಿಲ್ಲಲ್ಲು ಸಹ ಎಲ್ಲರೂ ಭಯಪಡುತ್ತಾರೆ. ನಂತರ ಅವನೊಂದಿಗೆ ಮಾತಾಡಿದರೆ ಪ್ರಾಣ ತೆಗೆಯುವನೋ ಇಲ್ಲದಿದ್ದರೆ ಕುಟುಂಬವನ್ನು ನಾಶಮಾಡುವನೋ ಎನ್ನುವ ಪ್ರಾಣಭಯದಿಂದ ಯಾರೂ ಮುಂದೆ ಹೋಗುವುದಿಲ್ಲ. ಅವನನ್ನು ನೋಡುವಾಗಲೆಲ್ಲಾ ಏನೂ ಮಾಡಲು ಆಗದೇ ಬಲಹೀನವಾಗಿ ಅವನು

ಹೇಳಿದ ರೀತಿಯಲ್ಲೇ ಎಲ್ಲರೂ ಮಾಡಬೇಕಾಗಿತ್ತು. ಮತ್ತು ಪ್ರಾಣದ ಮೇಲೆ ಆಸೆ ಬಿಟ್ಟೇ ಇವನ ಬಳಿಯಲ್ಲಿ ನಿಲ್ಲಬೇಕಾಗಿತ್ತು.

ಒಂದು ವೇಳೆ ಆತ್ಮೀಕದಲ್ಲಿ ಬಲಹೀನನಾದ ಸೇವಕನಾಗಲಿ, ವಿಶ್ವಾಸಿಯಾಗಲಿ ಇಂಥಹ ವ್ಯಕ್ತಿಯನ್ನು ಎದುರಿಸ ಬೇಕಾದ ಪರಿಸ್ಥಿತಿ ಬಂದರೆ ಅವರು ಏನು ಮಾಡಬಹುದು ಚಿಂತಿಸಿ ನೋಡಿ. ಮೊದಲು ವ್ಯಕ್ತಿಯ ಅಧೀನಕ್ಕೆ ಒಳಪಡಬೇಕಗುತ್ತದೆ ನಂತರ ಆತನು ಹಾಕುವ ಕಾನೂನಿಗೆ ಒಳಪಡಬೇಕಾಗುತ್ತದೆ. ಆದರೆ ನಿಜವಾಗಿಯೂ ರಕ್ಷಕನಾದ ಯೇಸುಕ್ರಿಸ್ತನನ್ನು ಹೃದಯ ಪೂರ್ವಕವಾಗಿ ಪ್ರೀತಿಸುತ್ತೇನೆ ನಾನು ಮನುಷ್ಯರ ಆಜ್ಞೆಗೆ ಒಳಗಾಗುವುದಿಲ್ಲ ಎಂದು ತೀರ್ಮಾನದ ಮೇಲೆ ನಿಂತಿರುವ ವ್ಯಕ್ತಿಯಾದರೋ "ದೇಹವನ್ನು ಕೊಂದು ಆತ್ಮವನ್ನು ಏನೂ ಮಾಡಲಾರದವರಿಗೆ" ಹೆದರದೆ ಬೇಡಿಹಾಕಿಸಿಕೊಳ್ಳುವುದಕ್ಕೂ ಮತ್ತೂ ಪ್ರಾಣವನ್ನೂ ಕರ್ತನಿಗಾಗಿ ಕಳೆದು ಕೊಳ್ಳಲು ಸಿದ್ಧವಾಗಿರುತ್ತಾರೆ.

**ಒಂದು ವೇಳೆ ಇಂತಹ ಕಟ್ಟಳೆಗಳನ್ನು ಆ ವ್ಯಕ್ತಿ ವಿಧಿಸಿದರೆ :-**

- **ನಾಳೆಯಿಂದ ಸಭೆಗೆ ಹೋಗಬಾರದು;**
- **ಸಭೆಯಲ್ಲಿ ಸೇರಿ ಸುವಾರ್ತೆ ಹೇಳಬಾರದು**
- **ವಾಕ್ಯ ಧ್ಯಾನಿಸುತ್ತಾ, ಭಕ್ತಿ ವೃದ್ಧಿ ಮಾಡಿಕೊಳ್ಳಬೇಡಿರಿ**
- **ದೇವರಲ್ಲಿ ಪ್ರಾರ್ಥಿಸಬೇಡಿರಿ**
- **ಮೊಣಕಾಲು ಹಾಕಬೇಡಿರಿ**
- **ಆರಾಧನೆ ಮಾಡಬೇಡಿರಿ**

ಎಂದು ಹೇಳಿ ಗದರಿಸಿದಾಗ ಆತ್ಮೀಕದಲ್ಲಿ ಬಲಹೀನವಾದ ಆ ವ್ಯಕ್ತಿಯು ಏನು ಮಾಡಬಹುದು --- ತನ್ನ ದುಸ್ಥಿತಿಗಾಗಿ ಆ ವ್ಯಕ್ತಿಯ ಆಜ್ಞೆಗೆ ಒಳಗಾಗಿ ಸತ್ಯ ದೇವರನ್ನು ಕಳೆದುಕೊಳ್ಳಬಹುದು

.

ಅದಕ್ಕಾಗಿಯೇ ನಿನ್ನ ಸೇವಕರು ಆತ್ಮೀಕದಲ್ಲಿ ಬಲವಾಗಿರು ಎಂದು ಬೋಧಿಸುವುದು. ನನಗೆ ಸತ್ಯ ದೇವರು ಬೇಕೆಂದು ನೀನೇ ತೀರ್ಮಾನ

ಮಾಡಿಕೊಳ್ಳಬೇಕು. ಈ ಲೋಕದಲ್ಲಿಯೂ ಮನೆ-ಆಸ್ತಿ-ವಸ್ತುಗಳು ಏನೇ ಕಳೆದು ಕೊಂಡರೂ ಮತ್ತೇ ಅದನ್ನು ಪಡಕೊಳ್ಳಬಹುದು. ಒಂದು ಪಕ್ಷ ನಮ್ಮ ಪ್ರಿಯ ಪಾತ್ರರು ಲೋಕ ಯಾತ್ರೆ ಮಾಡಿದರೂ ಸಹ ಅವರನ್ನು ಮತ್ತೇ ನಾವು ಪರಲೋಕದಲ್ಲಿ ನೋಡಿ ಅವರ ಬಳಿಯಲ್ಲಿ ಸಂತೋಷದಿಂದ ಮಾತನಾಡ ಬಹುದು. ಆದರೆ ಭೂಮಿಯಲ್ಲಿ ರಕ್ಷಕನಾದ ಯೇಸುಕ್ರಿಸ್ತನನ್ನು ಆತನ 'ಅಪಾರವಾದ ಪ್ರೀತಿ'ಯನ್ನು ಕಳೆದುಕೊಂಡರೆ ಎಂದಿಗೂ ಯಾವ ಲೋಕದಲ್ಲಿಯೂ ಅದನ್ನು ಮತ್ತೇ ಪಡೆದುಕೊಳ್ಳಲು ಸಾಧ್ಯವೇ ಇಲ್ಲ. ಕರ್ತನನ್ನು ನಿಜವಾಗಿ ಪ್ರೀತಿಸುವುದಕ್ಕೆ ಕಲ್ಲಾದ ಹೃದಯವನ್ನು ನಿಮ್ಮಿಂದ ತೆಗೆದು ಮೃದುವಾದ ಹೃದಯುವನ್ನು ಆತನು ಎಲ್ಲರಿಗೂ ಕೊಟ್ಟಿದ್ದಾನೆಂದು ಅರ್ಥಮಾಡಿಕೊಂಡು ಆತನ 'ಹೃದಯದ ಪ್ರೀತಿ'ಯಲ್ಲಿ ನೆಲೆನಿಲ್ಲಬೇಕೆಂದು ನೀನು ತಿಳಿದುಕೊಳ್ಳಬೇಕು.

ನಿಮ್ಮ ಸೇವೆಯಲ್ಲೋ, ವಿಶ್ವಾಸದಲ್ಲೋ ಕಂಡುಬರುವ ಬಲಹೀನತೆಯನ್ನು ನಿಮ್ಮಿಂದ ತೆಗೆದುಹಾಕಲು ಕರ್ತನಿಂದ ಸಾಧ್ಯ ಎಂದು ನೀವು ಅರ್ಥಮಾಡಿಕೊಳ್ಳಲು, ಕರ್ತನೇ ಸೌಲನನ್ನು ನೇರವಾಗಿ ಸಂಧಿಸಿ ಸೌಲನಿಗೆ ಮೃದುವಾದ ಹೃದಯವನ್ನು ಅನುಗ್ರಹಿಸಿದನು. ಸೌಲನನ್ನು ಮಾರ್ಪಡಿಸಿದ ಕರ್ತನಿಗೆ ಇನ್ನೆಂತಹ ಕಠಿಣವಾದ ವ್ಯಕ್ತಿಯನ್ನೂ ಸಹ ಮಾರ್ಪಡಿಸಲು ಸಾಧ್ಯವೆಂದು ನೀನು ಅರ್ಥಮಾಡಿಕೊಂಡು ಧೈರ್ಯದಿಂದ ಎಲ್ಲರನ್ನು ಕರ್ತನ ನಾಮದಲ್ಲಿ ಗೆಲ್ಲಲು ಮುಂದೆ ಸಾಗು.

ರಕ್ಷಕನು ಸೌಲನ ಕಲ್ಲಾದ ಹೃದಯವನ್ನು ಮೃದು ಪಡಿಸಲು ತಾನೇ ಸ್ವತಃ ಅವನಿಗೆ ಎದುರಾಗಲು ಬಂದಂತಹ ಕರ್ತನ ಹೃದಯದಲ್ಲಿರುವ ಪ್ರೀತಿಯು ಎಷ್ಟು ಆಶ್ಚರ್ಯವಾದುದಾಗಿದೆ.
ಕರ್ತನ ಬೆಳಕನ್ನು ನೋಡಿದಂತಹ ಸೌಲನು ಕಣ್ಣುಕಾಣದೆ ಮೂರು ದಿನ ಜೊತೆಯಲ್ಲಿದ್ದವರ ಸಹಾಯದಿಂದ ದಮಸ್ಕವನ್ನು ಸೇರಿದನು.

ದಮಸ್ಕದಲ್ಲಿ 'ಅನನೀಯ'ನೆಂಬ ರಕ್ಷಕನಾದ ಯೇಸುವಿನ ಶಿಷ್ಯನಿದ್ದನು, ಅವನಿಗೆ ಕರ್ತನು ದರ್ಶನದಲ್ಲಿ-ಅನನೀಯನೇ ಎಂದಾಗ-ಇಗೋ ಇದ್ದೇನೆ, ಎಂದನು.

ಕರ್ತನು ಅವನಿಗೆ -"ನೀನೆದ್ದು 'ನೆಟ್ಟನೆಬೀದಿ' ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬುವನನ್ನು ವಿಚಾರಿಸು; ಅವನು ಪ್ರಾರ್ಥನೆ ಮಾಡುತ್ತಾನೆ. ಮತ್ತು ಅನನೀಯನೆಂಬ ಒಬ್ಬ ಮನುಷ್ಯನು ಒಳಗೆ ಬಂದು ತನಗೆ ತಿರಿಗಿ ಕಣ್ಣುಕಾಣುವಂತೆ ತನ್ನ ಮೇಲೆ ಕೈಯಿಡುವದನ್ನು ನೋಡಿದ್ದಾನೆ ಎಂದು ಹೇಳಿದಾಗ ಅನನೀಯನು-ಕರ್ತನೇ, ಆ ಮನುಷ್ಯನು ಯೆರೂಸಲೇಮಿನಲ್ಲಿ ನಿನ್ನನ್ನು ನಂಬಿದ ದೇವಜನರಿಗೆ ಎಷ್ಟೋ ಕೇಡನ್ನುಂಟು ಮಾಡಿದನೆಂದು ಅವನ ವಿಷಯವಾಗಿ ಅನೇಕರಿಂದ ಕೇಳಿದ್ದೇನೆ; ಮತ್ತು ಇಲ್ಲಿಯೂ ನಿನ್ನ ಹೆಸರನ್ನು ಸ್ಮರಿಸುವವರೆಲ್ಲರಿಗೆ ಬೇಡಿಹಾಕಿಸುವ ಅಧಿಕಾರವನ್ನು ಮಹಾಯಾಜಕರಿಂದ ಹೊಂದಿದ್ದಾನೆ ಎಂದು ಹೇಳಿದಾಗ ಕರ್ತನು-ಅವನಿಗೆ "ನೀನು ಹೋಗು; ಆ ಮನುಷ್ಯನು ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ. ಅವನು ನನ್ನ ಹೆಸರಿನ ನಿಮಿತ್ತ ಎಷ್ಟು ಹಿಂಸೆ ಅನುಭವಿಸಬೇಕೆಂಬದನ್ನು ನಾನೇ ಅವನಿಗೆ ತೋರಿಸುವೆನು" (ಅ.ಕೃ 9:15,16) ಎಂದು ಹೇಳಿದನು. ಆಗ ಅನನೀಯನು ಅಲ್ಲಿಂದ ಹೊರಟು 'ನೆಟ್ಟನೇಬೀದಿ' ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬುವನನ್ನು ವಿಚಾರಿಸಿದನು, ಯೂದನ ಮನೆಯೊಳಗೆ ಇದ್ದ ಸೌಲನ ಮೇಲೆ ಕೈಯಿಟ್ಟು-ನೀನು ಬಂದ ದಾರಿಯಲ್ಲಿ ನಿನಗೆ ಕಾಣಿಸಿಕೊಂಡ ಕರ್ತನಾದ ಯೇಸುಕ್ರಿಸ್ತನು ನಿನಗೆ ಕಣ್ಣು ಕಾಣುವಂತೆಯೂ ನೀನು ಪವಿತ್ರಾತ್ಮಭರಿತ ನಾಗುವಂತೆಯೂ ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಿದನು. ಹೇಳಿದ ಕೂಡಲೇ ಸೌಲನ ಕಣ್ಣುಗಳಿಂದ ಪರೆಗಳಂತೆ ಏನೋ ಬಿದ್ದು ಅವನ ಕಣ್ಣು ಕಾಣಿಸಿದವು. ಅವನು ಎದ್ದು ದೀಕ್ಷಾಸ್ನಾನಮಾಡಿಸಿಕೊಂಡನು. ತರುವಾಯ ಊಟಮಾಡಿ ಬಲ ಹೊಂದಿದನು.

ಮುಂದೆ ಸೌಲನು ದಮಸ್ಕದಲ್ಲಿದ್ದ ಶಿಷ್ಯರ ಸಂಗಡ ಕೆಲವು ದಿವಸ ಇದ್ದು ತಡಮಾಡದೇ ಸಭಾಮಂದಿರಗಳಲ್ಲಿ ರಕ್ಷಕನಾದ ಯೇಸುವಿನ ವಿಷಯುವಾಗಿ ಆತನೇ ದೇವಕುಮಾರನೆಂದು ಸಾರುವುದಕ್ಕೆ ಆರಂಭಿಸಿದನು.

ನೋಡಿರಿ, ಎಂಥಹಾ ಅದ್ಭುತವಾದ ಕಾರ್ಯ; ಸೌಲನಿಗೆ ಮೂರುದಿನ ಕಣ್ಣು ಕಾಣದೇ ಇರುವಾಗ ಏನು ಕೆಲಸ ಮಾಡಲಾಗದೇ, ಕಣ್ಣೇ ಇಲ್ಲದಿದ್ದರೆ ಬದುಕಿ ಏನು

ಪ್ರಯೋಜನವೆಂದು ತಿಳಿದು ಅವನು ರಕ್ಷಕನಲ್ಲಿ ಪಶ್ಚಾತ್ತಾಪದ ಕಣ್ಣೀರನ್ನು ಸುರಿಸಿರಬಹುದು. ಕರ್ತನು ಅವನ ಹೃದಯವನ್ನು ಮೃದುಪಡಿಸಿದನು. ನಂತರ ಸೌಲನಿಗೆ ಅದ್ಭುತ ನಡೆಯಿತು. ಅಹಾ! ಎಂಥಹಾ ಆಶ್ಚರ್ಯ!!! ಕರ್ತನು ಸೌಲನಿಗೆ ಮತ್ತೇ ಕಣ್ಣನ್ನು ಕೊಟ್ಟನು. ಕರ್ತನು ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ, ಶಕ್ತನಾಗಿದ್ದಾನೆ ನಮ್ಮ ರಕ್ಷಕನಾದ ಯೇಸುಕ್ರಿಸ್ತನಿಗೆ ಸ್ತೋತ್ರವಾಗಲಿ.

ಕರ್ತನಿಂದ ಮೃದವಾದ ಹೃದಯ ಹೊಂದಿದನು ಆದುದರಿಂಲೇ ಸೌಲನು ಧೈರ್ಯವಾಗಿ ಸಭಾಮಂದಿರಗಳಲ್ಲಿ ನಿಂತು ರಕ್ಷಕನಾದ ಯೇಸುವಿನ ಬಗ್ಗೆ ಸುವಾರ್ತೆ ತಿಳಿಸುವದಕ್ಕೆ ಸಾಧ್ಯವಾಯಿತು.

**"ಈ ಜನರು ಮಾತಿನಿಂದ ನನ್ನನ್ನು ಸಮೀಪಿಸಿ ತುಟಿಯಿಂದ ನನ್ನನ್ನು ಸನ್ಮಾನಿಸುತ್ತಾರೆ. ಮನಸ್ಸನ್ನೋ ದೂರಮಾಡಿಕೊಂಡು ಬಾಯಿಪಾಠವಾಗಿ ಕಲಿತಿರುವ ಮನುಷ್ಯರ ಆಜ್ಞೆಗೆ ಸರಿಯಾದ ಭಯಭಕ್ತಿಯನ್ನು ಮಾತ್ರ ನನ್ನಲ್ಲಿಟ್ಟಿದ್ದಾರೆ;" (ಯೆಶಾ 29:13)**

ನೀನು ರಕ್ಷಕನ ಬಗ್ಗೆ ತಿಳಿದು, ಈ ಲೋಕದ ಆಸೆಗೆ ಒಳಗಾಗಿ, ಆತನ ಪ್ರೀತಿಯನ್ನು ಮರೆತು ಈ ವಾಕ್ಯದ ಪ್ರಕಾರ ಜೀವಿಸುತ್ತಿದ್ದೀಯಾ ಒಮ್ಮೆ ನಿನ್ನನ್ನು ನೀನು ಪರಿಶೀಲಿಸಿಕೋ.

ನಿನ್ನನ್ನು ನೀನೇ ಮೋಸ ಮಾಡಿಕೊಂಡು, ನಿನ್ನ ಮುಖಾಂತರ ಪರಲೋಕದ ದೇವರ ನಾಮವು ದೂಷಣೆಗೆ ಒಳಗಾಗುವುದಾದರೆ ಖಂಡಿತವಾಗಿ ಶಿಕ್ಷೆಗೆ ಒಳಗಾಗುತ್ತೀಯಾ! ಎಂದು ನಿನ್ನನ್ನು ಎಚ್ಚರಿಸಿಕೊಳ್ಳಬೇಕಾದ ಸಮಯವಾಗಿದೆ.

ಪ್ರೀತಿಯ ದೇವರ ಮಗುವೇ, ದೀನರು ಕರ್ತನಲ್ಲಿ ಹೆಚ್ಚು-ಹೆಚ್ಚಾಗಿ ಆನಂದಿಸುವರು, ಬಡವರು ಕರ್ತನಲ್ಲಿ ಉಲ್ಲಾಸಿಸುವರು. ಏಕೆಂದರೆ ಕರ್ತನ ವಿರುದ್ಧವಾಗಿ ಭಯವಿಲ್ಲದೆ ನಡೆಯುವ ಭಯಂಕರರು ನಿಶ್ಯೇಷವಾಗುವರು, ಧರ್ಮನಿಂದಕರು ನಿರ್ನಾಮವಾಗುವರು, ಸುಳ್ಳು ಸಾಕ್ಷಿಯನ್ನು ಹೇಳಿ ಮತ್ತೊಬ್ಬರ ಮೇಲೆ ತಪ್ಪುಹೊರಿಸುವವರೂ ಸುಳ್ಳು ಹೇಳುವವರೂ, ದುಷ್ಕೃತ್ಯಗಳನ್ನು ನಡೆಸುವವರೂ, ದೋಷವನ್ನು ಖಂಡಿಸುವವನಿಗೆ ಉರುಲೊಡ್ಡುವವರೂ,

ನ್ಯಾಯವಂತನ ನ್ಯಾಯವನ್ನು ಸುಮ್ಮ-ಸುಮ್ಮನೆ ಅಯೋಗ್ಯ ಕಾರ್ಯಕ್ಕೆ ಉಪಯೋಗಿಸಿ ನಡೆಯುವಂತವರೆಲ್ಲಾ ಎರಡನೆಯ ಮರಣಕ್ಕೆ ಈಡಾಗುವರು. ಪ್ರೀಯರೇ, ನಿಮ್ಮ-ನಿಮ್ಮ ಅಧರ್ಮಕಾರ್ಯವನ್ನು ಸಂಪೂರ್ಣವಾಗಿ ಬಿಟ್ಟು-ಬಿಟ್ಟು ನಿಮ್ಮ ಕಲ್ಲಾದ ಹೃದಯವನ್ನು ಬದಲಾಯಿಸಿಕೊಳ್ಳಿರಿ, ಆಗ ಕರ್ತನು ಕೊಡುವ ಶಿಕ್ಷೆಗೆ ಒಳಗಾಗುವುದಿಲ್ಲ. ಆತನ ಮಾತುಗಳನ್ನು ತಿರಸ್ಕರಿಸಿ ನಡೆದರೆ ನಿನಗೆ ಸಿಕ್ಕುವುದು "ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣ" ಈ ಮರಣದಿಂದ ನಿರಂತರವಾಗಿ ತಪ್ಪಿಸಿಕೊಳ್ಳಬೇಕಾದರೆ ಮೊದಲು ಎಲ್ಲಾ ವಿಧವಾದ ನೀಚವಾದ ಕಾರ್ಯಗಳನ್ನು ಬಿಟ್ಟು ಕಲ್ಲಾದ ಹೃದಯವನ್ನು ಮಾರ್ಪಡಿಸಿಕೊಂಡು, ರಕ್ಷಕನಾದ ಯೇಸುವಿನ ಪ್ರೀತಿಯನ್ನು ಸಂಪೂರ್ಣವಾಗಿ ಹೊಂದಿಕೊಳ್ಳಬೇಕು, ಆಗಲೇ ನಿನ್ನ ಕುಟುಂಬದವರೂ ನಿನ್ನ ಜೊತೆಗಾರರೂ ನಿನ್ನೊಟ್ಟಿಗೆ ಕೆಲಸಮಾಡುವವರೂ ಮತ್ತು ನಿನ್ನ ಸ್ನೇಹಿತರೂ ಇವರೆಲ್ಲರೂ ನಿನ್ನೊಂದಿಗಿರುವವರೆಲ್ಲರೂ ಸದಾಕಾಲ ನಿನ್ನ ಮುಖಾಂತರ ಸಂತೋಷದಿಂದ ಜೀವಿಸುವರು. ಆಗ ನೀನೂ ಎಲ್ಲಾ ಮಂಡಲದಲ್ಲೂ ಆಶೀರ್ವದಿಸಲ್ಪಡುವಿ.

ಸೌಲನನ್ನು ಸರ್ವಶಕ್ತನಾದ ದೇವರು ಬದಲಾವಣೆ ಮಾಡಲು ಅವನ ಕಣ್ಣು ಮೂರುದಿನ ಕಾಣದೇ ಹೋಗಬೇಕಾಯಿತು. ನಿನ್ನನ್ನು ಬದಲಾವಣೆ ಮಾಡಲು ಪ್ರೀತಿಯ ದೇವರು ಎಷ್ಟೋ ಅವಕಾಶಗಳನ್ನು ಕೊಟ್ಟರೂ ನೀನು ಬದಲಾಗಲಿಲ್ಲವಾದರೆ ನಿನ್ನ ಹೃದಯ ಇನ್ನೆಂತಹ ಕಠಿಣವಾಗಿ ಮಾರ್ಪಟ್ಟಿದೆ ಎಂದು ನೀನು ಗ್ರಹಿಸಿಕೋ. ಪರಮ ದೇವರು ನಿನ್ನ ಹೃದಯವನ್ನು ಮೃದುಮಾಡಲು ಬಹಳ ಇಷ್ಟವುಳ್ಳವನಾಗಿದ್ದಾನೆ. ಪ್ರೀತಿಯ ದೇವರ ಮಗುವೇ, ಕರ್ತನ ಕರುಣೆಯನ್ನು ಇಂದೇ ಆಶ್ರಯಿಸಿಕೋ ಆತನ ಕರೆಗೆ ಕಿವಿಗೊಡು ಇಲ್ಲವಾದರೆ ಆತನು ನಿನ್ನನ್ನು ಕಠಿಣವಾಗಿ ಶಿಕ್ಷಿಸಬೇಕಾಗುತ್ತದೆ. ಆತನ ಉದ್ದೇಶವೆಲ್ಲವೂ ನಿನ್ನನ್ನು ಮಾರ್ಪಡಿಸುವದೇ ಆಗಿದೇ. ಯಾಕೆಂದರೆ ನೀನು ನಿನ್ನ ಸ್ವಂತ ಸೊತ್ತಲ್ಲ ಕರ್ತನು ನಿನ್ನನ್ನು ತನ್ನ ಪರಿಶುದ್ಧ ರಕ್ತಕೊಟ್ಟು ಕೊಂಡುಕೊಂಡಿದ್ದಾನೆ. ನಿನ್ನನ್ನು ಬದಲಾವಣೆ ಮಾಡಲು ಕಾತುರದಿಂದ ಕಾಯುತ್ತಿದ್ದಾನೆ. ಇದೇ ಸುಸಮಯ ಈ ಹೊತ್ತೇ ನಿನ್ನಲ್ಲಿರುವ ಕಠಿಣತ್ವವನ್ನು ಕರ್ತನಿಗೆ ಒಪ್ಪಿಸಿಕೊಡು. ಆತನು ಖಂಡಿತವಾಗಿ ನಿನ್ನನ್ನು ಮೃದುವಾಗಿ ಮಾರ್ಪಡಿಸುವನು. ಸೌಲನನ್ನು ಕರ್ತನು ಮಾರ್ಪಡಿಸಿದ ನಂತರ ಆತನ ಹೆಸರನ್ನು ಸಹ ಬದಲಾಯಿಸಿ 'ಪೌಲ' ಎಂಬುದಾಗಿ ಹೆಸರನ್ನು ಕೊಟ್ಟನು, ಪೌಲನು ಉತ್ತಮವಾದ ಸೇವೆಯನ್ನು ಕರ್ತನಿಗೆ ಸಲ್ಲಿಸಿದನು. ಸಭೆಗಳನ್ನು ಸ್ಥಾಪಿಸಿದನು. ಚರಿತ್ರೆಯಲ್ಲಿ ಉತ್ತಮ ಸ್ಥಾನವನ್ನು ಪಡೆದು ನಮ್ಮೆಲ್ಲರಿಗೂ ಇಂದು ಸಹ ಉತ್ತಮ ಸಾಕ್ಷಿಯಾಗಿ ಆತನ ಸಾಕ್ಷಿ ಮೂಲಕ ಮಾತನಾಡುತ್ತಿದ್ದಾನೆ ಮತ್ತು ಕರ್ತನು ಅವನ ಮೇಲಿಟ್ಟ ಚಿತ್ತವನ್ನು ನೆರವೇರಿಸಿದವನಾಗಿದ್ದಾನೆ.

ನಿನ್ನ ಕಠಿಣತ್ವವನ್ನು ಮತ್ತು ಕಲ್ಲಾದ ಹೃದಯವನ್ನು ಕರ್ತನಿಗೆ ಒಪ್ಪಿಸಿಕೊಟ್ಟಾಗಲೇ ನೀನು ಮೃದುವಾದ ಹೃದಯವನ್ನು ಕರ್ತನಿಂದ ಪಡೆಯಲು ಸಾಧ್ಯ. ಆಗಲೇ ನೀನು ಆತನ ಚಿತ್ತವನ್ನು ಸಂಪೂರ್ಣವಾಗಿ ಪೌಲನಂತೆ ನೆರವೇರಿಸಲು ಸಾಧ್ಯ. ತಡಮಾಡಬೇಡ, ನಿನಗೆ ಸಮಯವು ಕೊಂಚವಾಗಿದೆ ಎಂದು ಗ್ರಹಿಸಿಕೋ, ಆತನ ಚಿತ್ತವನ್ನು ಸಂಪೂರ್ಣವಾಗಿ ನೆರವೇರಿಸಲು ನಿನಗೆ ಅವಶ್ಯಕವಾಗಿರುವ ಮೃದುವಾದ ಹೃದಯವನ್ನು ಬೇಡಿ ಪಡೆದುಕೋ. ಪೌಲನು ಕಣ್ಣು ಬಂದ ತತ್‌ಕ್ಷಣವೇ ಆತನಿಗೆ ನೇಮಿಸಲ್ಪಟ್ಟಂತಹ ಸೇವೆಯನ್ನು ಮಾಡಲು ತಡಮಾಡಲಿಲ್ಲ ಎಂದು 'ಸತ್ಯವೇದ' ಹೇಳುತ್ತಿದೆ. ಕರ್ತನು ನಿನ್ನನ್ನು ಬದಲಾವಣೆ ಮಾಡಿ ಮೃದುವಾದ ಹೃದಯವನ್ನು ಕೊಟ್ಟಿರುವುದಾದರೆ 'ಪ್ರೀತಿಯ ಯಶಸ್ಸ'ನ್ನು ನೀನು ಪಡೆದುಕೊಳ್ಳುವುದಕ್ಕೆ ಈಗಲೇ ಕರ್ತನಿಗಾಗಿ ಏನು ಮಾಡಬೇಕೋ ಅದನ್ನು ತಡಮಾಡದೇ ಮಾಡಿಬಿಡು. ಸಮಯವು ಕೊಂಚವಾಗಿದೆ ಎಂದು ಮರೆಯಬೇಡ.

**"ಕರ್ತನೇ ನನ್ನನ್ನು ಜ್ಞಾಪಿಸಿಕೊಂಡರೆ ಎಷ್ಟೋ ಒಳ್ಳೇದು" ಆಮೆನ್.**

# 7. ಸತ್ಯಮಾರ್ಗದ ಪ್ರೀತಿ

"ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ." (ಮತ್ತಾಯ 28:19,20)

ನೀನು ಕರ್ತನಾದ ಯೇಸುವನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಂಡು, ಪಾಪ-ಶಾಪದಿಂದ ಬಿಡುಗಡೆಹೊಂದಿರುವುದಾದರೆ, ಕರ್ತನು ನೂತನ ಜೀವನವನ್ನು ನಿನಗೆ ಕೊಟ್ಟಿದ್ದಾನೆಂದು ತಿಳಿದುಕೋ. ಮತ್ತು ನಿನ್ನ ಜೀವನವನ್ನು ಕರ್ತನಿಗೆ ಒಪ್ಪಿಸಿಕೊಡು, ಸತ್ತರೂ ಪರಲೋಕಕ್ಕೆ ಹೋಗುವುದು ನಿಶ್ಚಯವೆಂದು, ನಿನ್ನ ಹೆಸರು 'ಜೀವಭಾದ್ಯರಪಟ್ಟಿ'ಯಲ್ಲಿ ಬರೆದಿದೆ ಎಂಬ ಬಲವಾದ ವಿಶ್ವಾಸ ನಿನಗೆ ಸದಾಕಾಲವಿರಲಿ. ಈ ಪಾಪದ ಲೋಕದಲ್ಲಿ ಜೀವಿಸುವುದಾದರೂ ಪಾಪವು ನಿನ್ನ ಮೇಲೆ ಅಧಿಕಾರ ನಡೆಸುವುದಿಲ್ಲ, ಏಕೆಂದರೆ ನಿನ್ನೊಳಗೆ ಕರ್ತನಾದ ಯೇಸುಕ್ರಿಸ್ತನು ಇದ್ದಾನೆ. ಈ ವಿಶ್ವಾಸದ ಪ್ರೀತಿಯು ನಿನ್ನಲ್ಲಿ ಇನ್ನೂ ಹೆಚ್ಚಾಗಲು ಕರ್ತನಾದ ಯೇಸುಕ್ರಿಸ್ತನಲ್ಲಿ ನಿನಗಿರುವ ಅನ್ಯೋನ್ಯತೆಯು ಬೆಳೆದು ಬಂದು 'ಸತ್ಯಮಾರ್ಗದ ಪ್ರೀತಿ'ಯನ್ನು ಎಲ್ಲರಿಗೂ

ಪ್ರಕಟಪಡಿಸಲು ಪ್ರಯತ್ನಿಸು. ಆಗ ನೀನು ಇನ್ನೂ ಹೆಚ್ಚು ಕರ್ತನಲ್ಲಿ ಬಲ ಹೊಂದಿಕೊಳ್ಳಲು ಸಾಧ್ಯವಾಗುತ್ತದೆ.

ನಿನ್ನ ಕೈಯಲ್ಲಿರುವ 'ಪ್ರೀತಿಯ ಯಶಸ್ಸ'ನ್ನು ಓದಿದ ನಂತರ ಸತ್ಯವೇದವನ್ನೇ ಕರ್ತನ ಪ್ರೀತಿಯನ್ನು ಸಾರುವುದಕ್ಕೆ ಮಾರ್ಗವಾಗಿ ಬಳಸಿಕೋ, ಯಾಕೆಂದರೆ ಸತ್ಯವೇದವು ನಿಜವಾದ ಸತ್ಯವನ್ನು ತಿಳಿಸುತ್ತದೆ. ನಿನ್ನ ಎಲ್ಲಾ ಸಮಸ್ಯೆಗಳಿಗೆ ಉತ್ತರವನ್ನು ಕೊಡುತ್ತದೆ. ನಿನಗೆ ಅಸಮಧಾನ ಬರುವಾಗ ಸತ್ಯವೇದವನ್ನು ಮತ್ತೇ-ಮತ್ತೇ ಓದು. ಅದರಲ್ಲಿರುವ ಎಲ್ಲಾ ವಾಕ್ಯಗಳು ಅರ್ಥಗರ್ಭಿತವಾಗಿದೆ. ವಾಕ್ಯಗಳನ್ನು ನಿನ್ನ ಹೃದಯದ ಹಲಿಗೆಯಲ್ಲಿ ಬರೆದಿಕೋ.

ಕರ್ತನಾದ ಯೇಸುವಿನ ಪ್ರೀತಿಯನ್ನು ಪ್ರಕಟಿಸು. ನಿನ್ನನ್ನು ರಕ್ಷಿಸಿದ 'ಯೇಸು' ನಿನ್ನ ಸ್ನೇಹಿತರನ್ನು, ಕುಟುಂಬದವರನ್ನು, ನೆರೆಯವರನ್ನು ರಕ್ಷಿಸಲು ಶಕ್ತನಾಗಿದ್ದಾನೆ. ಆತನು ನಿನ್ನನ್ನು ಉಪಯೋಗಿಸಿಕೊಳ್ಳಲು ಒಪ್ಪಿಸಿಕೊಡು. ಆಗ ನೀನು ಆತನ ವಾಕ್ಯವನ್ನು ಸಾರುವಾಗ ಅವರ ಹೃದಯದಲ್ಲಿ ರಕ್ಷಕನಾದ ಯೇಸುವಿನ ಪ್ರೀತಿ ಏನೆಂದು ಅರ್ಥವಾಗುತ್ತದೆ. ನೀನು ರಕ್ಷಣೆಯ ಮಾರ್ಗವನ್ನು ತಿಳಿದು; ಮತ್ತೊಬ್ಬರಿಗೆ ಸುವಾರ್ತೆ ಸಾರದೆ ಹೋದರೆ ಪರಲೋಕದ ದೇವರು ನಿನ್ನ ಬಳಿ ಒಂದು ದಿನ ತಪ್ಪದೇ ಲೆಕ್ಕ ಕೇಳುತ್ತಾನೆ. ನಿನಗೆ ಕೊಟ್ಟಿರುವ ತಲಾಂತನ್ನು ನಿನ್ನಲ್ಲೇ ಬಚ್ಚಿಟ್ಟುಕೊಳ್ಳದೇ; ಅದು ಬೇರೆಯವರಿಗೂ ಉಪಯೋಗವಾಗಲು ಪ್ರಯತ್ನಿಸು. ಆಗ ನೀನು ಕರ್ತನಿಂದ ಹೊಂದಿರುವ 'ಸತ್ಯವಾದ ಪ್ರೀತಿ'ಯನ್ನು ನಿನ್ನ ಮುಖಾಂತರ ಅನೇಕರು ಹೊಂದಿಕೊಳ್ಳಲು ಸಾಧ್ಯವಾಗುತ್ತದೆ.

ರಕ್ಷಕನಾದ ಯೇಸುವನ್ನು ತಿಳಿದಿರುವ ಸತ್ಯ ದೇವರ ಮಕ್ಕಳೊಂದಿಗೆ ಸೇರಿ ಅವರೊಟ್ಟಿಗೆ ಅನ್ಯೋನ್ಯತೆಯಿಂದ ಪರಿಶುದ್ಧತೆಯಿಂದ ಸ್ನೇಹ ಬೆಳೆಸುವಾಗ ನಿನ್ನ ಆತ್ಮೀಕ ಜ್ಞಾನ ಅಭಿವೃದ್ಧಿಯಾಗುತ್ತದೆ. ಮತ್ತು ಕರ್ತನೊಟ್ಟಿಗೆ ಹೆಚ್ಚು ಮಾತಾಡಲು ಅವಕಾಶ ಸಿಗುತ್ತದೆ. ಸರ್ವಶಕ್ತನು ಒಬ್ಬೊಬ್ಬರ ಜೀವನದಲ್ಲಿ ಎಂಥೆಂಥ ಕಾರ್ಯಗಳನ್ನು ಮಾಡಿದ್ದಾರೆ ಎಂದು ತಿಳಿದುಕೊಳ್ಳಲು ಕರ್ತನನ್ನು ಮಹಿಮೆ ಪಡಿಸಲು ಅನುಕೂಲವಾಗುತ್ತದೆ. ನಿಮ್ಮ ಜೀವನದಲ್ಲಿ ಕಲಿಯಬೇಕಾಗಿರುವ ಅನೇಕ ಪರಲೋಕದ ಕಾರ್ಯಗಳು ಸಹ ನಿನಗೆ ಗೊತ್ತಾಗುತ್ತದೆ. ಸತ್ಯವೇದ ವಾಕ್ಯಗಳನ್ನು ಒಗ್ಗಟ್ಟಿನಿಂದ ಧ್ಯಾನಿಸುಲು ಪ್ರಯತ್ನಿಸು. ಯಾಕೆಂದರೆ 'ಒಬ್ಬರಿಗಿಂತ ಇಬ್ಬರು ಮೇಲು' ಎಂದು ಸತ್ಯವೇದ ತಿಳಿಸುತ್ತಿದೆ ಆಗಲೇ ರಕ್ಷಕನಾದ ಯೇಸುವಿನ ಪ್ರೀತಿಯನ್ನು ಮತ್ತೊಬ್ಬರಿಗೆ ಪರಿಚಯ ಪಡಿಸಲು ನಿನಗೆ ಸಹಾಯವಾಗುತ್ತದೆ.

ಈ ಲೋಕವು ಕೊಡಲು ಅಸಾಧ್ಯವಾಗಿರುವ ಉಡುಗೊರೆಯನ್ನು ತಂದೆ ದೇವರು ನಮ್ಮೆಲ್ಲರಿಗೆ ಕೊಟ್ಟಿದ್ದಾರೆ. "ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿ ಕೊಟ್ಟನಲ್ಲಾ" (ರೋಮಾ 8:32) ಹೌದು ನಮ್ಮ ಪ್ರೀತಿಯ 'ರಕ್ಷಕನಾದ ಯೇಸು'ವನ್ನು ತಂದೆ ದೇವರು ನಮಗೋಸ್ಕರ ನಮ್ಮೆಲ್ಲರ ಆತ್ಮ ಸಂರಕ್ಷಣೆಗೋಸ್ಕರ ಕೊಟ್ಟಿರುವುದು ಯಾರೂ ಮಾಡಲಾಗದ ತ್ಯಾಗವಾಗಿದೆ. ನಿನ್ನನ್ನು ಪ್ರೀತಿ ಮಡುವ ವ್ಯಕ್ತಿಗಳಿಗೆ ಈ ಉಡುಗೊರೆ ಬಗ್ಗೆ ತಿಳಿಸು. ನೀನು ಓದುವಂತಹ 'ನಂಬಿಕೆ ರಹಸ್ಯ,' 'ಅದ್ಭುತ ಸಾಕ್ಷಿ', 'ಪ್ರೀತಿಯ ಯಶಸ್ಸು', 'ಕಣ್ಣೀರಿನ ಕೂಗು' 'ನಾನು ನನ್ನ ಸರ್ವಸ್ವ', 'ಯಾವುದು ಬೇಕು', 'ಜ್ಞಾನ ಸ್ತೋತ್ರದ ಯಜ್ಞಗಳು', 'ಪ್ರಾರ್ಥನೆಯ ನಿಧಿ ನಿನ್ನದೇ', 'ನಿನ್ನ ಹಾಗೆ ಯಾರು ಇಲ್ಲ'. ಈ ಪುಸ್ತಕಗಳ ಪ್ರೀತಿಯನ್ನು ತಿಳಿಸಿಕೊಡು. ಆಗ ಈ ಆತ್ಮೀಕವಾದ ಪುಸ್ತಕಗಳ ಮುಖಾಂತರ ರಕ್ಷಕನಾದ ಯೇಸುಕ್ರಿಸ್ತನು ಅವರನ್ನು ಎಷ್ಟು ಪ್ರೀತಿ ಮಾಡುತ್ತಾನೆ ಎಂದು ತಿಳಿದುಕೊಳ್ಳುವರು. ಅಮೂಲ್ಯವಾದ ಉಡುಗೊರೆಯಾಗಿ ಇರುವ ರಕ್ಷಣೆಯ ಮಾರ್ಗವನ್ನು ಎಲ್ಲರಿಗೂ ಪ್ರಕಟಿಸುವದಕ್ಕೆ ಯಾವಾಗಲೂ ಪ್ರಯತ್ನಿಸು. ಯಾಕೆಂದರೆ ಸತ್ಯವನ್ನು ಯಾರೂ ಮುಚ್ಚಿಡಲು ಸಾಧ್ಯವಿಲ್ಲ. ಅದು ಒಂದಲ್ಲಾ ಒಂದು ದಿನ ಪ್ರಕಟವಾಗಲೇಬೇಕು.

ಪ್ರಿಯ ದೇವರ ಮಗುವೇ, ನೀನು ರಕ್ಷಕನಾದ ಯೇಸುವನ್ನು ಪ್ರೀತಿಸುತ್ತಾ ಹೆಚ್ಚಾಗಿ ನಿನ್ನಲ್ಲಿರುವದನ್ನು ಬೇರೆಯವರಿಗೆ ಸಹಾಯಮಾಡು. ನೀನು ಲೋಕದಲ್ಲಿ ಹೆಚ್ಚಾಗಿ ಸಂಪಾದಿಸಿಕೊಂಡು ಸ್ವಾರ್ಥವಾಗಿ ಜೀವಿಸುತ್ತಾ ಬೇರೆಯವರಿಗೆ ಸಹಾಯ ಮಾಡದಿದ್ದರೆ ಏನು ಪ್ರಯೋಜನವಿಲ್ಲ. "ಭೂಲೋಕದಲ್ಲಿ ಗಂಟುಮಾಡಿ ಇಟ್ಟು ಕೊಳ್ಳಬೇಡಿರಿ; ಇಲ್ಲಿ ಅಂತೂ ಅದು ನುಸಿಹಿಡಿದು ಕಿಲುಬು ಹತ್ತಿ ಕೆಟ್ಟು ಹೋಗುವದು; ಇಲ್ಲಿ ಕಳ್ಳರು ಕನ್ನಾ ಕೊರೆದು ಕದಿಯುವರು. ಆದರೆ ಪರಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಿರಿ; ಅಲ್ಲಿ ಅದು ನುಸಿ ಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವದಿಲ್ಲ; ಅಲ್ಲಿ ಕಳ್ಳರು ಕನ್ನಾಕೊರೆಯುವದೂ ಇಲ್ಲ, ಕದಿಯುವದೂ ಇಲ್ಲ. ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸೂ ಇರುವದಷ್ಟೇ." (ಮತ್ತಾಯ 6:19–21)

ಪರಲೋಕದ ದೇವರ ರಾಜ್ಯಕ್ಕಾಗಿ ಪ್ರಯಾಸಪಡು. ಈ ಲೋಕಕ್ಕಾಗಿ ಪ್ರಯಾಸ ಪಡುವುದಾದರೆ ನಷ್ಟ, ರೋಗ, ಭಾದೆ ಎಲ್ಲಾ ಬರುತ್ತೇ; ಸಂಪಾದಿಸಿದ ಹಣ ಆಸ್ಪತ್ರೆಗೆ ಹೋಗಬಹುದು ಅಥವಾ ವ್ಯರ್ಥವಾಗಬಹುದು ಇಲ್ಲಾ ಸ್ವಂತ ಕಾರ್ಯಕ್ಕಾಗಿ ಉಪಯೋಗವಾಗಬಹುದು. ಯಾವುದಾದರೂ ಸರಿಯೇ ಕೊನೆಯಲ್ಲಿ ಅದು ಮುಗಿದುಹೋಗುವಂತದಾಗಿದೆ ಆದರೆ ಸತ್ಯವಾದ ದೇವರ ರಾಜ್ಯಕ್ಕಾಗಿ ಮತ್ತು ನೀತಿಗಾಗಿ ಪ್ರಯಾಸ ಪಟ್ಟರೆ "ಲಾಭ, ಆರೋಗ್ಯ, ನೆಮ್ಮದಿ'ಯನ್ನು ಮತ್ತು ಅನೇಕ ಆಶೀರ್ವಾದಗಳಿಗೆ ಪಾತ್ರರಾಗಬಹುದು ಮತ್ತು ಪರಲೋಕದಲ್ಲಿ ಗಂಟು ಮಾಡಿ

ಇಟ್ಟುಕೊಳ್ಳುತ್ತಿರುತ್ತೀಯಾ!! ಈ ಹೊತ್ತೇ ಒಮ್ಮೆ ನಿನ್ನ ಪ್ರಯಾಸವನ್ನು ಗಮನಿಸಿಕೋ! ಯಾವುದಕ್ಕೆ ಹೆಚ್ಚು ಸಮಯಕೊಡಬೇಕು ತೀರ್ಮಾನಿಸು.

ರಕ್ಷಕನಾದ ಯೇಸುಕ್ರಿಸ್ತನು ನಿನ್ನನ್ನು ಪ್ರೀತಿಸುತ್ತಿರುವುದರಿಂದ ನಿನ್ನ ನಡೆ-ನುಡಿಗಳಲ್ಲಿ ಆತನನ್ನು ತೃಪ್ತಿಪಡಿಸು. ಎಂಥಹಾ ಕಷ್ಟ ಬಂದರೂ ಆತನಲ್ಲಿ ಪ್ರಶ್ನೆ ಹಾಕದೇ, ಏನೇ ಸಂಭವಿಸಿದರೂ ರಕ್ಷಕನಾದ ಯೇಸುವಲ್ಲಿ ಸಂತೋಷವಾಗಿರಲು ಪ್ರಯತ್ನಿಸು. ಮತ್ತೊಬ್ಬರನ್ನು ನೋಡಿ ಹೊಟ್ಟೆಕಿಚ್ಚು ಪಡಬೇಡ, ನಿನ್ನಲ್ಲಿರುವಂತದರಲ್ಲಿ ನೀನು ತೃಪ್ತಳಾ/ನಾ/ಗಿ ಪರಲೋಕದ ದೇವರಿಗೂ ಮತ್ತು ನಿನ್ನನ್ನು ಪ್ರೀತಿಸುವ ಜನರಿಗೂ ಧಾರಳವಾಗಿ ನಿನ್ನಲ್ಲಿರುವದನ್ನು ಕೊಡು. ನೀನು ಜನರೊಟ್ಟಿಗೆ ಮಾತಾಡುವಾಗ ನಿನ್ನ ಮಾತುಗಳು ಸತ್ಯವಾಗಿರಲಿ; ಆ ಸತ್ಯವನ್ನು ಹೇಳುವಾಗ ನೀನು ಅವರನ್ನು ಕರುಣಿಸುತ್ತಿದ್ದೀಯಾ ಎಂದು ತಿಳಿದುಕೋ. ಯಾಕೆಂದರೆ ಈ ಲೋಕದಲ್ಲಿ ಸುಳ್ಳು ಮಾರ್ಗದ ಪ್ರೀತಿಯನ್ನೇ ಎಲ್ಲರೂ ತೋರಿಸುವುದು. ಆದರೆ ನೀನಾದರೋ ಪರಲೋಕದಿಂದ ಆಯ್ಕೆಯಾದ ವ್ಯಕ್ತಿಯಾಗಿರುವುದರಿಂದ 'ಸತ್ಯಮಾರ್ಗದ ಪ್ರೀತಿ'ಯನ್ನೇ ಎಲ್ಲರಿಗೂ ತೋರಿಸಬೇಕು ಅದೇ ನಿನ್ನ ಕರ್ತವ್ಯವಾಗಿದೆ ಎಂದು ಮರೆಯಬೇಡ.

"ಮೋಸಹೋಗಬೇಡಿರಿ; ದೇವರು ತಿರಸ್ಕಾರ ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು. ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು." (ಗಲಾತ್ಯ 6:7,8)

ಹೆಚ್ಚು ನಿನ್ನ ಹೃದಯವನ್ನು ಜಾಗ್ರತೆ ಪಡೆಸಿಕೋ ಯಾಕೆಂದರೆ ಹೃದಯದಲ್ಲಿ ತುಂಬಿರುವುದೇ ಬಾಯಿಂದ ಹೊರ ಬರುತ್ತದೆ. ನೀನು ಕೆಟ್ಟ ಆಲೋಚನೆಗಳನ್ನು ಮಾಡುತ್ತಾ ನಿನ್ನ ಹೃದಯವನ್ನು ಕತ್ತಲಾಗಿ ನೀನೇ ಹಾಳುಮಾಡಿಕೊಳ್ಳುವುದಾದರೆ ಯಾವ ಪ್ರಯೋಜನವೂ ಇಲ್ಲ. ಮತ್ತು ಸತ್ಯವೆಂಬುದು ನಿನ್ನಲ್ಲಿ ಕಂಡು ಬರದಿದ್ದರೆ ಎಲ್ಲರ ಮಧ್ಯದಲ್ಲಿ ದೋಷಿಯಾಗಿ ನಿಲ್ಲುತ್ತೀಯ. ನಿನ್ನನ್ನು ಆ ರೀತಿ ದೋಷದಲ್ಲಿ ನೋಡಲು ಕರ್ತನು ಇಷ್ಟ ಪಡುವುದಿಲ್ಲ. ಪರಲೋಕ ರಾಜ್ಯಕ್ಕಾಗಿ ಬಿತ್ತುತ್ತಿದ್ದೀಯಾ ನಿನ್ನ ಕೆಲಸನೋಡಲು ಕಾರ್ಯಕ್ಕಾಗಿಯೂ ನಿನ್ನ ಆಸೆ ಆಕಾಂಕ್ಷೆಯನ್ನು ನೆರವೇರಿಸುವುದಕ್ಕಾಗಿಯೂ ಬಿತ್ತುತ್ತಿದ್ದೀಯಾ ಎಂದು ಗಮನಿಸಿಕೋ.

"ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು ಎಂಬ ಒಂದೇ ಮಾತಿನಲ್ಲಿ ಧರ್ಮಶಾಸ್ತ್ರವೆಲ್ಲಾ ಅಡಕವಾಗಿದೆ". (ಗಲಾತ್ಯ 5:14) ನೀನು ಒಳ್ಳೇಯದನ್ನು ಮಾಡುವುದರಲ್ಲಿ ಬೇಸರಗೊಳ್ಳಬೇಡ; ನೀನು ಮನಗುಂದದಿದ್ದರೆ ತಕ್ಕ ಸಮಯದಲ್ಲಿ

ಒಳ್ಳೇ ಬೆಳೆಯನ್ನು ಕೊಯ್ಯಲು ಸಾಧ್ಯವಾಗುತ್ತದೆ. ಬೇರೆಯವರನ್ನು ನೀನು ಪ್ರೀತಿಸದಿದ್ದರೆ ನಿನ್ನನ್ನು ತಂದೆಯಾದ ದೇವರು ಸಹಾ ಪ್ರೀತಿಸುವುದಿಲ್ಲ.

ಜನರು ಮೆಚ್ಚುವ ರೀತಿಯಲ್ಲಿ, ಅವರ ಹಾಗೆ ವೇಷಭೂಷಣದಿಂದ ನೀನು ನಡೆಯುವುದಾದರೆ ಈ ಲೋಕದ ಜನರು ಮಾತ್ರ ನಿನ್ನನ್ನು ಮೆಚ್ಚಿ ಗೌರವಿಸಿ, ಸನ್ಮಾನಿಸುತ್ತಾರೆ. ಆದರೆ ನಿನ್ನನ್ನು ಒಳ್ಳೇ ಮಾರ್ಗದಲ್ಲಿ ನಡೆಸಬೇಕೆಂದು ಆಸೆ ಪಡುತ್ತಿರುವ ಪರಕಲೋದ ದೇವರು ಎಂದಿಗೂ ಇಂತಹ ಕಾರ್ಯಗಳನ್ನು ಮೆಚ್ಚುವುದಿಲ್ಲ ಯಾವ ಕಿರೀಟವನ್ನು ಕೊಡುವುದಿಲ್ಲ. ರಕ್ಷಕನಾದ ಯೇಸುವಿನ ಪ್ರೀತಿ ನಿನ್ನಲ್ಲಿ ನಿನ್ನ ಸ್ವಂತ ಕಾರ್ಯಕ್ಕಾಗಿ ಮಾತ್ರ ಇರಬಾರದು; ಬೆಲೆ ಬಾಳುವ ಮುತ್ತಿನ ರೀತಿಯಲ್ಲಿ ಇರಬೇಕು. ಏನೇ ಬೂಟಾಟಿಕೆಯ ಭಕ್ತಿಯು ನಿನ್ನಲ್ಲಿ ಇರುವುದಾದರು ಅದನ್ನು ಬಿಟ್ಟು-ಬಿಟ್ಟು, ಯಥಾರ್ಥವಾದ ಭಕ್ತಿಯಿಂದ ಸರ್ವಶಕ್ತನನ್ನು ಪ್ರೀತಿಸು. ನೋಡುವಂತಹ ವ್ಯಕ್ತಿಗಳಿಗೆ ನಿನ್ನ ಎಲ್ಲಾ ಕಾರ್ಯಗಳು ಸಹಜವಾಗಿ, ಸತ್ಯವಾಗಿ ಕಂಡುಬರಲಿ.

ಪ್ರೀತಿಯ ದೇವರ ಮಗುವೇ ನಿನ್ನ ಸ್ವಂತಕಾರ್ಯಗಳಿಗೆ ಸಮಯವನ್ನು ಹೆಚ್ಚು ನೀಡುತ್ತೀರುವೆಯಾ! ಗಮನಿಸಿಕೋ

ಉದಾ: 'ಸಿನಿಮಾ' ನೀನು ಇದರ ಮುಂದೆ '4' ಗಂಟೆಗಳು ಕಾಲ ಸಮಯವನ್ನು ಕೊಡುವುದಾದರೆ ಒಂದು ವರ್ಷಕ್ಕೆ 1,460 ಗಂಟೆಗಳು. ಅಬ್ಬಾ------? ಎಷ್ಟೊಂದು ಸಮಯ! ಹಾಗಾದರೆ ನೀನು ಈ ಕೆಳಗಿರುವ ವಿಷಯಕ್ಕೆ ಎಷ್ಟು ಸಮಯ ಕಳೆದಿರುವೆ. ಎಂದು ಒಮ್ಮೆ ಚಿಂತಿಸು

- ನಿನ್ನ 'ಸ್ನೇಹಿತ'ರಿಗಾಗಿ ಎಷ್ಟು ಸಮಯ ಕಳೆಯುತ್ತಿರುವೆ?
- ನಿನ್ನ 'ಕುಟುಂಬ'ದವರೊಟ್ಟಿಗೆ ಎಷ್ಟು ಸಮಯ ಕಳೆಯುತ್ತಿರುವೆ?
- ನೀನು 'ಒಂಟಿಯಾಗಿ ಆಲೋಚನೆ'ಯಲ್ಲಿ ಎಷ್ಟು ಸಮಯ ಕಳೆಯುತ್ತಿರುವೆ?
- ನಿನ್ನ 'ಸ್ವಂತ ಕೆಲಸ ಕಾರ್ಯ'ಕ್ಕಾಗಿ ಎಷ್ಟು ಸಮಯ ಕಳೆಯುತ್ತಿರುವೆ?
- ನೀನು ನಿನ್ನನ್ನು 'ತೃಪ್ತಿ'ಪಡಿಸುವುದಕ್ಕಾಗಿ ಎಷ್ಟು ಸಮಯ ಕಳೆಯುತ್ತಿರುವೆ?
- ನಿನ್ನನ್ನು ಈ ಲೋಕದಲ್ಲಿ 'ಪ್ರೀತಿಸುವವರಿ'ಗಾಗಿ ಎಷ್ಟು ಸಮಯ ಕಳೆಯುತ್ತಿರುವೆ?
- ನಿನ್ನ 'ಶೃಂಗಾರ'ಕ್ಕಾಗಿ ಎಷ್ಟು ಸಮಯ ಕಳೆಯುತ್ತಿರುವೆ?
- ನೀನು ನಿನ್ನ 'ಮೊಬೈಲ್'ನಲ್ಲಿ ಎಷ್ಟು ಸಮಯ ಕಳೆಯುತ್ತಿರುವೆ?
- ನೀನು 'ನಿದ್ದೆ' ಮಾಡುವುದಕ್ಕೆ ಎಷ್ಟು ಸಮಯ ಕಳೆಯುತ್ತಿರುವೆ?

➢ನೀನು 'ಶಾಪಿಂಗ್' ಅಂತ ಹೇಳಿ ಅದಕ್ಕಾಗಿ ಎಷ್ಟು ಸಮಯ ಕಳೆಯುತ್ತಿರುವೆ?
➢ನೀನು 'ಟ್ರಿಪ್', 'ಟೂರ್', 'ಪಿಕ್‌ನಿಕ್' ಅಂತ ಹೇಳಿ ಎಷ್ಟು ಸಮಯ ಕಳೆಯುತ್ತಿರುವೆ?

ಈ ರೀತಿ ನಿನ್ನ ಕೆಲಸಕ್ಕೆ ಮಾತ್ರ ನೀನು ಸೈ ಅನ್ನುವುದಾದರೆ, ಕರ್ತನ ಕಾರ್ಯವನ್ನು ನೀನು ಯಾವಾಗ ಮಾಡುವೆ ಎಂದು ನೀನೇ ಹೇಳು.

ಇದನ್ನೆಲ್ಲಾ ನೀನೇ ಯೋಚಿಸಿ ನೋಡು, ಇದಕ್ಕಾಗಿ ನೀನು ನಿನ್ನ ಜೀವನದಲ್ಲಿ ಎಷ್ಟು ಹೊತ್ತು ಸಮಯವನ್ನು ಸುಮ್ಮ-ಸುಮ್ಮನೆ ವ್ಯರ್ಥವಾಗಿ ಕಳೆಯುತ್ತಿರುವಿ ಎಂದು. ಯಾವ-ಯಾವದಕ್ಕೆ ಎಷ್ಟು ಸಮಯ ಕೊಟ್ಟಿದ್ದೀಯಾ ಎಂದು ಲೆಕ್ಕ ಮಾಡಿ ನೋಡು. ಒಂದು ದಿನ ಪರಲೋಕದ ದೇವರು ನಿನ್ನ ಬಳಿಯಲ್ಲಿ ಒಂದು ಪ್ರಶ್ನೆ ಕೇಳುತ್ತಾರೆ! ನೀನು ನಿನ್ನ ಜೀವನದಲ್ಲಿ ನಿನ್ನನ್ನು ಸೃಷ್ಟಿಮಾಡಿದ ಕರ್ತನಾದ ಯೇಸುವಿನ ಪ್ರೀತಿಗಾಗಿ ಎಷ್ಟು ಸಮಯ ಕಳೆದಿರುವೆ ಎಂದು? ಆಗ ನಿನ್ನ ಉತ್ತರ ಏನಾಗಿರಬಹುದು ಎಂದು ಒಮ್ಮೆ ಚಿಂತಿಸಿ ನೋಡು.

ನಿನ್ನ ದೃಷ್ಟಿಯಲ್ಲಿ ಕರ್ತನಿಗಾಗಿ ಕೊಟ್ಟ ಸಮಯ ಒಂದು ವರ್ಷಕ್ಕೆ ಕನಿಷ್ಠ ಪಕ್ಷ '100' ಗಂಟೆಗಳಾದರೂ ಬರಬಹುದಾ? ಒಂದು ವರ್ಷಕ್ಕೆ '8,760' ಗಂಟೆಗಳಿದೆ, ಇದರಲ್ಲಿ ನಿನ್ನನ್ನು ಪ್ರೀತಿಮಾಡುವ ಕರ್ತನಿಗೆ ನಿನ್ನ ಸಮಯ '100' ಅಥವಾ '10' ಅಥವಾ '1' ಅಥವಾ '0' ಆಗಿದೆಯಾ? ನಿನ್ನ ಉತ್ತರವೇನಾಗಿದೆ ನಿನ್ನನ್ನು ಸೃಷ್ಟಿಮಾಡಿದ ಕರ್ತನಿಗೆ ಈಗಲೇ ಮೊಣಕಾಲಾಕಿ ಕ್ಷಮಾಪಣೆಯನ್ನು ಬೇಡಿಕೋ.

ನೀನು ಕೆಲಸ ಮಾಡುವಂಥಹ ಕಂಪನಿಯಲ್ಲಿ ಹೆಚ್ಚು ದುಡಿಯುವುದಾದರೆ ನಿನ್ನ ಮುಖಾಂತರ ಹೆಚ್ಚು ಲಾಭ ಕಂಪನಿ ಹೊಂದಿಕೊಳ್ಳುತ್ತದೆ. ಅದರಲ್ಲಿ ಸಿಗುವಂತಹ ಒಂದು ಭಾಗ ನಿನಗೆ ಅವರು ಸಂಬಳವಾಗಿ ಕೊಡುತ್ತಾರೆ. ಅದೇ ರೀತಿ ನೀನು ದುಡಿಯದೇ ಹೋದರೇ ಕಂಪನಿಯಿಂದ ಹೊರಹಾಕುತ್ತಾರೆ. ಕಂಪನಿ ಕೊಡುವ ಸಂಬಳದಿಂದ ನಿನ್ನ ಜೀವನ ನಡೆಸುವುದಕ್ಕಾಗಿ ಮತ್ತು ಒಳ್ಳೇ ಹೆಸರು ಬರುವುದಕ್ಕಾಗಿ ಹೆಚ್ಚು ದುಡಿದು ಆ ಕಂಪನಿ ಮಾಲಿಕನಿಗೆ ನೀನು ಆಳಾಗಿ ತಗ್ಗಿಸಿಕೊಂಡು ನಡೆಯುತ್ತಿರುವೆ ಅಲ್ಲವೇ.

ಹಾಗಾದರೆ ನೀನು ರಕ್ಷಕನಾದ ಯೇಸುವಿಗಾಗಿ ಪ್ರಯಾಸಪಟ್ಟರೆ ಪರಲೋಕದಿಂದ ನಿನಗೆ ಸಂಬಳ ಸಿಗುತ್ತದೆ. ಲೋಕಕ್ಕಾಗಿ ಲೋಕದ ಆಢಂಬರಕ್ಕಾಗಿ

ನೀನು ಕಷ್ಟ-ಪಟ್ಟು ದುಡಿಯುವುದು ಅವಶ್ಯವಾಗಿರುವ ಪ್ರಕಾರ, ನಿನ್ನಲ್ಲಿ ಇರುವ ಕರ್ತನಾದ ಯೇಸುವಿನ ಪ್ರೀತಿಯನ್ನು 'ಸತ್ಯಮಾರ್ಗದ ಪ್ರೀತಿ'ಯನ್ನು ಸಾರುವುದೂ ಮತ್ತೂ ಅವಶ್ಯವಾಗಿದೆ ಎಂಬುದನ್ನು ಮರೆತುಹೋಗುತ್ತಿದ್ದೀಯಾ. ಕರ್ತನಿಂದ ನೀನು ಹೊಂದಿದ ಆಶೀರ್ವಾದವನ್ನು ನೆನೆಸಿ ಒಂದೇ ಮನಸ್ಸುಳವರಾಗಿ ಸಮಾಧಾನದಿಂದ ಆತನ ಪ್ರೀತಿಯನ್ನು ಸಾರುತ್ತಾ ಅನೇಕರನ್ನು ಆತನ ಪ್ರೀತಿಯಲ್ಲಿ ನಿಲ್ಲಿಸಲು ಪ್ರಯತ್ನಿಸು.

ಕರ್ತನು ನಿನಗೆ ಒಳ್ಳೇ ದಾರಿಯನ್ನು ತೋರಿಸುತ್ತಾ, ಪ್ರೀತಿಯನ್ನು ಕೊಡುವ ಸ್ನೇಹಿತನಾಗಿದ್ದಾನೆ, ಆತನು ಎಂದಿಗೂ ನಿನ್ನ ಮೇಲೆ ದಬ್ಬಾಳಿಕೆ ಮಾಡುವುದಿಲ್ಲ. ನಿನಗೆ ಕಷ್ಟ ಕಾಲದಲ್ಲಿ ಸಹಾಯಮಾಡುವನು. ಒಳ್ಳೇ-ಒಳ್ಳೇ ಸಲಹೆಗಳನ್ನು ನೀಡುತ್ತಾ ಉತ್ತಮವಾದ ಮಾರ್ಗದಲ್ಲಿ ನಡೆಸುತ್ತಾನೆ. 'ಸತ್ಯಮಾರ್ಗದ ಪ್ರೀತಿ'ಯನ್ನು ಸಾರಲು ಕರ್ತನು ನಿನ್ನನ್ನು ಯೋಗ್ಯನ/ಳ/ನ್ನಾಗಿ ಆಯ್ಕೆ ಮಾಡಿಕೊಂಡಿರ ಬೇಕಾದರೆ ನಿನ್ನ ಕಾರ್ಯಗಳು ಈ ಹೊತ್ತಿನಿಂದಲೇ ಉತ್ತಮವಾದ ರೀತಿಯಲ್ಲಿ ಬದಲಾವಣೆಯಾಗಿ ಮುಂದುವರೆದು 'ಪ್ರೀತಿಯ ಯಶಸ್ಸ'ನ್ನು ಹೊಂದಿಕೊಳ್ಳಲಿ.

ಪ್ರಿಯ ದೇವರ ಮಗುವೇ, ನಿನ್ನ ಆಸಕ್ತಿಯನ್ನು ಕರ್ತನ 'ಸತ್ಯಮಾರ್ಗದ ಪ್ರೀತಿ'ಯನ್ನು ಪ್ರಕಟಪಡಿಸುವುದಕ್ಕಾಗಿ ಹೆಚ್ಚಿಸು.

**"ರಕ್ಷಕನಾದ ಯೇಸುಕ್ರಿಸ್ತನು ನಿಶ್ಚತವಾಗಿ ನಿನ್ನ ಸಂಗಡ ಇರುವನು" ಆಮೆನ್.**

# 8. ವಂಚನೆಯ ಪ್ರೀತಿ

"ನಾನು ನಿಮಗೆ ಒಂದು ಒಗಟನ್ನು ಹೇಳುತ್ತೇನೆ; ಹೇಳಿದರೆ ನಿಮಗೆ ಮೂವತ್ತು ದುಪ್ಪಟ್ಟಿಗಳನ್ನೂ ಮೂವತ್ತು ವಸ್ತ್ರಗಳನ್ನೂ ಕೊಡುವೆನು. ನಿಮ್ಮಿಂದ ಆಗದೆ ಹೋದರೆ ನೀವು ನನಗೆ ಮೂವತ್ತು ದುಪ್ಪಟ್ಟಿಗಳನ್ನೂ ಮೂವತ್ತು ವಿಶೇಷ ವಸ್ತ್ರಗಳನ್ನೂ ಕೊಡಬೇಕು ಅನ್ನಲು ಅವರು ಅವನಿಗೆ–ನಿನ್ನ ಒಗಟನ್ನು ಹೇಳು, ಕೇಳೋಣ ಎಂದಾಗ "ತಿಂದು ಬಿಡುವಂಥದರಿಂದ ತಿನ್ನ ತಕ್ಕದ್ದು ದೊರಕಿತು; ಕ್ರೂರವಾದದ್ದರಿಂದ ಮಧುರವಾದದ್ದು ಸಿಕ್ಕಿತು" ಎಂದು ಹೇಳಿದನು. (ನ್ಯಾಯ 14:12–14)

ಕರ್ತನು ನಿನ್ನಲ್ಲಿ ಒಂದು ಆಶೀರ್ವಾದ ಇಟ್ಟಿದ್ದರೆ ಯಾವ ವ್ಯಕ್ತಿಯಿಂದಲೂ ನಿನಗೆ ಸೋಲು ಸಿಗುವುದಿಲ್ಲ ಯಾವಾಗಲೂ ಜಯಶಾಲಿಯಾಗಿ ನಿಲ್ಲುತ್ತೀಯಾ! ಆ ಆಶೀರ್ವಾದವೇ ನಿನ್ನನ್ನು ಕಾಣುವ ಜನರಿಗೆ ಭಯವನ್ನು ಉಂಟುಮಾಡುತ್ತದೆ.

ಇಂತಹ ಆಶೀರ್ವಾದದ ನಿಧಿಯು ಸಂಸೋನನಲ್ಲಿ ಇತ್ತು. ಅದಕ್ಕಾಗಿಯೇ ಕರ್ತನ ಬಲದಲ್ಲಿ ಅವನು ಬೆಳೆಯುತ್ತಾ ಬಂದನು. ಇವನು 'ಜೊರ್ಗಾ' ಎಂಬ ಊರಲ್ಲಿ 'ದಾನ್' ಕುಲದವನಾದ 'ಮಾನೋಹ' ಎಂಬ ಕುಟುಂಬದಲ್ಲಿ ಜನಿಸಿದನು. ಆದರೆ ಇವನ ಜನನ ವಿಶೇಷವಾದದ್ದು.

ಏನೆಂದರೆ, ಇವನ ತಂದೆ–ತಾಯಿಗಳಿಗೆ ಅನೇಕ ವರ್ಷಗಳು ಮಕ್ಕಳು ಇರಲಿಲ್ಲ. ಮಾನೋಹನ ಹೆಂಡತಿಯ ಬಳಿ ಯೆಹೋವನ ದೂತನು ಪ್ರತ್ಯಕ್ಷನಾಗಿ– "ಇಗೋ, ಬಂಜೆಯಾಗಿ ಮಕ್ಕಳಿಲ್ಲದಿರುವ ನೀನು ಗರ್ಭವತಿಯಾಗಿ ಮಗನನ್ನು ಹೆರುವಿ; ಆದದರಿಂದ ಜಾಗರೂಕತೆಯಿಂದಿರು; ದ್ರಾಕ್ಷಾರಸವನ್ನಾಗಲಿ ಬೇರೆ ಯಾವ ಮಧ್ಯವನ್ನಾಗಲಿ ಕುಡಿಯದಿರು; ಯಾವ ನಿಷಿದ್ಧ ಪದಾರ್ಥವನ್ನೂ ಊಟಮಾಡದಿರು. ನೀನು ಗರ್ಭವತಿಯಾಗಿ ಹೆರುವ ಮಗನ ತಲೆಯ ಮೇಲೆ ಕ್ಷೌರದ ಕತ್ತಿಯನ್ನು ಉಪಯೋಗಿಸಲೇಬಾರದು; ಅವನು ಹುಟ್ಟಿದಂದಿನಿಂದ ದೇವರಿಗೆ ಪ್ರತಿಷ್ಠಿತ

ನಾಗಿರುವನು; ಇಸ್ರಾಯೇಲ್ಯರನ್ನು ಫಿಲಿಷ್ಟಿಯರ ಕೈಯಿಂದ ಬಿಡಿಸುವದಕ್ಕೆ ಮೂಲ ಕಾರಣನಾಗಿರುವನು." ಎಂದು ಹೇಳಿದನು.

ಈ ರೀತಿ ದೊಡ್ಡ ಆಶೀರ್ವಾದದಿಂದ ಸಂಸೋನನು ಹುಟ್ಟಿದನು. ಇವನಿಗೆ ಈ ರೀತಿಯ ಆಶೀರ್ವಾದವು ಅವನ ಮೇಲೆ ಇದ್ದ ಕಾರಣ ಅವನು ತಂದೆ-ತಾಯಿಯೊಟ್ಟಿಗೆ 'ತಿಮ್ನಾ' ಊರಿಗೆ ಹೊರಟು ಅಲ್ಲಿನ ದ್ರಾಕ್ಷಾತೋಟಗಳ ಬಳಿಗೆ ಬಂದಾಗ ಒಂದು ಪ್ರಾಯದ ಸಿಂಹವು ಗರ್ಜಿಸುತ್ತಾ ಅವನೆದುರಿಗೆ ಬಂದಿತು. ಅವನ ಕೈಯಲ್ಲಿ ಏನೂ ಇಲ್ಲದಿದ್ದರೂ ಯೆಹೋವನ ಆತ್ಮವು ಪಕ್ಕನೆ ಅವನ ಮೇಲೆ ಬಂದದ್ದರಿಂದ ಆ ಸಿಂಹವನ್ನು ಹೋತಮರಿಯನ್ನೋ ಎಂಬಂತೆ ಸೀಳಿಬಿಟ್ಟನು. ಈ ಸಂಗತಿ ತಂದೆ-ತಾಯಿಗಳಿಗೆ ತಿಳಿಸಲಿಲ್ಲ. ನೋಡಿ ಎಂತಹ ಅದ್ಭುತವಾದ ಭಯಂಕರವಾದ ಆಶೀರ್ವಾದ ಅವನ ಮೇಲೆ ಇತ್ತು.

ಪ್ರಿತಿಯ ದೇವರ ಮಗುವೇ, ನಿನ್ನಲ್ಲಿ ಎಂತಹ ಆಶೀರ್ವಾದ ಇರುತ್ತದೆ ಎಂದು ನೀನು ಅದನ್ನು ಗ್ರಹಿಸಿಕೊಳ್ಳದೇ ಸ್ವಂತ ಆಲೋಚನೆಗಳಿಂದ ನಡೆದುಕೊಂಡು ಸತ್ಯದೇವರ ಪ್ರೀತಿಯನ್ನು ಮರೆತುಹೋಗುತ್ತಿರುವೆಯಾ! "ದೇವರು ನಿನಗೆ ಆಶ್ರಯದುರ್ಗವಾಗಿದ್ದಾನೆ; ಆತನು ಇಕ್ಕಟ್ಟಿನಲ್ಲಿ ನಿನಗೆ ವಿಶೇಷ ಸಹಾಯಕನು ಆಗಿದ್ದಾನೆ. ಆದದರಿಂದ ಭೂಮಿಯು ಮಾರ್ಪಟ್ಟರೂ ಬೆಟ್ಟಗಳು ಸಮುದ್ರದಲ್ಲಿ ಮುಣುಗಿಹೋದರೂ ನಿನಗೇನೂ ಭಯವಿಲ್ಲ. ನಿನ್ನ ಸ್ವಂತ ಬುದ್ಧಿಯನ್ನು ಬಿಟ್ಟು ದೇವರ ಆಶ್ರಯ ಪಡೆದುಕೊಂಡು ಆತನ ಪ್ರೀತಿಯಲ್ಲಿ ಸ್ಥಿರವಾಗಿ ನಿಲ್ಲಲು ಒಪ್ಪಿಸಿಕೊಡು".

ಸಂಸೋನನು 'ತಿಮ್ನಾ' ಊರಿಗೆ ಬಂದು ಆ ಊರಿನ ಸ್ತ್ರೀಯನ್ನು ಮಾತಾಡಿಸಿ ಆಕೆಯನ್ನು ಮೆಚ್ಚಿಕೊಂಡನು. ಕೆಲವು ದಿನಗಳು ಆದ ಮೇಲೆ ಮತ್ತೇ ಆ ಸ್ತ್ರೀಯನ್ನು ನೋಡಲು ಹೋಗುತ್ತಿದ್ದಾಗ ಮೊದಲು ಅವನು ಸೀಳಿಬಿಟ್ಟ ಸಿಂಹವನ್ನು ನೋಡುವುದಕ್ಕೇ ಆ ದಾರಿಯಲ್ಲಿ ಹೋದಾಗ ಸಿಂಹವು ಹೆಣವಾಗಿ ಅದರ ಒಡಲಲ್ಲಿ ಜೇನು ಹುಳಗಳಲ್ಲಿ ಬಂದಿತ್ತು ಅದರಲ್ಲಿ ಜೇನನ್ನೂ ಕಂಡು, ಅದನ್ನು ಕೈಯಲ್ಲಿ ತೆಗೆದುಕೊಂಡು ತಿನ್ನುತ್ತಾ ಹೋದನು; ತನ್ನ ತಂದೆ-ತಾಯಿಗಳಿಗೂ ಸಹಾ ಕೊಟ್ಟನು;

ಅವರೂ ಸಹಾ ಅದನ್ನು ತಿಂದರು. ಆದರೆ ಅದು ತನಗೆ ಸಿಂಹದ ಒಡಿಲಲ್ಲಿ ಸಿಕ್ಕಿತೆಂಬುದನ್ನು ಅವರಿಗೆ ತಿಳಿಸಲಿಲ್ಲ.

ಇದು ತುಂಬ ಆಶ್ಚರ್ಯಗೊಳಿಸುತ್ತದೆ. ಸಾಮಾನ್ಯವಾದ ಮನುಷ್ಯನಿಂದ ಅಸಾಧ್ಯ; ಆದರೆ ಕರ್ತನಿಂದ ಈ ರೀತಿ ಆಶೀರ್ವಾದ ಹೊಂದಿದವರಿಗೆ ಸಾಧ್ಯ, ಎಂದು ಈ ದೃಶ್ಯದಿಂದ ತಿಳಿಯಬಹುದು. ನೀನು ಸಹ ಕರ್ತನ ಆಶ್ರಯದಲ್ಲಿ ನೆಲೆಗೊಳ್ಳುವುದಾದರೆ ನಿನ್ನ ಮುಖಾಂತರ ಪರಲೋಕದ ದೇವರು ಅನೇಕ ಅಧ್ಭುತ ಕಾರ್ಯಗಳನ್ನು ಮಾಡುತ್ತಾರೆ. ನಿನ್ನನ್ನು ಕರ್ತನಿಗಾಗಿ ಸಂಪೂರ್ಣವಾಗಿ ಒಪ್ಪಿಸಿಕೊಡು. ಗರ್ಜಿಸುವ ಎಂಥಹ ದುಷ್ಟಕಾರ್ಯಗಳು ನಿನ್ನನ್ನು ಹೆದರಿಸುವಾಗ ನೀನು ಅದಕ್ಕೆ ಭಯಪಡಬೇಕಾಗಿಲ್ಲ; ಯಾಕೆಂದರೆ ಅದನ್ನು ಎದುರಿಸಿ ಕರ್ತನ ನಾಮದಲ್ಲಿ ಜಯಶಾಲಿಯಾಗುವುದಕ್ಕೇ ಕರ್ತನು ನಿನ್ನನ್ನು ಕರೆದಿರುವುದು.

ಸಂಸೋನನ ತಂದೆಯು ಹೆಣ್ಣಿನ ಮನೆಗೆ ಬಂದ ಮೇಲೆ ಸಂಸೋನನು ಯೌವನಸ್ಥರ ಪದ್ಧತಿಯ ಪ್ರಕಾರ ಅಲ್ಲಿ ಔತಣವನ್ನು ಸಿದ್ಧಮಾಡಿಸಿದನು. ಅವರು ಅವನನ್ನು ನೋಡಿದಾಗ ತಮ್ಮಲ್ಲಿಂದ ಮೂವತ್ತು ಮಂದಿಯನ್ನು ಆರಿಸಿ ಅವನ ಜೊತೆಯಲ್ಲಿರಿಸಿದರು. ಆಗ ಸಂಸೋನನು ಆ ಜನರ ಮಧ್ಯದಲ್ಲಿ "ತಿಂದು ಬಿಡುವಂಥದರಿಂದ ತಿನ್ನ ತಕ್ಕದ್ದು ದೊರಕಿತು; ಕ್ರೂರವಾದದ್ದರಿಂದ ಮಧುರವಾದದ್ದು ಸಿಕ್ಕಿತು" ಎಂಬ ಒಗಟನ್ನು ಹೇಳಿ ಏಳು ದಿನಗಳು ಸಮಯವನ್ನು ಅವರಿಗೆ ಕೊಟ್ಟನು. ಆದರೆ ಆ ಒಗಟನ್ನು 3 ದಿನವಾದರೂ ಬಿಚ್ಚಲು ಅಗದೇ ಹೋಯಿತು. ಅವರಿಗೆ ಏನು ಮಾಡಬೇಕು ಎಂದು ದಿಕ್ಕು ತೋಚದೇ ಅವರು ಸಂಸೋನನ ಹೆಂಡತಿ ಹತ್ತಿರ ಹೋಗಿ ನಿನ್ನ ಗಂಡನನ್ನು ಮರುಳುಗೊಳಿಸಿ ಅವನಿಂದ ಒಗಟಿನ ಅರ್ಥವನ್ನು ತಿಳಿದುಕೋ; ಇಲ್ಲವಾದರೆ ನಾವು ನಿನ್ನನ್ನೂ ನಿನ್ನ ತಂದೆಯ ಮನೆಯವರನ್ನೂ ಬೆಂಕಿಯಿಂದ ಸುಟ್ಟುಬಿಡುವೆವು; ನಮಗಿರುವುದೆಲ್ಲವನ್ನೂ ಕಸಕೊಳ್ಳುವುದಕ್ಕೆ ನಮ್ಮನ್ನು ಇಲ್ಲಿಗೆ ಕರಿಸಿದಿರೋ ಎಂದು ಹೇಳಿ ಅವಳನ್ನು ಬೆದರಿಸಿದರು.

ಪ್ರೀತಿಯ ದೇವರ ಮಗುವೇ, ಇಲ್ಲಿ ಸಂಸೋನನಿಗೆ 'ವಂಚನೆಯ ಪ್ರೀತಿ'

ಆರಂಭವಾಯಿತು. ಸಂಸೋನನು ಹಾಕಿರುವ ಒಗಟು ಸಾಮಾನ್ಯವಾದ ಮನುಷ್ಯನ ಮಾತಿನಿಂದ ಬಂದದ್ದು ಅಲ್ಲ; ಅವನ ಹೃದಯದ ಒಳಗೆ ವಾಸವಾಗಿರುವ ದೇವರಾತ್ಮನ ಸಹಾಯದಿಂದ ಬಂದ ಬಲವಾದ ಒಗಟು ಆಗಿದೆ. ಸಾಮಾನ್ಯವಾಗಿ ಲೋಕದ ಭೋಗಗಳನ್ನು ಇಷ್ಟ ಪಡುತ್ತಾ, ಪಾಪದ ಜೀವನತದಲ್ಲಿ ಒಳ್ಳೇಯದನ್ನು ತ್ಯಜಿಸಿ; ಸರ್ವಶಕ್ತನ ಭಯವಿಲ್ಲದೆ ಜೀವನವನ್ನು ನಡೆಸುವಂತಹ ವ್ಯಕ್ತಿಗಳಿಗೆ ಈ ಒಗಟಿನ ರಹಸ್ಯ ಯಾವ ರೀತಿ ತಿಳಿಯುತ್ತದೆ. ಇವರು ಒಗಟಿನ ಅರ್ಥ ಹೇಳಿದರೆ ಸಂಸೋನ 30 ದುಪ್ಪಟ್ಟಿಗಳು, 30 ವಿಶೇಷ ವಸ್ತ್ರಗಳು ಕೊಡುತ್ತೇನೆ ಅಂದನು. ಒಗಟಿನ ಅರ್ಥ ಹೇಳದಿದ್ದರೆ ಅದನ್ನೇಲ್ಲಾ ನೀವೇ ಕೊಡಬೇಕು ಎಂದು ಸಂಸೋನನು ಹೇಳಿರುವ ಮಾತಿನ ಭಯ ಇವರಲ್ಲಿ ಇದ್ದ ಕಾರಣ ಯಾವ ಮಾರ್ಗವೂ ತಿಳಿಯದೇ ಸ್ತ್ರೀಯ ಮುಖಾಂತರ 'ವಂಚನೆಯ ಮಾರ್ಗ'ವನ್ನು ಹುಡುಕಿದರು.

ಸಂಸೋನನ ಹೃದಯದಲ್ಲಿ ಇರುವ ಪ್ರೀತಿ ನಿಜವಾದದ್ದು, ಅದು ಬಹು ತಾಳ್ಮೆಯುಳ್ಳದ್ದು, ದಯೆ ತೋರಿಸುವಂತಹ ಪ್ರೀತಿಯು ಆಗಿತ್ತು. ಆದರೆ ಆ ಸ್ತ್ರೀ 'ವಂಚನೆಯ ಪ್ರೀತಿ'ಯಿಂದ ಉಳಿದಿರುವ ದಿನಗಳವರೆಗೂ ಅವನ ಮುಂದೆ ಅಳುತ್ತಾ ನೀನು ನನ್ನನ್ನು ಪ್ರೀತಿಸುವುದಿಲ್ಲ, ದ್ವೇಷಿಸುತ್ತೀಯಷ್ಟೇ ನನ್ನ ಜನರಿಗೆ ಒಗಟನ್ನು ಹೇಳಿದ್ದೀ, ಅದರ ಅರ್ಥವನ್ನು ನನಗೆ ತಿಳಿಸಲಿಲ್ಲವಲ್ಲಾ ಎಂದು ತೊಂದರೆಪಡಿಸಿದಳು, ಆಗ ಅವನು ನನ್ನ ತಂದೆ–ತಾಯಿಗಳಿಗೇ ಹೇಳಲಿಲ್ಲ; ನಿನಗೆ ಹೇಳುವೆನೋ, ಎಂದು ಉತ್ತರಕೊಟ್ಟನು. ಆದರೆ ಆ ಸ್ತ್ರೀ ಔತಣದ ಮುಂದೆ ಅವನಿಗೆ ಸಮಾಧಾನ ಕೊಡದೇ ಅವನ ಪ್ರೀತಿಯನ್ನು ಅರ್ಥಮಾಡಿಕೊಳ್ಳದೇ ಹೇಳಿಕೊಟ್ಟ ಜನರ ಮಾತನ್ನು ಕೇಳಿಕೊಂಡು ಅಳುತ್ತಲೇ ಇದ್ದಳು; ಏಳನೆಯ ದಿನದಲ್ಲಿ ಬಹಳವಾಗಿ ಪೀಡಿಸಿದ್ದರಿಂದ ಅವಳ ಕಾಟವನ್ನು ಸಹಿಸದೇ ಹೇಳಿಬಿಟ್ಟನು.

ಆ ಸ್ತ್ರೀಯ ಜೊತೆಯಲ್ಲಿ ಇದ್ದ ಜನರು ಹೇಳಿದ ಮಾತಿಗೆ ಕಿವಿಗೊಟ್ಟಳೇ ಹೊರತು ಪ್ರಾಣಕ್ಕೆ–ಪ್ರಾಣವಾಗಿ ಪ್ರೀತಿ ಮಾಡುವ ಗಂಡನನ್ನು ಪ್ರೀತಿಸಲಿಲ್ಲ. ಅವಳು ನಿಜವಾಗಿ ಅವನನ್ನು ಪ್ರೀತಿಸಿರುವುದಾದರೆ ಅವನನ್ನು ಪೀಡಿಸಿ ಒಗಟಿನ ಅರ್ಥವನ್ನು ಕೇಳುತ್ತಿರಲಿಲ್ಲ. ನನ್ನ ಗಂಡ ಎಲ್ಲರ ಮುಂದೆ ಜಯಶಾಲಿಯಾಗಿ ಆ ಬಹುಮಾನವನ್ನು

ಹೊಂದಿಕೊಳ್ಳಲಿ; ನನಗೂ ನನ್ನ ಕುಟುಂಬ ಸಭ್ಯರಿಗೂ ಅದು ಆಶೀರ್ವಾದ ಆಗುತ್ತದೆ ಎನ್ನುವ ಮನೋಭಾವನೇ ಅವಳ ಮನಸ್ಸಿನಲ್ಲಿ ಬರಲಿಲ್ಲ, ಯಾಕೆಂದರೆ ಅವಳ ಹೃದಯದಲ್ಲಿ 'ವಂಚನೆಯ ಪ್ರೀತಿ' ಅಡಕವಾಗಿತ್ತೇ ಹೊರತು ನಿಜವಾದ ಪ್ರೀತಿ ಇರಲಿಲ್ಲ. ಸಂಸೋನನಿಗೆ ನಿಜವಾದ ಪ್ರೀತಿ ಇದ್ದ ಕಾರಣ ಅವನು ಆ ಜನರಲ್ಲಿ ಇದ್ದ ಹಣಕಾಸನ್ನು ಮೋಸದಿಂದ ತೆಗೆದುಕೊಳ್ಳದೇ ಸರ್ವಶಕ್ತನಾದ ದೇವರು ಕೊಟ್ಟಿರುವ ಜ್ಞಾನದಿಂದ ಒಗಟಿನ ಮುಖಾಂತರ ಅದನ್ನು ಪಡೆದುಕೊಳ್ಳಬಹುದು, ನನ್ನ ಹೆಂಡತಿಯು ಯಾವ ಕೊರತೆಯಿಲ್ಲದೆ ಜೀವಿಸುತ್ತಾಳೆ. ಎನ್ನುವ ಕಾರಣದಿಂದ ಅವರಿಗೆ ಒಗಟನ್ನು ಹೇಳಿದನು. ಸ್ತ್ರೀ ಅದನ್ನು ಅರ್ಥಮಾಡಿಕೊಳ್ಳದೇ ಜನರ ಮಾತನ್ನು ಕೇಳಿ ಸಂಸೋನನ್ನು ವಂಚಿಸಿದಳು.

ಪ್ರಿಯ ದೇವರ ಮಗುವೇ, ನಿನಗೂ ಸಹಾ ನಿನ್ನ ಜೊತೆಯಲ್ಲಿ ಇರುವ ವ್ಯಕ್ತಿಗಳ ಮುಖಾಂತರ ವಂಚನೆಗೆ ಒಳಗಾಗುವ ಸಂಧರ್ಭ ಬರುತ್ತದೆ. ಆದರೆ ಕರ್ತನ ಆಶ್ರಯದಲ್ಲಿ ನೀನು ಇರುವಾಗ ಅದು ಅಲ್ಪ ಸಮಯ ನೋವಿಗೆ ಒಳಗಾಗುತ್ತದೆ. ಆದರೆ ನನ್ನ ಕರ್ತನ 'ಶಾಶ್ವತವಾದ ಪ್ರೀತಿ' ನಿನ್ನನ್ನು ಯಾವಾಗಲೂ ಹಿಂಬಾಲಿಸುತ್ತದೆ. ಯಾವ ರೀತಿ 'ಅದನ್ನು ನಾನು ಯಾವ ರೀತಿಯಲ್ಲಿ ಕಂಡುಕೊಳ್ಳಬಹುದು' ಎಂಬ ಪ್ರಶ್ನೆ ನಿನ್ನಲ್ಲಿ ಬರುತ್ತಿರುವುದಾದರೆ ನೀನು ಕರ್ತನ ಮುಖವನ್ನು ದೃಷ್ಟಿಸಿ ಒಂದು ನಿಮಿಷ ಮನಸ್ಸಿನಲ್ಲಿ ಪ್ರಾರ್ಥಿಸಿಕೋ ಆಗ ಆ ವ್ಯಕ್ತಿಯ ಭಾವನೆಯಲ್ಲಿ ಏನಿದೆ ಎಂದು ತಿಳಿದು ಬರುತ್ತದೆ. ನೀನು ಇಂತಹ ವಂಚನೆಗೆ ಒಳಗಾಗಬಾರದು, ಮೊದಲು ನಿನ್ನನ್ನು ದೇವರಿಗೆ 'ಸಜೀವ ಯಜ್ಞವಾಗಿ ಪ್ರತಿಷ್ಠಿಸಿಕೋ' ಮತ್ತು ನಿನ್ನ ಪಾಪಗಳನ್ನು ಕರ್ತನಿಗೆ ಒಪ್ಪಿಸು. ನೀನು ಈ ಲೋಕದಲ್ಲಿ ಬದುಕುವ ಕಾಲದವರೆಗೂ ಒಬ್ಬರಿಂದಲೂ ವಂಚನೆಗೆ ಒಳಗಾಗಬಾರದು, ನಿನ್ನ ಜೊತೆಯಲ್ಲಿ ಇರುವ ಸ್ನೇಹಿತರು, ಬಂಧುಮಿತ್ರರು, ಮನೆಯವರು, ಇನ್ನು ಅನೇಕ ಜನರಿಂದ ವಂಚನೆಯ ಪ್ರೀತಿಗೆ ಒಳಗಾಗಿ ನಿನಗೆ ಇರುವಂತಹದ್ದನ್ನು ವ್ಯರ್ಥವಾಗಿ ನಷ್ಟಮಾಡಿಕೊಳ್ಳದಂತೆ, ಕರ್ತನ ಬಳಿಗೆ ಪೂರ್ಣವಾಗಿ ತಿರುಗಿಕೊಂಡು ನಿನ್ನ ಜೀವನವನ್ನೇ ಬದಲಾಯಿಸಿಕೋ. ಮತ್ತು ನೀನು ಸಹ ಯಾರನ್ನೂ 'ವಂಚನೆಯ ಪ್ರೀತಿ'ಯಿಂದ ಪ್ರೀತಿಸಿ ಮೋಸಮಾಡಬೇಡ. ಯಾಕೆಂದರೆ ನಿನಗೆ ವಂಚನೆಯಾದರೆ ನಿನಗೆ ಎಷ್ಟು ನೋವಾಗುತ್ತದೆ. ನೀನು ಯಾರಿಗೆ ವಂಚನೆ ಮಾಡುತ್ತೀಯೋ ಅವರಿಗೂ

ಹಾಗೇ ನೋವಾಗುತ್ತದೆ ಎಂದು ಅರ್ಥಮಾಡಿಕೋ.

ಸಂಸೋನನಿಗೆ "ಜೇನಿಗಿಂತ ಸಿಹಿಯಾದದ್ದು ಯಾವುದು? ಸಿಂಹಕ್ಕಿಂತ ಕ್ರೂರವಾದದ್ದಾವುದು" ಎಂದು ಆ ಫಿಲಿಷ್ಟಿಯವರು ಹೇಳಿಬಿಟ್ಟರು. ಆದರೆ ಇದು ಸಾಮಾನ್ಯವಾದ ವ್ಯಕ್ತಿಯ ಜ್ಞಾನದಿಂದ ಬರಲು ಸಾಧ್ಯವಿಲ್ಲ; ಅದಕ್ಕಾಗಿ ವಂಚನೆಯಿಂದ ಸಂಸೋನನಿಗೆ ಮದುವೆಯಾಗಬೇಕಾದ 'ಸ್ತ್ರೀ'ಯ ಮುಖಾಂತರ ಕಳ್ಳತನವಾಗಿ ಸಂಸೋನನಿಂದ ಉತ್ತರ ಹೇಳಿಸಿಕೊಂಡು, ಸಂಸೋನನು ಬರುವಾಗ ತಮಗೆ ಆ ಒಗಟಿನ ಅರ್ಥ ಗೊತ್ತಾಯಿತೆಂಬಂತೆ ನಟಿಸಿ ಉತ್ತರ ಹೇಳಿದರು. ಆದರೆ ಸಂಸೋನನಿಗೆ ಗೊತ್ತಿತ್ತು ಇದು ಪರಲೋಕದ ದೇವರ ಸಹಾಯದಿಂದಲೇ ಹೊರತು ಮನಷ್ಯನ ಜ್ಞಾನದಿಂದ ಹೇಳಲು ಆಗುವುದಿಲ್ಲ ಎಂದು.

ಸಂಸೋನನ ತಾಯಿಗೆ ದೇವರಲ್ಲಿ ಅಪಾರವಾದ ಭಕ್ತಿ ಇದ್ದ ಕಾರಣವೇ ದೇವರಾತ್ಮನಿಂದ ಅಂತಹ ಮಗನನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ನೀನು ಸಹಾ ಆ ರೀತಿಯಲ್ಲಿ ಕರ್ತನಿಗೆ ಭಯಭಕ್ತಿಯುಳ್ಳವರಾಗಿ ನಿನ್ನ ಕುಟುಂಬದಲ್ಲಿ ಜೀವಿಸುವುದಾದರೆ ಖಂಡಿತವಾಗಿ ನಿನ್ನನ್ನು ಯಾರೂ ವಂಚಿಸುವುದಿಲ್ಲ. ವಂಚಿಸಿದರೂ ಅದರಿಂದ ನಿನಗೆ ಯಾವ ನಷ್ಟ ಆಗುವುದಿಲ್ಲ. ಯಾಕೆಂದರೆ ಯೆಹೋವನ ಆತ್ಮ ಸಂಸೋನನ ಮೇಲೆ ಇದ್ದ ಕಾರಣ ಅವನು ಅಷ್ಕೆಲೋನಿಗೆ ಹೋಗಿ ಮುವತ್ತು ಮಂದಿಗೆ 'ಮೂವತ್ತು ದುಪ್ಪಟ್ಟಿಗಳನ್ನೂ ಮೂವತ್ತು ವಿಶೇಷ ವಸ್ತ್ರಗಳನ್ನೂ' ತೆಗೆದುಕೊಂಡು ಒಗಟನ್ನು ಬಿಚ್ಚಿದವರಿಗೆ ತಂದುಕೊಟ್ಟನು, ಅದೇ ರೀತಿಯಲ್ಲಿ ನಿನಗೆ ಅಲ್ಪ ವಂಚನೆಯಾದರೂ, ಕರ್ತನು ನಿನ್ನ ಕೂಡ ಇರುವುದಾದರೆ ನಿನಗೆ ಮತ್ತೊಂದು ಕಡೆಯಿಂದ ಅಧಿಕವಾಗಿ ಲಾಭವಾಗುತ್ತದೆ.

"ಯಾರೂ ದೀಪವನ್ನು ಹಚ್ಚಿ ಮರೆಯಲ್ಲಾಗಲಿ ಕೊಳಗದೊಳಗಾಗಲಿ ಇಡುವುದಿಲ್ಲ. ಮನೆಯೊಳಕ್ಕೆ ಬರುವವರಿಗೆ ಬೆಳಕು ಕಾಣಿಸುವಂತೆ ಆ ದೀಪವನ್ನು ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ. ನಿನ್ನ ಕಣ್ಣು ದೇಹಕ್ಕೆ ದೀಪವಾಗಿದೆ. ನಿನ್ನ ಕಣ್ಣು ನೆಟ್ಟಗಿರುವಾಗ ಅದರಂತೆ ನಿನ್ನ ದೇಹವು ಬೆಳಕಾಗಿರುವುದು. ಅದು ಕೆಟ್ಟದ್ದಾಗಿರುವಾಗ

ಅದರಂತೆ ನಿನ್ನ ದೇಹವು ಕತ್ತಲಾಗಿರುವುದು. ಆದದರಿಂದ ನಿನ್ನೊಳಗಿರುವ ಬೆಳಕೇ ಕತ್ತಲಾಗಿದೆಯೋ ಏನೋ ನೋಡು. ನಿನ್ನ ದೇಹವೆಲ್ಲಾ ಬೆಳಕಾಗಿದ್ದು ಒಂದು ಭಾಗದಲ್ಲಿಯೂ ಕತ್ತಲಿಲ್ಲದ್ದಾಗಿದ್ದರೆ ದೀಪವು ಹೊಳೆದು ನಿನಗೆ ಬೆಳಕನ್ನು ಕೊಡುವ ಕಾಲದಲ್ಲಿ ಹೇಗೋ ಹಾಗೆಯೇ ಅದು ಪೂರ್ಣವಾಗಿ ಬೆಳಕಾಗಿರುವುದು" (ಲೂಕ 11:33–36) ಅದಕ್ಕಾಗಿ ಸಂಸೋನನ ಜ್ಞಾನ ನಮಗೆ ಈಗಲೂ ಪ್ರಕಟವಾಗುತ್ತಿದೆ.

ಒಗಟೆಂದರೆ, ಗೂಢಾರ್ಥ ಹೊಂದಿರುವ ಒಂದು ಹೇಳಿಕೆಯಾಗಿತ್ತು. ಪ್ರಾಚೀನಕಾಲದಲ್ಲಿ ಒಬ್ಬ ವ್ಯಕ್ತಿಯ ಜ್ಞಾನ ತಿಳುವಳಿಕೆಯನ್ನು ಪರೀಕ್ಷಿಸಲು ಒಗಟುಗಳನ್ನು ಉಪಯೋಗಿಸಲಾಗುತ್ತಿತ್ತು. ಈ ಒಗಟುಗಳ ಅರ್ಥವನ್ನು ತಿಳಿಸುವವರಿಗೆ ಬೆಲೆ–ಬಾಳುವ ಉಡುಗೊರೆಗಳೊಂದಿಗೆ ಸನ್ಮಾನಿಸಿ ಉನ್ನತ ಪದವಿಯನ್ನು ಕೊಡುತ್ತಿದ್ದುದ್ದು ವಾಡಿಕೆಯಾಗಿತ್ತು. ಅದಕ್ಕೆ ಸಂಸೋನ ಆ ಜನರ ಬುದ್ಧಿ ಹೇಗೆ ಇದೆ ಎಂದು ತಿಳಿಯಲು ಒಗಟು ಹಾಕಿದನು. ಆದರೆ ಒಗಟನ್ನು ಬಿಡಿಸಲು ಆಗದೇ ವಂಚನೆಯಿಂದ ವಸ್ತ್ರಗಳನ್ನು ಪಡೆದುಕೊಂಡರು. ನೋಡಿರಿ. ಕರ್ತನು ಸಂಸೋನನ ಮೇಲೆ ಎಂತಹ ಅಪಾರವಾದ ಪ್ರೀತಿಯನ್ನು ಇಟ್ಟಿದ್ದಾನೆ. ದೇವರಾತ್ಮನಿಂದ ಬರುವ ಒಗಟುಗಳನ್ನು ಯಾರೂ ಸಾಮಾನ್ಯವಾಗಿ ತಿಳಿಯಬಾರದು ಎಂದು ಸಂಸೋನನಿಗೆ ಮಾತ್ರ ಆ ಒಗಟಿನ ಅರ್ಥವನ್ನು ತಿಳಿಸಿದ್ದಾನೆ. ಯಾಕೆಂದರೆ ಕರ್ತನು ಕೊಡುವ ಆಶೀರ್ವಾದವು ಬೆಲೆಯುಳ್ಳದ್ದು ಆಗಿದೆ. ಅದಕ್ಕಾಗಿ ಸಾಮಾನ್ಯ ಮನುಷ್ಯನು ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಇದನ್ನು ಓದುವಾಗ ಎಲ್ಲರಿಗೂ ಅರ್ಥವಾಗುತ್ತದೆ.

ಕರ್ತನು ಯಾವುದೇ ಆಶೀರ್ವಾದವನ್ನು ಕೊಡುವಾಗ ಅದರ ಬೆಲೆ ತಿಳಿಯದೇ, ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳದೇ ಕರ್ತನು ಕೊಡುವ ಎಷ್ಟೋ ಆಶೀರ್ವಾದಗಳನ್ನು ಕಳೆದುಕೊಂಡು ಇಂತಹ ವಂಚನೆಗೆ ಅನೇಕರು ಒಳಗಾಗುತ್ತಿದ್ದಾರೆ, ಕರ್ತನು ನಿನಗೆ ಒಂದು ತಲಾಂತನ್ನು ಅಂದರೆ ಸಂಸೋನನಿಗೆ ಕೊಟ್ಟ ರೀತಿಯಲ್ಲಿ ಒಗಟು, ಜ್ಞಾನ, ಅಧಿಕಾರ, ಜವಾಬ್ದಾರಿ ಏನೇ ಆಗಿರಬಹುದು ಅಂತಹ ಆಶೀರ್ವಾದವನ್ನು ಕೊಟ್ಟಿರುವುದಾದರೆ ಕರ್ತನಿಗಾಗಿ ಉಪಯೋಗಿಸು. ನಿನ್ನನ್ನು

ಪ್ರೀತಿಸುವಂತ ವ್ಯಕ್ತಿಗಳ ಮಾತಿಗೆ ಮರುಳಾಗಿ ಸಂಸೋನನ ರೀತಿಯಲ್ಲಿ ಸುಮ್ಮನೆ 'ವಂಚನೆಯ ಪ್ರೀತಿ'ಗೆ ಒಳಗಾಗಿ ಕತ್ತಲೆಯೆಂಬ ಮಾರ್ಗದಲ್ಲಿ ನಡೆದು ಬಾಧೆಗಳನ್ನು ಅನುಭವಿಸುತ್ತಾ ಸುತ್ತ-ಮುತ್ತಲಿರುವವರ ಮಧ್ಯದಲ್ಲಿ ತಲೆಬಾಗಿ ಯಾರಿಗೂ ಬೇಡದವಳಾ/ನಾ/ಗಿ ನಿಲ್ಲಬೇಡ. ಒಂದು ವೇಳೆ ನೀನು ಹಾಗೆ ನಿಂತಿರುವುದಾದರೆ ನಿನ್ನ ಮನಸ್ಸನ್ನು ಬದಲಾಯಿಸಿಕೊಂಡು ಈಗಲೇ ಬೆಳಕಿನ ಮಾರ್ಗಕ್ಕೆ ತಿರುಗಿಕೋ; ಸಂಸೋನನ ರೀತಿಯಲ್ಲಿ ವಂಚನೆ ಪ್ರೀತಿಗೆ ಪೀಡಿತಳಾ/ನಾ/ಗದೇ ನಿಜವಾದ ಕರ್ತನ ಪ್ರೀತಿಗೆ ನಿನ್ನ ಹೃದಯವನ್ನು ಒಪ್ಪಿಸಿಕೊಟ್ಟು 'ಪ್ರೀತಿಯ ಯಶಸ್ಸ'ನ್ನು ಹೊಂದಲು ಪ್ರಯತ್ನಿಸು. ಆಗ ನೀನು ಹೊಂದಿರುವ ನಿನ್ನ ಹೃದಯದ ಬೆಳಕು ಅನೇಕರಿಗೆ ಒಳ್ಳೇ ಮಾರ್ಗವನ್ನು ತೋರಿಸಲು ದಾರಿ ದೀಪವಾಗುತ್ತದೆ.

**"ಕರ್ತನು ನಿನಗೆ ಆಶ್ರಯವಾಗಿಯೂ ಗುರಾಣಿಯಾಗಿಯೂ ಇದ್ದಾನೆ." ಆಮೆನ್**

# 9. ಮರಣ ಗೆದ್ದ ಪ್ರೀತಿ

**"ಯೆಹೂದ್ಯರ ಅರಸನೇ, ನಿನಗೆ ನಮಸ್ಕಾರ ಎಂದು ಆತನಿಗೆ ವಂದನೆಮಾಡಿ ಬೆತ್ತದಿಂದ ಆತನ ತಲೆಯ ಮೇಲೆ ಹೊಡೆದು ಆತನ ಮೇಲೆ ಉಗುಳಿ ಆತನ ಮುಂದೆ ಮೊಣಕಾಲೂರಿ ಅಡ್ಡಬಿದ್ದರು. ಹೀಗೆ ಆತನನ್ನು ಪರಿಹಾಸ್ಯ ಮಾಡಿದ ಮೇಲೆ ಆ ಒಲ್ಲಿಯನ್ನು ತೆಗೆದು ಆತನ ಬಟ್ಟೆಗಳನ್ನು ಹೊದಿಸಿ ಆತನನ್ನು ಶಿಲುಬೆಗೆ ಹಾಕುವದಕ್ಕೆ ತೆಗೆದುಕೊಂಡು ಹೋದರು." (ಮಾರ್ಕನು 15:18-20)**

ಕನ್ಯೆಯಾದ ಮರಿಯಳು ಪವಿತ್ರಾತ್ಮದಿಂದ ಗರ್ಭಧರಿಸಿ ರಕ್ಷಕನಾದ ಯೇಸುವನ್ನು ಹಡೆದಳು. ಆ ಮಗುವನ್ನು ನೋಡಲು ಮೂಡಣದೇಶದ ಜೋಯಿಸರು ಯೆರೂಸಲೇಮಿಗೆ ಬಂದು-ಯೆಹೋದ್ಯರ ಅರಸನಾಗಿ ಹುಟ್ಟಿದವನು ಎಲ್ಲಿದ್ದಾನೆ? ಆತನನ್ನು ನೋಡಿ ಆತನಿಗೆ ಅಡ್ಡಬಿಳುವುದಕ್ಕೆ ಬಂದೆವು ಎಂದ ಜನರು ಕರ್ತನನ್ನು ಶಿಲುಬೆಗೆ ಹಾಕುವಾಗ ಸುಮ್ಮನಿದ್ದರು. ಆದರೂ ನಮ್ಮ ರಕ್ಷಕನು ತಂದೆಯ ಆಜ್ಞೆಗೆ ವಿಧೇಯನಾಗಿ ಮರಣದಷ್ಟು ನೋವುಗಳು ಬಂದರೂ ಪ್ರೀತಿಯಿಂದ ಎಲ್ಲವನ್ನು

ಸಹಿಸಿಕೊಂಡನು. ಯೇಸುವಿನ ಮೇಲೆ ಒಂದೊಂದು ಅಪರಾಧಗಳನ್ನು ಹೇಳುವಾಗಲೂ; ಏನನ್ನೂ ಹೇಳದೇ ಮೌನವಾಗಿ ಸಹಿಸಿಕೊಂಡನು. ಆತನನ್ನು '5' ಸ್ಥಳದಲ್ಲಿ '7' ಭಾರಿ ವಿಚಾರಿಸಲು ನಿಲ್ಲಿಸುವಾಗ ಆತನ ಬಳಿಯಲ್ಲಿ ಒಂದು ಅಪರಾಧವನ್ನೂ ಕಂಡುಹಿಡಿಯಲು ಯಾರಿಗೂ ಆಗಲಿಲ್ಲ.

ಮಹಾಯಾಜಕರು ಹಿರಿಯರೂ ಆತನ ಮೇಲೆ ದೂರು ಹೇಳುತ್ತಿರುವಾಗ ಆತನು ಏನೂ ಉತ್ತರ ಕೊಡಲಿಲ್ಲ. ಆಗ ಪಿಲಾತನು ಆತನನ್ನು – ಇವರು ನಿನ್ನ ಮೇಲೆ ಎಷ್ಟು ಸಾಕ್ಷಿ ಹೇಳುತ್ತಾರೆ, ನೀನು ಏನೂ ಹೇಳುವುದಿಲ್ಲವೋ? ಎಂದು ಕೇಳಿದನು. ಆತನು ಅವನಿಗೆ ಏನು ಉತ್ತರ ಕೊಡಲಿಲ್ಲ. ಅದನ್ನು ನೋಡಿ ದೇಶಾಧಿಪತಿಯು ಬಹಳ ಆಶ್ಚರ್ಯಪಟ್ಟನು. ಹೀಗಿರಲಾಗಿ ಅವರು ಕೂಡಿಬಂದ ಸಮಯದಲ್ಲಿ ಪಿಲಾತನು ಹೊಟ್ಟೆಕಿಚ್ಚಿನಿಂದ ಆತನನ್ನು ಒಪ್ಪಿಸಿಕೊಟ್ಟಿದ್ದಾರೆಂದು ತಿಳಿದು–ನಿಮಗೆ ಯಾರನ್ನು ಬಿಟ್ಟುಕೊಡಬೇಕೆನ್ನುತ್ತೀರಿ? ಬರಬ್ಬನನ್ನೋ? ಕ್ರಿಸ್ತನೆನಿಸಿಕೊಳ್ಳುವ ಯೇಸುವನ್ನೋ ಎಂದು ಅವರನ್ನು ಕೇಳಿದನು.

ಇಲ್ಲಿ ಗಮನಿಸಿರಿ :– ಕರ್ತನಾದ ಯೇಸುಕ್ರಿಸ್ತನ ಬಳಿ ಯಾವ ತಪ್ಪನ್ನು ಪಿಲಾತನು ಕಾಣದೆ ಇರುವಾಗ, ರಕ್ಷಕನನ್ನು ಬಿಡುಗಡೆ ಮಾಡಲು ಪ್ರಯತ್ನಿಸಿದನು, ಆಗ ಪಸ್ಕ ಹಬ್ಬವಾದುದರಿಂದ ಯಾರಾದರೂ ಒಬ್ಬ ಕೈದಿಯನ್ನು ಬಿಡುಗಡೆ ಮಾಡುವ ಪದ್ಧತಿ ಇದ್ದ ಕಾರಣ ಯೇಸುಕ್ರಿಸ್ತನನ್ನು ಬಿಡಿಸುವ ಸಲುವಾಗಿ ಯಾರನ್ನು ಬಿಡುಗಡೆ ಮಾಡಬೇಕು! ಬರಬ್ಬನನ್ನೋ ಅಥವಾ ಯೇಸುವನ್ನೋ ಎಂದು ಜನರ ಬಳಿಯಲ್ಲಿ ಪಿಲಾತನು ಪ್ರಶ್ನೆ ಕೇಳಿದಾಗ ಜನರು ಬರಬ್ಬನನ್ನು ಕೇಳಿಕೊಂಡರು.

ಇಲ್ಲಿ ರಕ್ಷಕನಾದ ಯೇಸುವಿನ ಪ್ರೀತಿಯನ್ನು ಗಮನಿಸಿ, ಆತನು ಶಿಕ್ಷೆಗೆ ಒಳಗಾದರೂ ಸಹ ತನ್ನ ಮರಣದ ಮೂಲ ಕಬರಬ್ಬನಿಗೆ ಪ್ರೀತಿಯನ್ನೇ ತೋರಿಸಿದನು.

ಆತನನ್ನು ಚಾವಟಿಯಿಂದ '39' ಚಡಿಏಟುಗಳನ್ನು ಹೊಡೆದರು. ರೋಮಾನಾಣ್ಯದಿಂದ ಆತನ ಗಡ್ಡ ಮೀಸೆಯನ್ನು ಕಿತ್ತರು, ತಲೆ ಮೇಲೆ ಮುಳ್ಳಿನ ಕಿರೀಟ

ಇಟ್ಟರು. ಕೈ-ಕಾಲುಗಳಲ್ಲಿ ಮೊಳೆಹೊಡೆದರು. ಆತನು ಹಾಕಿಕೊಂಡಿದ್ದ ವಸ್ತ್ರವನ್ನು ಚೀಟು ಹಾಕಿದರು. ಇದೆಲ್ಲಾ ಸಾಲದೇ ಆತನ ಪ್ರೀತಿ ತಿಳಿಯದೇ ಆ ಜನರು ಹೇಳಿದರು- 'ಅವನು ಮತ್ತೊಬ್ಬರನ್ನು ರಕ್ಷಿಸುವನು, ತನ್ನನ್ನು ರಕ್ಷಿಸಿ ಕೊಳ್ಳಲಾರನು. ಅವನು ಇಸ್ರಾಯೇಲಿನ ಅರಸನಲ್ಲವೇ. ಈಗ ಶಿಲುಬೆಯಿಂದ ಇಳಿದು ಬಂದರೆ ಅವನಲ್ಲಿ ನಂಬಿಕೆಯಿಟ್ಟೆವು. ದೇವರಲ್ಲಿ ಭರವಸವಿಟ್ಟಿದ್ದಾನೆ, ದೇವರು ಅವನಲ್ಲಿ ಇಷ್ಟಪಟ್ಟರೆ ಈಗ ಅವನನ್ನು ಬಿಡಿಸಲಿ; ತಾನು ದೇವರ ಮಗನಾಗಿದ್ದೇನೆಂದು ಹೇಳಿದನಲ್ಲಾ' ಎಂದು ಹಾಸ್ಯ ಮಾಡಿದರು. ಹಾಸ್ಯ ಮಾಡಿದ ಜನರಿಗೆ ಗೊತ್ತಿಲ್ಲ. ಇಂತಹ ಘೋರವಾದ ಮರಣಕ್ಕೆ ಅವರು ಯಾರನ್ನು ಒಪ್ಪಿಸಿಕೊಡುತ್ತಿದ್ದಾರೆ ಎಂದು.

"ದೇವರು ಈ ಲೋಕದ ಮೇಲೆ ಎಷ್ಟೋ ಪ್ರೀತಿಯನ್ನು ಇಟ್ಟು, ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ನಿನಗಾಗಿ ನಿನ್ನ ಪಾಪ-ಶಾಪಕ್ಕೆ ಬರಲಿರುವ ಶಿಕ್ಷೆಯನ್ನು ತಪ್ಪಿಸುವುದಕ್ಕಾಗಿ ತನ್ನ ಮಗನನ್ನು ಬಲಿಯಾಗಲು ಒಪ್ಪಿಸಿಕೊಟ್ಟನು;" ತಂದೆಯ ಪ್ರೀತಿಯು 'ಶಾಶ್ವತವಾದ ಪ್ರೀತಿ'ಯಾಗಿಯೂ 'ಅಪಾರವಾದ ಪ್ರೀತಿ'ಯಾಗಿಯೂ ನಮ್ಮ ಮಧ್ಯದಲ್ಲಿ ನಿರಂತರವಾಗಿ ಮಾತನಾಡುತ್ತಲೇ ಇರುತ್ತದೆ.

ನೀನು ಮಾಡುವ ಪಾಪವು ನಿನಗೆ ಕೊಡುವ ಸಂಬಳ ನಿತ್ಯ ಮರಣವಾಗಿದೆ. ಈ ಮರಣಕ್ಕೆ ನೀನು ಸೇರಬಾರದು ಎಂದು ರಕ್ಷಕನಾದ ಯೇಸುಕ್ರಿಸ್ತನು ನಿನ್ನ ಪಾಪ ಪರಿಹಾರಕ್ಕಾಗಿ, ತಂದೆಯ ಚಿತ್ತವನ್ನು ನೆರವೇರಿಸುವ ಸಲುವಾಗಿ ಜನರ ಮಧ್ಯದಲ್ಲಿ ಪರಿಹಾಸ್ಯಕ್ಕೆ ಒಳಗಾಗಿ, ಘೋರವಾಗಿ ಶಿಕ್ಷಿಸಲ್ಪಡಲು ತನ್ನನ್ನು ಒಪ್ಪಿಸಿಕೊಟ್ಟು ಶಿಲುಬೆಯ ಮರಣಹೊಂದಿದನು. ಆ ಮರಣವಾದರೋ ಆತನನ್ನು ಜಯಿಸಲು ಸಾಧ್ಯವೇ ಇಲ್ಲ ಅದಕ್ಕಾಗಿ ಆತನು ಪುನರುತ್ಥಾನ ಹೊಂದಿದ್ದಾನೆ. ಮರಣವನ್ನು ಜಯಿಸಿ ಎದ್ದು ಮೂರು ದಿನ ನಂತರ ಅದ್ಭುತವಾಗಿ ಹೊರ ಬಂದನು. ಮತ್ತು ನಿನ್ನ ಪಾಪವನ್ನು ಆತನು ಹೊತ್ತುಕೊಂಡು ನಿನ್ನನ್ನು ನಿತ್ಯಜೀವಕ್ಕೆ ಬಾಧ್ಯಳ/ನ/ನ್ನಾಗಿ ಮಾಡಿದ್ದಾನೆ. ಮರಣದಷ್ಟು ಶೋಧನೆಯಾದರೂ ತಂದೆ ನಿನ್ನ ಮೇಲೆ ಇಟ್ಟ ಪ್ರೀತಿಯಿಂದಲೇ ಅದನ್ನು ಜಯಿಸಲು ಕ್ರಿಸ್ತನಿಗೆ ಸಾಧ್ಯವಾಯಿತು.

"ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ" (ರೋಮಾ 12:2)

ಪ್ರೀತಿಯ ದೇವರ ಮಗುವೇ, ನೀನು ಯಾವ ಪ್ರೀತಿಯಲ್ಲಿ ಹೆಜ್ಜೆ ಇಡುತ್ತಾ ಜೀವನವನ್ನು ಸಾಗಿಸುತ್ತೀ–ಲೋಕದ ಪ್ರೀತಿಯೋ ಅಥವಾ ಪರಲೋಕದ ಪ್ರೀತಿಯೋ? ಈ ಲೋಕವು ನಿನ್ನನ್ನು ತನ್ನ ಸ್ವಭಾವಕ್ಕೆ ತಕ್ಕಂತೆ ರೂಪಾಂತರಿಸಲು ಯಾವಾಗಲೂ ನಿನ್ನ ಮನಸ್ಸಿನ ಮೇಲೆ ದಾಳಿ ಮಾಡಿ ನಿನ್ನ ಆಲೋಚನೆಯನ್ನು ಹತೋಟಿಗೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ಲೋಕದ ಆಲೋಚನೆಗೆ ನೀನು ಒಳಗಾಗುವ ಸಂಧರ್ಭದಲ್ಲಿ ತನ್ನ ನಡುವಳಿಕೆಗೆ ಅನುಗುಣವಾಗಿ ನಿನ್ನನ್ನು ಮಾರ್ಪಡಿಸಿಕೊಂಡು ಎಲ್ಲಾ ಕಾರ್ಯಗಳಲ್ಲೂ ಸೈತಾನನು ನಿನ್ನ ವಿಚಾರದಲ್ಲಿ ಅವಕಾಶ ತೆಗೆದುಕೊಳ್ಳುತ್ತಿರುತ್ತಾನೆಂದು ನೀನು ತಿಳಿದುಕೊಳ್ಳಬೇಕು. ನಿನ್ನ ಮೇಲೆ ಅಧಿಕಾರವನ್ನು ನೀನು ಯಾರಿಗೆ ಒಪ್ಪಿಸಿಕೊಡುತ್ತಿರುವೆ ಎಂದು ನೀನು ಚಿಂತಿಸು;

ಪ್ರೀತಿಯ ದೇವರ ಮಗುವೇ, ನೀನು ನಿನ್ನ ಇಷ್ಟದ ಪ್ರಕಾರ ನಡೆದು ಯಾವ ಮಾರ್ಗದಲ್ಲಿ ಹೋಗುತ್ತಿದ್ದೀಯೆಂದು ನಿನಗೇ ಅರಿವಾಗದೇ, ಸೈತಾನನ ದಾಸತ್ವಕ್ಕೆ ಒಳಪಟ್ಟು ಯಾರ ಮಾತನ್ನು ಕೇಳದೇ ಇಷ್ಟ ಬಂದ ರೀತಿಯಲ್ಲಿ ನೀನು ಮಾಡುತ್ತಿರುವುದೇ ಸರಿ ಎಂದು ನೀನು ನಡೆಯುವುದಾದರೆ 'ಆತನ 'ಮರಣಗೆದ್ದ ಪ್ರೀತಿ' ನಿನಗೆ ಅರ್ಥವಾಗುವುದಕ್ಕೆ ಸಾಧ್ಯವೇ ಇಲ್ಲ. ಮಾಡಬಾರದ ಕೆಲಸಗಳನ್ನು ಮಾಡಿ ಮನೆಯವರ ಮಧ್ಯದಲ್ಲಿ, ಸ್ನೇಹಿತರ ಮಧ್ಯದಲ್ಲಿ, ಜನರ ಮಧ್ಯದಲ್ಲಿ ಅವಮಾನಕ್ಕೆ ಒಳಗಾಗುವ ಸಂಧರ್ಭಗಳು ನಿನಗೆ ಎದುರಾಗುತ್ತಿರುವುದಾ, ಅಥವಾ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ತೀರ್ಮಾನಿಸುತ್ತಿದ್ದೀಯಾ, ಹಾಗಾದರೆ ನೀನು ಈ ಲೋಕವು ಕೊಡುವ ಪ್ರೀತಿಗೆ ಮರುಳಾಗಿದ್ದೀಯಾ, ಸೈತಾನನ ದಾಸತ್ವದಲ್ಲಿದ್ದೀಯಾ, ಈ ರೀತಿ ನೀನು ಜೀವಿಸುತ್ತಿರುವುದಾದರೆ ನಿನಗೆ ಸಿಗುವುದು ನಿತ್ಯಮರಣವಾಗಿದೆ ಎಂದು ನಿನಗೆ ಎಚ್ಚರಿಸುತ್ತೇನೆ.

ರಕ್ಷಕನಾದ ಯೇಸುಕ್ರಿಸ್ತನು ಸಹಾ ಮನುಷ್ಯನ ಹಾಗೆ ಈ ಲೋಕದಲ್ಲಿ

ಜೀವಿಸಿದನು. ಆತನು ಮೂವತ್ತಮೂರುವರೆ ವರ್ಷ ಬದುಕಿದನು. ಸಹೋದರ/ರಿ/ಯೊಟ್ಟಿಗೆ ಅನ್ಯೋನ್ಯತೆ ಐಕ್ಯತೆಯಿಂದ ಬೆಳೆದರು. ತಂದೆ-ತಾಯಿಗೆ ಮೂವತ್ತು ವರ್ಷ ಸಹಾಯಕನಾಗಿದ್ದನು. ನಂತರ ದೀಕ್ಷಾಸ್ನಾನ ಮಾಡಿಸಿ ಕೊಂಡು '40' ದಿನಗಳಕಾಲ ಉಪವಾಸ ಮಾಡಿ, ಸೈತಾನನಿಂದ ಶೋಧಿಸಲ್ಪಟ್ಟು ಗೆದ್ದು, ದೇವದೂತರಿಂದ ಸತ್ಕರಿಸಲ್ಪಟ್ಟನು. ನಂತರ ಸೇವೆಗಾಗಿ ಹೊರಡುವಾಗ 12 ಶಿಷ್ಯರನ್ನು ಮಾಡಿಕೊಂಡನು. ಆದರೆ ಈ ಲೋಕದ ಆಸೆಗೆ ಮಾತ್ರ ಮನಸ್ಸು ಕೊಡಲಿಲ್ಲ. ಅವನು ಯಾವಾಗಲೂ ತಂದೆ ದೇವರು ಹೇಳುವಂಥಹ ಮಾತುಗಳಿಗೆ ಕಿವಿಗೊಡುತ್ತಾ ಉತ್ತಮವಾದ ಮಾಧರಿಯಲ್ಲಿ ಸೇವೆ ಮಾಡಿದನು. ಅವನನ್ನು ನೋಡುವವರು ಒಳ್ಳೆ ಗುಣಗಳನ್ನು ಹೊಂದಿಕೊಂಡು ಉತ್ತಮವಾದ ಮಾರ್ಗದಲ್ಲಿ ನಡೆಯುತ್ತಿದ್ದರು. ಯೇಸುವು ಜನರೊಟ್ಟಿಗೆ ಪರಲೋಕ ರಾಜ್ಯವನ್ನು, ಸಮಾಧಾನದ ರಾಜ್ಯವನ್ನು ಕುರಿತು ಮಾತಾಡುತ್ತಿದ್ದನು. "ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ಮಾತು ಬರಬಾರದು, ಎಲ್ಲಾ ದ್ವೇಷ, ಕೋಪ, ಕ್ರೋದ, ಕಲಹ ದೂಷಣೆ ಇವುಗಳನ್ನು ಸಕಲ ವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರಮಾಡಿರಿ (ಎಫೆ 4:31) ಎಂದು ಬೋಧಿಸುತ್ತಿದ್ದನು. ಅವನ ಮಾತುಗಳನ್ನು ಕೇಳುವ ಜನರು ವಿಮೋಚನೆ ಹೊಂದಿಕೊಳ್ಳುತ್ತಿದ್ದರು. ಎಲ್ಲರೊಟ್ಟಿಗೂ ಸಮಾಧಾನದಿಂದ ಮಾತಾಡಿ ಅವರಲ್ಲಿ ತಂದೆಯ ಪ್ರೀತಿಯನ್ನು ತುಂಬುತ್ತಿದ್ದನು. ಪರಲೋಕದ ದೇವರ ಚಿತ್ತವನ್ನು ಮಾತ್ರ ಪ್ರತಿದಿನ ತನ್ನಲ್ಲಿ ನೆರವೇರಲು ಒಪ್ಪಿಸಿಕೊಟ್ಟನು. ಮರಣದ ಸಮಯದಲ್ಲಿಯೂ 'ನನ್ನ ಚಿತ್ತವಲ್ಲ ನಿನ್ನ ಚಿತ್ತ' ಎಂದು ತಂದೆಗೆ ತನ್ನನ್ನು ಒಪ್ಪಿಸಿಕೊಟ್ಟನು. ರಕ್ಷಕನಾದ ಯೇಸುಕ್ರಿಸ್ತನನ್ನು ನಮ್ಮೆಲ್ಲರ ಜೀವನಕ್ಕೆ ಮಾದರಿಯಾಗಿ ಇಟ್ಟುಕೊಂಡು ಜೀವಿಸುವುದಾದರೆ ಮಾತ್ರ ಆತನ ಹಾಗೆ ತಂದೆಗೆ ಪ್ರಿಯವಾಗಲು ಸಾಧ್ಯವಾಗುತ್ತದೆ.

ನೀನು ಯಾವ ರೀತಿ ನಿನ್ನ ಜೊತೆಯವರಿಗೆ ಪ್ರೀತಿಯನ್ನು ತುಂಬುತ್ತೀ; ನಿನ್ನಿಂದ ಯಾರಿಗೆ ಒಳ್ಳೇ ಕಾರ್ಯಗಳು ಅಥವಾ ಪ್ರೀತಿಯು ಸಿಕ್ಕುತ್ತದೆ; ಮತ್ತು ಎಷ್ಟು ಜನರಿಗೆ ಶಾಂತಿ-ಸಮಾಧಾನ ಸಿಗುತ್ತದೆ ಎಂದು ನಿನ್ನ ಮನಸ್ಸು ನಿನಗೆ ಸಾಕ್ಷಿ ಕೊಡುತ್ತಿದೆ. ನೀನು ಕರ್ತನ 'ಮರಣಗೆದ್ದ ಪ್ರೀತಿ'ಯಲ್ಲಿ ಶಾಶ್ವತವಾಗಿ ನಿತ್ಯಜೀವವನ್ನು ಹೊಂದಲು, ಅದರ ಎಲ್ಲಾ ಆಶೀರ್ವಾದವನ್ನು ಹೊಂದಿಕೊಳ್ಳುತ್ತಿದ್ದೀಯಾ! ಗಮನಿಸು. ಮರಣವನ್ನು ಗೆದ್ದ

ಯೇಸುವಿನ ಮಾರ್ಗದಲ್ಲಿ ನೀನು ನಡೆಯುವುದಾದರೆ ಖಂಡಿತವಾಗಲೂ ಈ ಲೋಕದ ಪ್ರೀತಿಗೆ ಮರುಳಾಗಿ ಜೀವನವನ್ನು ಹಾಳು ಮಾಡಿಕೊಳ್ಳುವುದಿಲ್ಲ.

"ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನೇ ಸೇರಿಸಿಕೊಳ್ಳುವವನಾಗಿದ್ದಾನೆ." (ಮತ್ತಯ 10:40) ಕರ್ತನ ಮರಣಗೆದ್ದ ಪ್ರೀತಿಯನ್ನು ಸಾರಲು ಮುಂದೆ ಸಾಗು ಎಂದು. ನೀನು ಯಾರ ಪ್ರೀತಿಗಾಗಿಯೂ ಎದುರು ನೋಡದೇ ಮುಂದೆ ಸಾಗು. ರಕ್ಷಕನಾದ ಯೇಸುವಿನ ಮಾರ್ಗದಲ್ಲಿ ನೀನು ನಡೆಯುವಾಗ ಆತನು ನಿನ್ನ ಹೃದಯದಲ್ಲಿ ಸದಾಕಾಲ ವಾಸಮಾಡುತ್ತಾನೆ. ನೀನು ಹೋಗುವ ಸ್ಥಳಗಳಲ್ಲಿಯೂ ಸಹಾ ನಿನ್ನೊಂದಿಗೆ ಬರುತ್ತಾನೆ. ನಿನಗೆ ಮರಣದ ರೀತಿ ಯಾವ ಶೋಧನೆ ಬಂದರೂ ರಕ್ಷಕನಾದ ಯೇಸುವಿನ ಪ್ರೀತಿ ಆ ಶೋಧನೆಯನ್ನು ದಾಟಲು ಸಹಾಯ ಮಾಡುತ್ತದೆ.

"ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು. ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು." (ಮತ್ತಾಯ 10:32,33)

ನೀನು ಮನುಷ್ಯರ ಮುಂದೆ ಯೇಸುವಿನ ಮಗು ಎಂದು ಸಾಕ್ಷಿ ಕೊಡಬೇಕು, ನೀನು ಹಾಗೆ ಸಾಕ್ಷಿ ಕೊಡದಿದ್ದ ಪಕ್ಷದಲ್ಲಿ 'ಮರಣಗೆದ್ದ' ಯೇಸುವೂ ಸಹಾ ತಂದೆ ಮುಂದೆ ಪರಲೋಕದಲ್ಲಿ ನಿನ್ನ ಬಗ್ಗೆ ಸಾಕ್ಷಿ ಕೊಡುವುದಿಲ್ಲ. ಯಾಕೆಂದರೆ ಯೇಸುವಿನ ಮಗು ಎಂದು ಹೇಳುವುದಕ್ಕೆ ಭಯಪಡವಂತಹ ಕ್ರೈಸ್ತರು ಇದ್ದಾರೆ. ಅವರು ಜನರ ಮಧ್ಯ ಬಹಿರಂಗವಾಗುವುದಕ್ಕೇ ಇಷ್ಟಪಡುವುದಿಲ್ಲ. ಒಳಗೊಂದು ಹೊರಗೊಂದು ಕಪಟ-ಭಕ್ತಿ ತೋರಿಸುವ . ಮಕ್ಕಳಿಗೇ ಕರ್ತನು ಹೀಗೆ ಎಚ್ಚರಿಸಿದ್ದಾರೆ. ನಿನಗಾಗಿ ಮರಣಗೆದ್ದ ಯೇಸುವನ್ನು ನೀನು ಯಾವ ಕಾರಣಕ್ಕೂ ನಿನ್ನ ಯಾವ ಕಾರ್ಯದಲ್ಲಿಯೂ ಮಾತಿನಲ್ಲಿಯೂ ತೊರೆಯಬೇಡ. ರಕ್ಷಕನು ಅದನ್ನು ಸಹಿಸುವುದಿಲ್ಲ. ನೀನು ಯೇಸುವನ್ನು ಅಂಗೀಕರಿಸಿ 'ಮರಣಗೆದ್ದ ಪ್ರೀತಿ'ಯನ್ನು ಅರ್ಥಮಾಡಿಕೊಂಡಿರುವುದಾದರೆ 'ಯೇಸುವಿನ ಮಗು' ಎಂದು ಹೇಳುವುದಕ್ಕೆ

ಹಿಂಜರಿಯಬೇಡ. ಧೈರ್ಯವಾಗಿ ಆತನ 'ಮರಣಗೆದ್ದ ಪ್ರೀತಿ'ಯನ್ನು ಎಲ್ಲರಿಗೂ ತಿಳಿಸು.

ಅದನ್ನು ಬಿಟ್ಟು ಐಶ್ವರ್ಯದ ಕಡೆಗೆ ನಿನ್ನ ದೃಷ್ಟಿಯನ್ನು ಹರಿಸಬೇಡ, ಸೈತಾನನು ತಾನು ಬಿತ್ತಿದ ವಿಷದ ಬೀಜಕ್ಕೆ ನೀರು ಹೊಯ್ಯುವ ವೇಳೆ ಇದೇ "ನಿನ್ನ ದೃಷ್ಟಿಯು ಧನದ ಮೇಲೆ ಎರಗುತ್ತದೋ? ಧನವು ಅಷ್ಟರೊಳಗೆ ಮಾಯವಾಗುವುದು. ಆಕಾಶದ ಕಡೆಗೆ ಹಾರುವ ಹದ್ದಿನಂತೆ ಅದು ರೆಕ್ಕೆಗಳನ್ನು ಕಟ್ಟಿಕೊಂಡಿದೆ." (ಜ್ಞಾನೋ 23:5) ಎಂದು ದೇವರು ಎಚ್ಚರಿಕೆಯ ಮಾತನ್ನು ಕೊಟ್ಟಿದ್ದಾರೆ.

ಅದರಲ್ಲಿ 'ಕಣ್ಣು' ತುಂಬ ಮುಖ್ಯವಾದ ಅಂಶವಾಗಿದೆ. ಯಾಕೆಂದರೆ ನಿನ್ನನ್ನು ಈ ಲೋಕದ ಪಾಪಕ್ಕೆ ಸಿಕ್ಕಿಕೊಳ್ಳಲು ಅದು ಮಾರ್ಗದರ್ಶಿಯಾಗಿದೆ. ನೀನು ಐಶ್ವರ್ಯವನ್ನಾಗಲಿ ಈ ಲೋಕದ ಸುಖ-ಭೋಗಗಳನ್ನಾಗಲಿ ನೋಡುವಾಗ ಕಣ್ಣಿಂದಲೇ ಮೊದಲು ಇಷ್ಟ ಪಡುವುದು, ಆದರೆ ಅದು ಆಮೇಲೆ ಮನಸ್ಸಿನಲ್ಲಿ ಪರಿವರ್ತನೆ ಬೀರುತ್ತದೆ. ಕಣ್ಣೇ ದೇಹಕ್ಕೆ ದೀಪವಾದ ಕಾರಣ ಕಣ್ಣಿನಿಂದ ನೋಡುವಂತದನ್ನು ಮನಸ್ಸಿಗೆ ಹಾಕಿಕೊಳ್ಳಬಾರದು, ಇಲ್ಲದಿದ್ದರೆ ದೇಹವೆಲ್ಲ ಕತ್ತಲಾಗಿ ನಿತ್ಯಮರಣಕ್ಕೆ ನಿನ್ನನ್ನು ಸೇರಿಸಲು ಅದು ದಾರಿ ಮಾಡಿ ಕೊಡುತ್ತದೆ. ಆದುದರಿಂದ ನಿನ್ನ ಕಣ್ಣಿನಿಂದ ಯಾವುದೇ ಸಣ್ಣ ಪಾಪವಾಗಲಿ ಮಾಡುವುದಕ್ಕೆ ಅವಕಾಶ ಕೊಡಬೇಡ. ನಿನ್ನ ಕಣ್ಣಿನಲ್ಲಿ ಯೇಸುವಿನ ಶಿಲುಬೆಯ ಮರಣಗೆದ್ದ ಪ್ರೀತಿಯನ್ನು ಚಿತ್ರಿಸಿಕೋ, ಆಗ ಸೈತಾನನಿಗೆ ನಿನ್ನ ಮೇಲೆ ಯಾವ ಅಧಿಕಾರ ಇರುವುದಿಲ್ಲ.

ರಕ್ಷಕನು ನಿನಗಾಗಿಯೇ ಎಲ್ಲವನ್ನು ಸಹಿಸಿಕೊಂಡನು. ನೀನು ಕೇಳುವುದಕ್ಕಿಂತ ಅಧಿಕವಾಗಿ, ಯಾರೂ ಕೋಡುವುದಕ್ಕೇ ಆಗದೇ ಇರುವಂತಹ ತ್ಯಾಗವನ್ನು ನಿನಗೋಸ್ಕರ ಆತನು ಮಾಡಿದ್ದಾನೆ. ಆದುದರಿಂದ ನಿನ್ನ ದುಃಖವನ್ನು ನಿನ್ನಿಂದ ತೆಗೆದು ಹಾಕುವುದಕ್ಕೆ ಕರ್ತನಿಗೆ ಇಷ್ಟವಿದೆ ಎಂದು ನೀನು ತಿಳಿದುಕೊಂಡು ಹರ್ಷದಿಂದಿರು. ಸರ್ವಶಕ್ತನು ಮರಣವನ್ನು ಜಯಿಸಿರುವುದು ನಿನಗೋಸ್ಕರ ವಾಗಿಯೇ ಯಾವಾಗಲೂ ನಿನ್ನೊಂದಿಗೆ ಇದ್ದು ಕಣ್ಣೀರು ಒರೆಸುವ ತಾಯಿಯಂತೆ ಜೊತೆಯಲ್ಲಿಯೇ ಇರಲು

ಆತನು ಇಷ್ಟ ಪಡುತ್ತಿದ್ದಾನೆ.

ಇಷ್ಟು ತ್ಯಾಗ ಮಾಡಿರುವ ಒಳ್ಳೇ ಮನಸ್ಸಿರುವಂತ ರಕ್ಷಕನಾದ ಯೇಸುವಿಗಾಗಿ ಏನಾದರೂ ಒಂದು ಸೇವೆಯನ್ನು ಮಾಡಲು ತೀರ್ಮಾನಿಸು. ಆ ಮರಣಗೆದ್ದ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಒಂದು ವೇಳೆ ನಿನ್ನನ್ನು ಹೆತ್ತ ತಾಯಿಯ ಋಣವನ್ನು ನೀನು ತೀರಿಸಬಹುದು; ಆದರೆ ಯೇಸುವಿನ ಪ್ರೀತಿಯ ಋಣವನ್ನು ತೀರಿಸಲು ಸಾಧ್ಯವಿಲ್ಲ. ಯಾಕೆಂದರೆ ನಿನ್ನ ತಾಯಿ 9 ತಿಂಗಳು ಹೊರುತ್ತಾಳೆ, 20 ರಿಂದ 30 ವಯಸ್ಸಿನವರೆಗೂ ನಿನ್ನನ್ನು ಬೆಳೆಸುತ್ತಾಳೆ. ಅವಳ ಜೊತೆಯಲ್ಲಿಯೇ ಇದ್ದಾಗ ಮಾತ್ರ ಜಾಗ್ರತೆಯಿಂದ ನೋಡಿಕೊಳ್ಳುತ್ತಾಳೆ. ಅವಳನ್ನು ಬಿಟ್ಟು ಹೊರಗೆ ಬಂದಾಗ ನಿನ್ನನ್ನು ಯಾರು ನೋಡಿಕೊಳ್ಳುತ್ತಾರೆ. ಒಂದು ವೇಳೆ ನಿನ್ನಿಂದ ತಾಯಿ ದೂರವಾದಾಗ ಜೊತೆಯಲ್ಲಿ ಎಲ್ಲರೂ ಇದ್ದರೂ ತಾಯಿ ಪ್ರೀತಿ ಸಿಗದೇ ತವಕಿಸುವಾಗಲೂ ಸಹ ರಕ್ಷಕನು ನಿನ್ನನ್ನು ಸಂತೈಸುತ್ತಾರೆ. ತಾಯಿಯಾದರೋ ತನಗಿರುವ ಜ್ಞಾನದ ಪ್ರಕಾರ ಲೋಕದ ಪ್ರೀತಿಯನ್ನು ತುಂಬಿ, ಈ ಲೋಕದಲ್ಲಿ ಜೀವಿಸಲು ಒಂದು ಮಾರ್ಗವನ್ನು ತೋರಿಸಿದರು; ಆದರೆ ಸರ್ವಶಕ್ತನಾದ ಯೇಸುಕ್ರಿಸ್ತನು 'ಮರಣಗೆದ್ದ ಪ್ರೀತಿ'ಯನ್ನು ತೋರಿಸಿ ನಿನ್ನನ್ನು ಶಾಶ್ವತವಾದ ಪರಲೋಕದಲ್ಲಿ ಸೇರಿಸಿಕೊಳ್ಳಲು ನೀನು ಸಹ ಮರಣವನ್ನು ಗೆದ್ದು ಆತನ ಪ್ರೀತಿಯಲ್ಲಿ ನಿರಂತರವಾಗಿ ಸೇರಲು ನಿನ್ನನ್ನು ಕರೆಯುತ್ತಿದ್ದಾರೆ.

ಕರ್ತನ ನುಡಿಗನುಸಾರವಾಗಿ ನಿನ್ನ ಹೆಜ್ಜೆಯನ್ನು ದೃಢಪಡಿಸಿಕೋ, ಯಾವ ಅನ್ಯಾಯವೂ ಸಹಾ ನಿನ್ನನ್ನು ಆಳದಂತೆ ಎಚ್ಚರವಾಗಿರು. ಮನುಷ್ಯರು ನಿನ್ನನ್ನು ಪಾಪಕ್ಕೆ ಬೀಳಿಸಲು ಪ್ರೇರೇಪಿಸುವಾಗ ಆತನ ವಾಕ್ಯಗಳನ್ನು ಧ್ಯಾನಿಸು. ಪೂರ್ಣ ಹೃದಯದಿಂದ ವಾಕ್ಯಗಳನ್ನು ಕೈಗೊಂಡು ಹಗಲಿರುಳು ಅದನ್ನು ಓದುತ್ತಾ ಜ್ಞಾನವನ್ನು ಹೊಂದಿಕೊಂಡು, ಸೈತಾನನ ತಂತ್ರಗಳನ್ನು ಎದುರಿಸುವಂತಹ ಬಲವನ್ನು ಪಡೆದುಕೋ, ನೀನು ನಿನ್ನನ್ನೇ ಕರ್ತನ ಸಕಲ ಉತ್ತಮವಾದ ಪ್ರೀತಿಗೆ ಒಪ್ಪಿಸಿಕೊಡು. ಆಗ ಆತನು ನಿನ್ನನ್ನು ಪಾಪ–ಮರಣಗಳಿಗೆ ಕಾರಣವಾದ ನಿತ್ಯಮರಣದಿಂದ ಬಿಡಿಸುವನು.

ಕರ್ತನು ನಿನ್ನನ್ನು ಬಿಡುಗಡೆ ಮಾಡಬೇಕೆಂದು ನಿನಗೋಸ್ಕರ ಕಲ್ವಾರಿ

ಕ್ರೂಜೆಯಲ್ಲಿ ಬಲಿಯಾಗಿದ್ದಾನೆ. ಆತನ ತ್ಯಾಗವು ಮನುಷ್ಯ ಜ್ಞಾನದಿಂದ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ, ಕರ್ತನ ಆತ್ಮನು ನಿನ್ನಲ್ಲಿ ನೆಲೆಗೊಳ್ಳುವಾಗ ಯೇಸುವಿನ ಮರಣಗೆದ್ದ ಪ್ರೀತಿಯು ನಿನಗೆ ಸಂಪೂರ್ಣವಾಗಿ ಅರ್ಥವಾಗುತ್ತದೆ. ಕರ್ತನು ತನ್ನ ಪ್ರಾಣಕೊಟ್ಟು ಪಡೆದಿರುವ 'ಪ್ರೀತಿಯ ಯಶಸ್ಸ'ನ್ನು ಪ್ರತಿ ಮನುಷ್ಯನ ಬಳಿಯಲ್ಲಿ 2019 ವರ್ಷಗಳಿಂದ ಮಾತನಾಡುತ್ತಲೇ ಇದೆ. ಎಷ್ಟೋ ಜನರು ಈ ಪ್ರೀತಿಯನ್ನು ಗ್ರಹಿಸಿಕೊಂಡು ನಿತ್ಯಮರಣದಿಂದ ಪಾರಾದರು. ಆದರೆ ಎಷ್ಟೋ ಜನರಿಗೆ ಈ ಪ್ರೀತಿ ಅರ್ಥವಾಗದೆ ನಿತ್ಯಮರಣವನ್ನು ಹೊಂದಿಕೊಂಡು ನರಳುವವರಾಗಿದ್ದಾರೆ. ನಿನ್ನನ್ನು ನಿತ್ಯಜೀವಕ್ಕೆ ಸೇರಿಸಬೇಕೆಂದು ಕರ್ತನು ಮಾಡಿರುವ ತ್ಯಾಗವನ್ನು ಒಂದು ಭಾರಿ ಸಮಾಧಾನವಾಗಿ ಕುಳಿತುಕೊಂಡು ಚಿಂತಿಸಿ ನೋಡು.

ಪ್ರೀತಿಯ ದೇವರ ಮಗುವೇ, ಕರ್ತನ ತ್ಯಾಗವನ್ನು ಅರ್ಥಮಾಡಿಕೊಳ್ಳದೇ ನಿನ್ನ ಜೀವನವನ್ನು ನಷ್ಟ ಪಡಿಸಿಕೊಳ್ಳಬೇಡ. ದೇವರು ನಿನ್ನೊಂದಿಗಿದ್ದು ಆತನ ತ್ಯಾಗವನ್ನು ಅರ್ಥಮಾಡಿಸಿರುವುದಾದರೆ ಇಂದೇ ಕರ್ತನ ಮರಣಗೆದ್ದ ಪ್ರೀತಿಗಾಗಿ ನಿನ್ನ ಜೀವನವನ್ನು ಸಮರ್ಪಿಸು, ತಂದೆ ದೇವರು ನಿನ್ನನ್ನು ಆಶೀರ್ವದಿಸಲಿ.

**"ಯೆಹೋವನೇ ನೀನು ನೀತಿಸ್ವರೂಪನು" ಆಮೆನ್**

ಸೂಚನೆ :

ಪ್ರೀತಿಯ ದೇವರ ಮಗುವೇ ಆತ್ಮೀಕವಾದ ಪುಸ್ತಕಗಳು ನಿಮ್ಮ ಕೈ ತಲುಪುವಂತೆ ನಾವು ಸತತವಾಗಿ ಪ್ರಯಾಸಪಡುತ್ತಿದ್ದೇವೆ. ಮತ್ತು ಮೀಡಿಯಾ ಮುಖಾಂತರ ನಿಮ್ಮ ಆತ್ಮಕತೆಯನ್ನು ಬೆಳೆಸಲು You Tube Channel open ಮಾಡಿದ್ದೇವೆ. MPM Tejus Parimala ಎಂದು ನಮ್ಮ Channel ಹೆಸರು ನಮ್ಮ Channel ಗೆ Subscribe ಆಗಿ ಮತ್ತು ಅನೇಕರಿಗೆ ಪರಿಚಯ ಪಡಿಸಿರಿ ಮತ್ತು ನಮ್ಮ ಸಭೆಯವತಿಯಿಂದ APP ಮಾಡಿದ್ದೇವೆ MPM Church -PS Tejus ಎಂದು ಅದನ್ನು Download ಮಾಡಿಕೊಳ್ಳಿ ನಿಮಗೆ ಆತ್ಮೀಕವಾದ ಹಾಡುಗಳು ವಿಡಿಯೋಗಳು ಆತ್ಮೀಕ ಪುಸ್ತಕಗಳು ಸ್ತೋತ್ರಗಳು APPನಲ್ಲಿ. ಲಭ್ಯವಿದೆ ಈ ಕನ್ನಡ APP ಕನ್ನಡಿಗರಿಗೆ ಬಃಳ ಉಪಯೋಗವಾಗಿದೆ. ನೀವು APP ಮುಂಖಾಂತರ ನಿಮ್ಮ ಪ್ರಾರ್ಥನಾ ಮನವಿಗಳನ್ನು ಸಹ ತಿಳಿಸಲು ಅನುಕೂಲಮಾಡಿಕೊಡಲಾಗಿದೆ. website ನಲ್ಲಿಯೂ ನೀವು APP ಅನ್ನು ನೋಡಬಹುದು mahimaprathanamandhira.in ಎಂದು Google ನಲ್ಲಿ ಕೊಡುವುದಾದರೆ ನಿಮಗೆ APPನಲ್ಲಿರುವುದನ್ನು ನೀವು ನೋಡಬಹುದು.
ದೇವರು ನಿಮ್ಮನ್ನು ಆಶೀರ್ವದಿಸಲಿ.


# ಲೇಖಕರ ಮಾತು

'ಮಹಿಮಾ ಪ್ರಾರ್ಥನಾ ಮಂದಿರ'ದಿಂದ 'ಪ್ರೀತಿಯ ಯಶಸ್ಸು' ಎನ್ನುವ ಈ ಪುಸ್ತಕದ ಮುಖಾಂತರ ನಿಮ್ಮ ಬಳಿಯಲ್ಲಿ ಕರ್ತನ ಪ್ರೀತಿಯನ್ನು ಹಂಚಿಕೊಳ್ಳಲು ದೇವರು ಕೊಟ್ಟ ಕೃಪೆಗಾಗಿ ನಾನು ಕೃತಜ್ಞತೆ ಉಳ್ಳವಳಾಗಿದ್ದೇನೆ. ಕರ್ತನಾದ ಯೇಸುವಿನ ಪ್ರೀತಿಯನ್ನು ತಿಳಿದ ನಾನು ಆತನಿಗಾಗಿ ನನ್ನ ಜೀವನವನ್ನು ಅರ್ಪಿಸಿ ಆತನು ಕೊಟ್ಟಿರುವ ಈ ಚಿಕ್ಕ ಸೇವೆ ಮುಖಾಂತರವಾಗಿ ಸಾಕ್ಷಿಯಾಗಿ ನಿಂತಿದ್ದೇನೆ. ದೇವರ ವಾಕ್ಯವು ಈ ರೀತಿಯಲ್ಲಿ ಹೇಳುತ್ತದೆ. "ಭೂಮ್ಯಾಕಾಶಗಳು ಅಳಿದು ಹೋದರು ನನ್ನ ಮಾತು ಅಳಿದು ಹೋಗುವುದೇ ಇಲ್ಲ" ಎಂದು.

ನನ್ನ ಕರ್ತನು ಮಾಡಿರುವ ಎಲ್ಲಾ ವಾಗ್ದಾನಗಳನ್ನು ಈ ಹೊತ್ತಿಗೂ ನನ್ನ ಜೀವನದಲ್ಲಿ ಆತನು ನಡೆಸಿಕೊಂಡು ಬರುತ್ತಿದ್ದಾನೆ. ಯಾಕೆಂದರೆ ಆತನ ಪ್ರೀತಿ ವರ್ಣಿಸುವುದಕ್ಕೆ ಸಾಧ್ಯವಿಲ್ಲ. ನೀವು ಸಹ ಈ 'ಪ್ರೀತಿಯ ಯಶಸ್ಸ'ನ್ನು ಓದಿ ಉತ್ತಮವಾದ ಆಶೀರ್ವಾದಗಳನ್ನು ಪಡೆದುಕೊಳ್ಳಬೇಕೆಂದು ಬಯಸುತ್ತೇನೆ. ದೇವರು ತನ್ನ ಪ್ರೀತಿಯಿಂದ ನಿಮ್ಮನ್ನು ತುಂಬಿಸಲಿ ಎಂದು ಹಾರೈಸುತ್ತೇನೆ.

**ನಿಮ್ಮ ಪ್ರಾರ್ಥನಾ ಕೋರಿಕೆಗಳಿಗಾಗಿ ಸಂಪರ್ಕಿಸಿರಿ.**


ಮೊಬೈಲ್ ನಂ: 9900241593
9880245222

ಮಹಿಮಾ ಪ್ರಾರ್ಥನ ಮಂದಿರ (ರಿ)


MPM Tejus Parimala
mahimaprarthanamandhira.in
MPM Church – ps tejus
mahimaprarthanamandhira@gmail.co


**Editor by : Pastor A. Parimala**